


# ಅಖಿಲ ಭಾರತ ಪತ್ರಿಕೆ

## ಆಗಸ್ಟ್ 2023

# ಅವತಾರ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಓಂಕಾರದಲ್ಲಿ ತಾ ಪ್ರತಿಮೆಗೊಂಡು ಸಮ್ಮತಿಯು ಬೃಹದ್–ಭಾಗಿ

**– ಪುಟ್ಟು ಕುಲಕರ್ಣಿ**

**(ಪುಟ 75)**

ಅಖಿಲ ಭಾರತ ಪತ್ರಿಕೆ
ಆಗಸ್ಟ್ 2023
ಸಂಪುಟ: 33 ಸಂಚಿಕೆ: 08

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindocomplex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಪರಿವಿಡಿ

# ಅವತಾರ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅವತಾರ–ತತ್ತ್ವದ ಪಥ** 4
ಅನು: ಪುಟ್ಟು ಕುಲಕರ್ಣಿ

**ಅವತಾರದ ಕ್ರಿಯೆ** 11
ಅನು: ನಾಗಜ್ಯೋತಿ ಮಾನ್ವಿ

**ವಿಶಿಷ್ಟ ಅವತಾರ ಮತ್ತು ವಿಭೂತಿ ಪುರುಷ** 16
ಅನು: ಕಿಶೋರಕುಮಾರ ಕಾಸಾರ

**ಭವಿಷ್ಯದ ಅವತಾರ** 29
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 46
ಅನು: ಜಾನ್ವಿ

**ಶ್ರೀ ಅರವಿಂದರ “ಸಂಸ್ಕೃತ ಸಂಶೋಧನೆ”** 53


**ಅವತಾರ** 74

**ಓಂಕಾರದಲ್ಲಿ ತಾ ಪ್ರತಿಮೆಗೊಂಡು ಸಮ್ಮತಿಯು ಬೃಹದ್–ಭಾಗಿ** 75

**ಕಾಲದಾರ್ಣವದ ತೆರೆತೆರೆಯ ಮೇಲೆ ಇವನೀಗ ತೇಲಿ ತೇಲಿ** 76
ಅನು: ಪುಟ್ಟು ಕುಲಕರ್ಣಿ

# ಸಂಪಾದಕರ ಟಿಪ್ಪಣಿ

ಅವತಾರಗಳ ಸರಣಿಯ ಸಿದ್ಧಾಂತವು ಭಾರತೀಯ ಅಧ್ಯಾತ್ಮಿಕ ಚಿಂತನಗಳಲ್ಲಿ ಅತಿ ಪ್ರಮುಖವಾಗಿರುವ ಪರಿಕಲ್ಪನೆಯಾಗಿದೆ ಮತ್ತು ಇದೇ ಶ್ರೀ ಅರವಿಂದರ ಯೋಗದ ಆಂತರ್ಯವೂ ಆಗಿದೆ. ಆದಾಗ್ಯೂ ಈ ವಿಷಯವಾಗಿ ಇಲ್ಲಿಯವರೆಗೂ ಅಲ್ಪ ಪ್ರಮಾಣದಲ್ಲಿ ಮಾತ್ರ ಚಿಂತನ, ಅಧ್ಯಯನ ನಡೆದಿದೆ. ಈ ಸಂಚಿಕೆಯು, ದೈವೀ ಸ್ವರೂಪವು ಅದರದೇ ಕೆಲ ಅಂಶಗಳಲ್ಲಿ ಅವತರಣಗೊಂಡು ಮಾನವನ ರೂಪದಲ್ಲಿ ಜೀವ ತಾಳುವ ಈ ಆಸಕ್ತಿಪೂರ್ಣ ಮತ್ತು ಚಿತ್ತಾಕರ್ಷಕವಾದ ವಿದ್ಯಮಾನಗಳ ಕುರಿತು ಸ್ಪಂದಿಸುತ್ತಿದೆ. [ಎಐಎಮ್]



ಸ್ವರ್ಗಗಳನ್ನು ಇಳೆಗೆ ಇಳಿಸಿ ತರುವ ನಿಯತಿಯಲ್ಲಿ ಯಾರು ಇರುವರೋ, ಅವರು ಖಂಡಿತವಾಗಿ ಮೃತ್ತಿಕೆಯ ಆಂತರ್ಯದಲ್ಲಿ ತಮ್ಮನ್ನೆ ತಾವು ಅವತರಣ–ಗೊಳಿಸಿಕೊಳ್ಳಬೇಕಾಗುತ್ತದೆ. ಈ ಮೃಣ್ಮಯದ ಸ್ವಭಾವದ ಆ ಅಡೆತಡೆಗಳನ್ನು–ತೊಂದರೆಗಳನ್ನು ಸಹಿಸಲೇಬೇಕಾಗುತ್ತದೆ. ಈ ಮೂಲಕ ದುಃಖದಿಂದ ಕೂಡಿ ಯಾತನಾಮಯವಾಗಿರುವ ಈ ಪಥದ ಮೇಲೆ ಪಯಣಿಸಬೇಕಾಗುತ್ತದೆ.

ನನ್ನ ಅಂತರಾತ್ಮವನ್ನೇ ವಿವಶಗೊಳಿಸಿ ನಾನಿಲ್ಲಿ ಅವತರಣಗೊಂಡಿದ್ದೇನೆ, ಇದೇ ಇದೇ ಈ ಪತಿತಗೊಂಡಿರುವ ಭವಕ್ಕೆ ಬಂದಿದ್ದೇನೆ, ಮತ್ತು ಈ ಮಾನವನು ಜನನ ಮತ್ತು ಮರಣಗಳ ದ್ವಾರಗಳನ್ನು ಸದಾ ತಿರುಗಿಸುತ್ತಲೇ, ಅಜ್ಞಾನದಿಂದ ಹಾಗು ಶ್ರಮವೇ ತುಂಬಿರುವ ದಾರಿಯಲ್ಲಿಯೇ ಉಳಿದಿದ್ದಾನೆ.

ಸದಾ ರಜ್ಜು, ಕಲ್ಮಶಗಳೇ ತುಂಬಿರುವ ಈ ಭಯಂಕರ ಸ್ಥಿತಿಯ ಮಧ್ಯದಲ್ಲಿಯೇ ನಾನು, ಆಳ ಆಳಕ್ಕೆ ಮತ್ತೂ ಆಳಕ್ಕೆ ಇಳಿಯಲು ಖನನ ನಡೆಸಿದ್ದೇನೆ, ಸ್ವರ್ಣ–ಸಲಿಲದಾ ನಾದವನ್ನು ಸದಾ ಸಲಿಲಗೊಳಿಸುತ್ತಿರುವ ಆ ನದಿಯ ತಟಗಳನ್ನು ಮತ್ತು ಶಾಶ್ವತತದ ಅಗ್ನಿಗೆ ಸ್ಥಾನವಾಗಿರುವ ಆ ನೆಲೆಯನ್ನು ಅರಸಲು ಯತ್ನಿಸುತ್ತಿದ್ದೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/534**

# ಅವತಾರ–ತತ್ತ್ವದ ಪಥ

**– ಅನು: ಪುಟ್ಟು ಕುಲಕರ್ಣಿ**

## ಮಾನವೀಯತೆಯಲ್ಲಿ ಪರಮಾತ್ಮನ ಪ್ರತಿಬೋಧ

ಅವತಾರಗಳ ಕುರಿತು, ನಿಗದಿತವಾಗಿರುವ ಒಂದು ಸಾಕಾರ ಸ್ವರೂಪದಲ್ಲಿ ಅದು ಅವತರಣಗೊಂಡು ಆಗಮಿಸುವ ಕುರಿತು ಭಾರತವು ಪ್ರಾಚೀನ ಕಾಲದಿಂದಲೂ ಹೃತ್ಪೂರ್ವಕವಾಗಿಯೇ ವಿಶ್ವಾಸವನ್ನು ಹೊಂದಿದೆ. ಇದೇ ಈ 'ಅವತಾರ–ತತ್ತ್ವದ ಬೋಧ ಸ್ವರೂಪ'ವು ಆಗಿದೆ. ಶ್ರುತಿ ಸ್ವರೂಪದಲ್ಲಿಯೂ ಇದೆ. ಆದರೆ ಪಾಶ್ಚಾತ್ಯ ವಲಯದಲ್ಲಿ ಮಾತ್ರ ಅವರ ಮನಸ್ಸಿನಲ್ಲಿ ಈ ವಿಶ್ವಾಸವು ಅಚ್ಚೊತ್ತಿಲ್ಲ, ಏಕೆಂದರೆ ಅದು ಅಲ್ಲಿ ಅನುಷ್ಠಾನಗೊಂಡಿರುವ 'ಸರ್ವೇ ಸಾಧಾರಣ ಕ್ರಿಶ್ಚಿಯನ್' ಚಿಂತನವು ಇದನ್ನು ಕೇವಲ ತತ್ತ್ವಶಾಸ್ತ್ರೀಯ ವಿಧಿಯಾಗಿದ್ದು, ಈ ಚಿಂತನಕ್ಕೆ ಯಾವುದೇ ಆಧಾರವೇ ಇಲ್ಲ ಎಂದು ಮತ್ತೆ ಮೇಲಾಗಿ ಇದು ಕೇವಲ ಸಾಮಾನ್ಯ ಪ್ರಜ್ಞೆಯ ಹಾಗು ಜೀವನದ ಕುರಿತು ಅದೇ ಭಾವದ ದೃಷ್ಟಿಕೋನಗಳನ್ನು ಮಾತ್ರ ಹೊಂದಿದೆ ಎಂದು ಅವರ ಅಭಿಪ್ರಾಯವಾಗಿತ್ತು. ಆದರೆ ಭಾರತದಲ್ಲಿ ಮಾತ್ರ, ಈ ಅವತಾರದ ಚಿಂತನವು ಪ್ರಗತಿಶೀಲವಾಗಿಯೇ ವಿಕಾಸ ಹೊಂದುತ್ತ ತರ್ಕಸಮ್ಮತವಾದ ಕಾರಣತ್ವದಿಂದಲೇ ಪಥ ನಿರ್ಮಿಸಿಕೊಂಡಿತ್ತು. ಇದು ಜೀವನದ ಕುರಿತು ವೇದಾಂತವು ರೂಪಿಸಿದ ದೃಷ್ಟಿಕೋನದಿಂದ ಮತ್ತು ಜನಾಂಗದ ಪ್ರಜ್ಞಾಪೂರ್ಣ ಆಧಾರದಿಂದಲೇ ಸಮೃದ್ಧತೆಯನ್ನು ಪಡೆದುಕೊಂಡಿದೆ. ಅಸ್ತಿತ್ವದಲ್ಲಿರುವ ಸರ್ವಸ್ವವೆಲ್ಲವೂ ದೇವನ ರೂಪವೇ ಆಗಿದೆ, ಏಕೆಂದರೆ, ಅವನೋರ್ವನೇ ಮಾತ್ರ ಶಾಶ್ವತವಾಗಿ ಅಸ್ತಿತ್ವದಲ್ಲಿರುವವನು. ನೈಜ ಆಕಾರ ಹೊಂದಿರುವ ಅಸ್ತಿತ್ವವಾಗಲೀ ಅಥವಾ ಅದರ ಅಂಶಾಂಶವಾಗಲೀ ಯಾವುದೂ ಅವನಿಲ್ಲದೇ ಸಾಧ್ಯವಿಲ್ಲ, ಅವನೇ ಏಕವಾಗಿರುವ ನೈಜ ಅಸ್ತತ್ವವಾಗಿದ್ದಾನೆ. ಹೀಗಾಗಿ ಪ್ರಜ್ಞೆಯನ್ನು ಹೊಂದಿರುವ ಪ್ರತಿಯೊಂದು ಅಸ್ತಿತ್ವವೂ ಆ ಅನಂತಾನಂತದ ಅಂಶವೇ ಆಗಿದ್ದು, ಅಥವಾ ಕೆಲವೊಂದು ಸ್ವರೂಪದಲ್ಲಿ ಅವತರಣಗೊಂಡ ಹಂತವಾಗಿರುತ್ತದೆ. ಈ ಮೂಲಕ ಪ್ರತ್ಯಕ್ಷಗೊಳ್ಳುವ ಮತ್ತು ನಾಮ–ರೂಪವನ್ನು ಹೊಂದಿರುವ ಸಮರ್ಥಶೀಲ ದೃಷ್ಟಾಂತವಾಗಿರುತ್ತದೆ. ಆದರೆ ಇದು ಕವಚದೊಳಗಡೆಗೆ ಅಥವಾ ತೆರೆ ಹಾಕಿಕೊಂಡ ರೂಪದಂತಿದೆ. ಹೀಗಾಗಿ ಇಲ್ಲಿ ಆ ದಿವ್ಯತ್ವಪೂರ್ಣ ಪರಮಾತ್ಮ ಹಾಗು ಈ ಸಾಂತವಾಗಿ ಆಕಾರಗೊಂಡ ಜೀವದ ಭಾವದಿಂದಾಗಿ ರೂಪಣೆಗೊಂಡ ಅಜ್ಞಾನದ ಕಾರಣದಿಂದ,

ಆಂಶಿಕವಾಗಿ ಅಥವಾ ಸಂಪೂರ್ಣವಾಗಿ ಚೇತನವನ್ನು ಒಳಗೊಂಡ ಸ್ಥಿತಿಯ ವರ್ಗೀಕರಣವು ನಿರ್ಮಾಣಗೊಳ್ಳುತ್ತದೆ. ಪ್ರಜ್ಞೆಯನ್ನು ಹೊಂದಿಯೇ ಇರುವ ಜೀವವು ಆ ದಿವ್ಯ–ಅಗ್ನಿಯ ಸ್ಫುಲಿಂಗವೇ ಆಗಿದೆ. ಇದೇ ಜೀವವೇ ಮಾನವನಲ್ಲಿ 'ಸ್ವ–ಜ್ಞಾನ'ವನ್ನು ಪ್ರಗತಿಗೊಳಿಸಿ, ಅವನ ಅಜ್ಞಾನವನ್ನು ಹೋಗಲಾಡಿಸಿ, ಅವನ 'ಸ್ವ'ತ್ವದ ಅಸ್ತಿತ್ವವನ್ನು ತೋರಿಸುತ್ತದೆ. ಈ ದಿವ್ಯತ್ವವು ತಂತಾನೇ ವೈಶ್ವಿಕ ಅಸ್ತಿತ್ವದ ರೂಪಗಳಲ್ಲಿ ಧಾರೆಗೊಳ್ಳುತ್ತ ಇರುತ್ತದೆ. ಸಾಮಾನ್ಯವಾಗಿ ಇದು ಅದರದೇ ಶಕ್ತಿಗಳ ಮತ್ತು ಸಾಮರ್ಥ್ಯಗಳಲ್ಲಿ, ಅದರ ಜ್ಞಾನದ ಪರಿಮಾಣಗಳಲ್ಲಿ, ಪ್ರೇಮದಲ್ಲಿ, ತೋಷದಲ್ಲಿ, ಜೀವಿಯ ಪ್ರಗತಿದಾಯಕವಾದ ಬಲದಲ್ಲಿ, ಸರ್ವ ಆಯಾಮಗಳಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ಪ್ರಫುಲ್ಲತೆಯಲ್ಲಿ ಪ್ರಕಾಶನಗೊಳುತ್ತದೆ. ಆದರೆ ಯಾವಾಗ ಈ ದಿವ್ಯ ಚೇತನ ಮತ್ತು ಶಕ್ತಿಯು, ತನ್ನನ್ನು ತಾನೇ ಮಾನವನ ಸಾಕಾರದೊಳಗೆ ಕ್ರಿಯಾತ್ಮಕವಾಗಿ ಪ್ರಕಟಪಡಿಸಿಕೊಳ್ಳಲು ಪ್ರಾರಂಭಿಸುತ್ತದೆಯೋ, ಆಗ ಅದು ಕೇವಲ ಶಕ್ತಿಗಳ ಮತ್ತು ಪರಿಮಾಣಗಳನ್ನಷ್ಟೇ ಹೊಂದದೇ, ಬಾಹ್ಯ ಸ್ವರೂಪದ ಆಯಾಮಗಳನ್ನು ಹೊಂದಿದ್ದು, ಆದರೆ ಅದು ಕೇವಲ 'ಶಾಶ್ವತದ' ಬಾಹ್ಯ–'ಸ್ವ'ರೂಪದ–ಜ್ಞಾನವಾಗಿರುತ್ತದೆ. ಇನ್ನೂ ಜನಿಸದ ಸ್ಥಿತಿಯಲ್ಲಿ ಇದ್ದಾಗಲೂ ಅದರ 'ಸ್ವ'ತ್ವವನ್ನು ಅದು ಅರಿತುಕೊಂಡಿರುತ್ತದೆ ಮತ್ತು ಅದೇ ರೀತಿಯ ಚೌಕಟ್ಟಿನಲ್ಲಿಯೇ ನಿರ್ಮಿತಿಗೊಂಡ ಮಾನಸಿಕ–ಸ್ವರೂಪದಂತೆಯೇ ಮತ್ತು ಜನ್ಮದ ರೂಪದಲ್ಲಿ ಅಸ್ತಿತ್ವ ಪಡೆದುಕೊಳ್ಳುವ ರೀತಿಯಲ್ಲಿಯೇ ಲೀಲೆಗಿಳಿಯುತ್ತದೆ. ಇದೇ ಪರಿಪೂರ್ಣವಾಗಿದ್ದು, ಜೊತೆಗೆ ಆ ಪರಮಾತ್ಮನ ಪ್ರಜ್ಞಾಪೂರ್ಣವಾದ ಅವತರಣವಾಗಿದೆ, ಇದೇ ಅವತಾರವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/13–14 – ಶ್ರೀ ಅರವಿಂದರು**

**ಅವತಾರದ ಜೀವನದ ಬಾಹ್ಯ ಸ್ವರೂಪಗಳು**

ಯಾವಾಗ ನಾವು ಅವತಾರ–ತತ್ತ್ವದ ವಿಚಾರವನ್ನು ಮನನ ಮಾಡಿಕೊಳ್ಳುತ್ತೇವೆಯೋ, ಅಲ್ಲೆಲ್ಲವೂ ನಾವು ಕಾಣುವದು ಭಗವದ್ಗೀತೆಯಲ್ಲಿ ಆಧಾರಭೂತವಾಗಿ ಹೇಳಿರುವ ವಿಷಯವನ್ನೇ ಕಾಣುತ್ತೇವೆ. ನಮ್ಮ ಈ ಪ್ರಚಲಿತ ವಿಷಯ, ಅಥವಾ ಸಾಮಾನ್ಯವಾಗಿ ಆಧ್ಯಾತ್ಮಿಕ ಜೀವನವು ಈ ಬಾಹ್ಯ ಸ್ವರೂಪದ ವಿಷಯವನ್ನು ಅಷ್ಟೊಂದು ಮಹತ್ವಪೂರ್ಣವೆಂದು ಪರಿಗಣಿತವಾಗುವದಿಲ್ಲ. ಇಂತಹ ವಿರೋಧಾಭಾಸಗಳು ನಿರ್ಮಿತಿಗೊಂಡಿದ್ದು ಯುರೋಪ ಅದರಲ್ಲೂ

ಕ್ರಿಸ್ತನ ಐತಿಹಾಸಿಕತೆಯ ವಿಷಯದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದುಕೊಂಡಿತು. ಆದರೆ ಭಾರತೀಯನ ಆಧ್ಯಾತ್ಮಿಕತೆಯಿಂದಲೇ ವಿಕಾಸಗೊಂಡ ಚಿಂತನವು ಮಾತ್ರ ಇದನ್ನು ವೃಥಾ ಕಾಲಕ್ಷೇಪ ಎಂದು ಪರಿಗಣಿಸುತ್ತದೆ. ಆ ವ್ಯಕ್ತಿಯು ಈ ಐತಿಹಾಸಿಕ ಸಂಗತಿಯನ್ನು ಅದರ ಮಹತ್ವಪೂರ್ಣ ಹಂತದವರೆಗೆ ಪರಿಗಣಿಸುತ್ತಾನೆ, ಆದರೆ ಬಹುತೇಕವಾಗಿ ಮತೀಯ ಮಹತ್ವಗಳಿಗೆ ಹೆಚ್ಚಿನ ಮಹತ್ವವನ್ನು ರೂಪಿಸಿಕೊಂಡಿರುತ್ತಾನೆ. ಇದು ಅಂತಿಮವಾಗಿ ಎಲ್ಲಿಗೆ ಕರೆದುಕೊಂಡು ಹೋಗುತ್ತದೆ ಎಂದರೆ ಜೇಸಸ್ ಓರ್ವ ಬಡಿಗತನ ಮಾಡುತ್ತಿದ್ದ ಜೋಸೆಫ್‌ನ ಪುತ್ರನಾಗಿ ನಝರೇತ್ ಅಥವಾ ಬೆತ್ಲಹೇಮ್‌ದಲ್ಲಿ ಜನ್ಮ ತಾಳಿ, ಬದುಕಿ ಮತ್ತೆ ಅವನ ಅಂತಿಮ ಘಳಿಗೆಯವರೆಗೂ ಬೋಧನೆ–ಉಪದೇಶ ನೀಡಿ, ಕೊನೆಗೆ ನೈಜವಾಗಿದೆಯೋ ಅಥವಾ ಅವನ ಮೇಲೆ ಆರೋಪಿಸಲ್ಪಟ್ಟಿದೆಯೋ ಎನ್ನುವ ರಾಜದ್ರೋಹದ ಮೂಲಕ ಸಾವನ್ನಪ್ಪುವ ತನಕವೂ ಇದು ಮುಂದುವರೆಯುತ್ತದೆ. ತದನಂತರದಲ್ಲಿ ಕ್ರಿಸ್ತನ ಅಂತರಂಗದ ಆಧ್ಯಾತ್ಮಿಕ ಅನುಭಾವಗಳ ಮೂಲಕ ನಾವು ಅವನನ್ನು ಅರಿತುಕೊಳ್ಳುತ್ತಿದ್ದೇವೆ. ಅವನ ಉಪದೇಶಗಳ ಅನುಸಾರವಾಗಿ ಜೀವನವನ್ನು ರೂಪಣೆಗೊಳಿಸಲಾಗಿದೆ. ದೇವರಲ್ಲಿ ಪ್ರಾಯಶ್ಚಿತ್ತವನ್ನು ಕೇಳುವ ಮೂಲಕ ಹೇಗೆ ಈ ಪ್ರಾಕೃತಿಕ ನಿಯಮಗಳ ನೊಗದಿಂದ ಮಾನವನು ಹೇಗೆ ಬಿಡುಗಡೆ ಹೊಂದಬಹುದು ಎನ್ನುವದನ್ನು ಶಿಲುಬೆಗೇರಿಸುವ ಸಂಕೇತವು ಪ್ರತಿನಿಧಿಸುತ್ತಿದೆಯಾ? ಒಂದು ವೇಳೆ ಕ್ರಿಸ್ತನು, ದೇವರೇ ಸೃಷ್ಟಿಸಿದ ಮಾನವನಾಗಿದ್ದಲ್ಲಿ, ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ಬದುಕಿದ್ದಲ್ಲಿ, ಇದು ಒಂದು ಹಂತದವರೆಗೆ ಪರಿಗಣನೆಗೆ ತೆಗೆದುಕೊಳ್ಳಬಹುದು ಅಥವಾ ಭೌತಿಕವಾಗಿ ಮೇರಿಯ ಪುತ್ರನಾಗಿ ಬದುಕಿದ್ದ ಮತ್ತು ಯಾತನೆಯನ್ನು ಅನುಭವಿಸಿದ ಕೊನೆಗೆ ಮರಣವನ್ನೂ ಪಡೆದುಕೊಂಡ ಎನ್ನಬೇಕೇ? ಇದೇ ರೀತಿಯಲ್ಲಿ ಕೃಷ್ಣನೂ ಸಹಿತ ಅವನೊಬ್ಬ ದೈವತ್ವದ ಶಾಶ್ವತದ ಅವತಾರಿಯಾಗಿದ್ದಾನೆ ಎಂದೇ ನಮ್ಮಲ್ಲಿ ಅಚ್ಚೊತ್ತಿದ್ದಾನೆಯೇ ವಿನಾ ಇವನೊಬ್ಬ ಐತಿಹಾಸಿಕ ಮಾರ್ಗದಶಿ ಮತ್ತು ಮಾನವ ಕುಲದ ಮುಂದಾಳು ಎಂದೇನೂ ರೀತಿಯಲ್ಲಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/15**

**ಅವತಾರ; ಐತಿಹಾಸಿಕತೆ ಮತ್ತು ಸಂಕೇತಗಳು**

ಇದೀಗ ಅವತಾರ ಮತ್ತು ಸಂಕೇತಗಳ ವಿಷಯವಾಗಿ, ಕೆಲವೊಮ್ಮೊಮ್ಮೆ ಕಂಡುಬರುತ್ತಿರುವದೇನೆಂದರೆ ಮತ್ತು ಅಲ್ಲಿರುವ ವಿಷಯವೆಂದರೆ, ಆಯಾ


ಅವತಾರಿಯ ಬಗೆಗೆ ಅವನ ಜೀವನ ವಿಧಾನ ಮತ್ತು ಐತಿಹಾಸಿಕ ವಿಷಯದ ಕುರಿತು ಮೂಲಭೂತವಾಗಿಯೇ ತಪ್ಪು ಅಭಿಪ್ರಾಯಗಳನ್ನು ಆಧುನಿಕ ವಿಶ್ಲೇಷಣೆಯಲ್ಲಿ ರೂಪುಗೊಂಡಿರುವದನ್ನು ಕಾಣುತ್ತೇವೆ. ಇದನ್ನು ಸರಳವಾಗಿ ಹೇಳುವದೆಂದರೆ, ಆ ಅವತಾರದ ವಾಸ್ತವೀಕತೆಯ ಬಾಹ್ಯ ಆವರಣಗಳು, ಆ ಅವತಾರದ ಜೀವನದ ಅವಧಿಯಲ್ಲಿ ರೂಪುಗೊಂಡಿರುವ ಬಾಹ್ಯ ಜೀವನ ಶೈಲಿಗಳ ಕುರಿತೇ ಈ ರೀತಿಯ ಅಭಿಪ್ರಾಯಗಳಿವೆ. ಆದರೆ ಆಧ್ಯಾತ್ಮಿಕತೆಯ ನೈಜತ್ವ, ಆ ಪರಮ ಶಕ್ತಿ, ಮತ್ತು ಆವುಗಳು ಆ ವ್ಯಕ್ತಿಯ ಸಂಗಡವೇ ಅವತರಣಗೊಂಡು ಬಂದ ಸಂಗತಿಗಳು ಪ್ರಾಮುಖ್ಯವಾಗಿವೆ. ಅದರಲ್ಲೂ ಆ ಅವತಾರಿಯ ಅಸ್ತಿತ್ವ ಮತ್ತು ಅವನ ಕಾರ್ಯಗಳಲ್ಲಿ ಅವುಗಳು ಅನುಷ್ಠಾನಗೊಂಡ ಸಂಗತಿಗಳೂ ಅಷ್ಟೇ ಮುಖ್ಯವಾಗುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಸಂಗತಿ ಎಂದರೆ, ಓರ್ವ ಆಧ್ಯಾತ್ಮವಾದೀ ಮಾನವನ ಜೀವನದಲ್ಲಿ ಅವನು ಬದುಕಿರುವ ಅವಧಿಯಲ್ಲಿ, ಎಲ್ಲರಿಗೂ ಕಾಣುವಂತೆ ಬಾಹ್ಯದಲ್ಲಿ ಏನು ಮಾಡಿದ್ದಾನೆ ಎನ್ನುವದು ಮುಖ್ಯ ಸಂಗತಿಯಾಗಿರುವದಿಲ್ಲ. (ಇದು ಆ ವ್ಯಕ್ತಿಯ ಜೀವನ ಚರಿತ್ರೆ ಮತ್ತು ಐತಿಹಾಸಿಕತೆಯಲ್ಲಿ ದಾಖಲಾಗಿರುತ್ತದೆ. ಅಲ್ಲವೇ?) ಆದರೆ ಅವನು ನಿಜವಾಗಿಯೂ ಯಾರು? ಅವನು ಕೈಕೊಂಡ ಕಾರ್ಯವಾದರೂ ಏನು? ಅದೂ ಒಂದು ನಿಗದಿತ ಅವಧಿಯೊಳಗೇ ಅದನ್ನು ಪೂರೈಸಿದ್ದು ಹೇಗೆ ಎನ್ನುವದು ಮುಖ್ಯ ಸಂಗತಿಯಾಗಿದೆ. ಈ ವಿಷಯವು ಅವನ ಬಾಹ್ಯ ಜೀವನಕ್ಕೆ ಮಾತ್ರ ಮೌಲ್ಯವನ್ನು ತಂದುಕೊಡುತ್ತದೆ. ಆದರೆ ಅವನ ಆಂತರ್ಯದ ಬದುಕು ಮಾತ್ರ ಆಧ್ಯಾತ್ಮದಿಂದಲೇ ಭರಿತವಾಗಿದ್ದು ಅದು ಸುವಿಶಾಲ ಮತ್ತು ಪೂರ್ಣತೆಯಿಂದ ಕೂಡಿರುತ್ತದೆ. ಅದರಲ್ಲೂ ಮಹತ್–ಉದ್ದೇಶವನ್ನು ಹೊಂದಿಕೊಂಡೇ ಬಂದಿರುವ ವಿಷಯದಲ್ಲಂತೂ, ಅದು ಮಹತ್ವಪೂರ್ಣವಾದ ವಸ್ತು–ವಿಷಯಗಳಿಂದ ತುಂಬಿದ್ದು ಮತ್ತು ದಟ್ಟೈಸಿಕೊಂಡಿದ್ದು, ಇದನ್ನು ಯಾವುದೇ ಜೀವನ ಚರಿತ್ರೆಕಾರನಾಗಲಿ ಅಥವಾ ಇತಿಹಾಸ ತಜ್ಞನಾಗಲೀ ಕಂಡುಕೊಳ್ಳಲು ಶಕ್ತನಾಗಿಲ್ಲ. ಹೀಗಾಗಿ ಅವರು ಇದನ್ನು ಹೇಳಲೂ ಸಾಧ್ಯವಿಲ್ಲ. ಅವತಾರಿಯ ಬಾಹ್ಯ ಜೀವನದ ಸ್ವರೂಪ ಯಾವುದೇ ಆಯಾಮದಲ್ಲಿದ್ದರೂ, ಅದಕ್ಕೆ ಎಷ್ಟೇ ಮಹತ್ವಪೂರ್ಣವಾಗಿದ್ದರೂ ಅದು ಆ ವ್ಯಕ್ತಿಯ ಆಂತರ್ಯದಲ್ಲಿರುವ ಅಭೀಪ್ಸೆಯ ಸಂಕೇತ ಮಾತ್ರ ಆಗಿರುತ್ತದೆ. ಹೀಗಾಗಿ ಅವತಾರಿಯ ಆಂತರ್ಯದ ಮತ್ತು ಅದರ ಅಭಿವ್ಯಕ್ತಿಗಳೂ ಅಷ್ಟೇ ಪ್ರಮುಖವಾಗಿರುತ್ತವೆ. ಇದು ದಿವ್ಯತ್ವವೊಂದು ಈ ರೀತಿಯಲ್ಲಿ ತೆರೆಮರೆಯಲ್ಲಿದ್ದುಕೊಂಡು ಚಲಿಸುತ್ತಿರುವ ಸಂಗತಿಯಾಗಿದೆ. ಹೀಗಾಗಿ ನಾವು ಕೃಷ್ಣನ ಕಥೆಗಳನ್ನೆಲ್ಲ ಲಿಖಿತಗೊಳಿಸಲ್ಪಟ್ಟಿವೆ ಎಂದು ಎಂದಿಗೂ ವಿಚಾರಿಸುವದಿಲ್ಲ,

ಅವುಗಳೆಷ್ಟೇ ಶಿಥಿಲಗೊಂಡಂತೆ ಕಂಡರೂ, ಈ ಭೂಮಿಯ ಮೇಲೆ ಅವನ ಕಾರ್ಯಗಳೆಲ್ಲವನ್ನು ಮತ್ತು ಅವುಗಳನ್ನು ಸಾಂಕೇತಿಕವಾಗಿರುವ ಪ್ರಾತಿನಿಧಿಕ ಅಭಿವ್ಯಕ್ತಿಗಳೆಂದು ಜೊತೆಗೆ ಇವೆಲ್ಲವೂ ಕೃಷ್ಣನ ಲೀಲೆಗಳೆಂದು ಸಮುದಾಯ ಸ್ವೀಕರಿಸಿದೆ. ಹೀಗಾಗಿ ಕೃಷ್ಣನನ್ನು ದೈವತ್ವದ ಸ್ವರೂಪದಲ್ಲಿಯೇ ಆರಾಧಿಸಲಾಗುತ್ತದೆ. ಬುದ್ಧನನ್ನು ಪರಿತ್ಯಾಗದ ಹಂತದಲ್ಲಿ ಮಾರನ ಪ್ರಲೋಭನೆಯನ್ನು ಮೀರಿ, ಬೋಧಿ ವೃಕ್ಷದ ಅಡಿಯಲ್ಲಿ ಸಾಕ್ಷಾತ್ಕಾರವನ್ನು ಕಂಡ ಸಂಗತಿಗಳೆಲ್ಲವನ್ನೂ ನಾವು ಸಂಕೇತಗಳೆಂದೇ ಆರಾಧಿಸುತ್ತೇವೆ. ಅದೇ ರೀತಿಯಲ್ಲಿ ಕನ್ಯೆಯಿಂದ ಜನ್ಮ ಪಡೆದ, ಮರುಭೂಮಿಯ ಪ್ರದೇಶದ ಪ್ರಲೋಭನೆ ಮತ್ತು ಶಿಲುಬೆಗೇರಿದ ಘಟನೆಗಳನ್ನು – ಇವು ನೈಜ ಘಟನೆಗಳೆಂದು ಮತ್ತು ಅಷ್ಟೇ ಮಹತ್ವಪೂರ್ಣವಾಗಿವೆ ಎಂದು ಕ್ರಿಸ್ತನ ವಿಷಯದಲ್ಲಿ ಗೌರವಿಸುತ್ತೇವೆ. ಅವುಗಳು ವಿಶ್ವಾಸಾರ್ಹವಾಗಿ ಐತಿಹಾಸಿಕ ಘಟನೆಗಳೆಂದು ದಾಖಲಿಸದಿದ್ದರೂ ನಾವು ಸಹಿತ, ಅವುಗಳ ಮಹತ್ವವನ್ನೇನೂ ಪ್ರಶ್ನಿಸುವದಿಲ್ಲ. ಇನ್ನುಳಿದ ವ್ಯಕ್ತಿತ್ವಗಳ ವಿಷಯದಲ್ಲಿ ಇರುವಂತೆ, ಬುದ್ಧ ಮತ್ತು ಕ್ರಿಸ್ತನ ವಿಷಯದಲ್ಲಿ ಅವರ ಬಾಹ್ಯ ಜೀವನದ ಕುರಿತು ಅಷ್ಟೊಂದು ದಾಖಲೆಗಳು ಇಲ್ಲ. ಆದರೂ ಬುದ್ಧ ಮತ್ತು ಕ್ರಿಸ್ತ ಇಬ್ಬರೂ ಈ ಆಧ್ಯಾತ್ಮಿಕ ಪ್ರಪಂಚದಲ್ಲಿ ಅದು ಹೇಗೆ ಚಿರಂತನವಾಗಿರುವ ಸ್ಥಾನವನ್ನು ಗಳಿಸಿಕೊಂಡರು? ಇದಕ್ಕೆ ಮುಖ್ಯ ಕಾರಣವೆಂದರೆ, ವಿಶೇಷವಾದ ಏನೋ ಒಂದು ಇವರ ಮೂಲಕ ಸಾರೂಪ್ಯವನ್ನು ಪಡೆದುಕೊಂಡಿದೆ, ಮತ್ತು ಅದು ಅವರ ಬಾಹ್ಯ ಜೀವನಕ್ಕಿಂತಲೂ ಹಾಗು ಅವರ ಉಪದೇಶಕ್ಕಿಂತಲೂ ಮಿಗಿಲಾದ ಏನನ್ನೋ ಒಳಗೊಂಡಿದೆ. ಇವುಗಳ ಐತಿಹಾಸಿಕತೆಯನ್ನು ಎಷ್ಟೇ ವಿಶ್ಲೇಷಿಸಿದರೂ, ಅದು ನಮಗೆ ಹೆಚ್ಚಿನದೇನನ್ನೂ ಕೊಡುವದಿಲ್ಲ. ಹೀಗಾಗಿ, ನನಗೆ ಗೋಚರಿಸುತ್ತಿರುವದೇನೆಂದರೆ, ಕೃಷ್ಣ ಪ್ರೇಮ ಎನ್ನುವದು ಮೂಲಭೂತವಾಗಿಯೇ ಸೂಕ್ತವಾಗಿದೆ ಏಕೆಂದರೆ ಆ ಮೂಲಕ ಅದು ಸಂಕೇತದಲ್ಲಿ ಹೇಳುತ್ತಿದೆ. ಭೌತಿಕ ಹಂತದ ಮನಸ್ಸಿಗೆ ಆ ಶಬ್ದಗಳು ಮತ್ತು ಸಂಗತಿಗಳು ಮತ್ತು ಕ್ರಿಯೆಗಳು ಮಾತ್ರ ಮುಖ್ಯವಾಗುತ್ತವೆ. ಆದರೆ ಮನಸ್ಸಿನ ಆಂತರ್ಯಕ್ಕೆ ಮಾತ್ರ ಅದರ ಆಧ್ಯಾತ್ಮಿಕ ಆಯಾಮಗಳು ಅವುಗಳ ಮೂಲಕ ನಿರ್ಮಿತಿಗೊಂಡ ಘಟನೆಗಳು ಮುಖ್ಯವಾಗುತ್ತವೆ. ಕ್ರಿಸ್ತನ ಹಾಗು ಬುದ್ಧನ ಉಪದೇಶಗಳು ಆಧ್ಯಾತ್ಮಿಕವಾಗಿ ಸತ್ಯವಾಗಿದ್ದರೂ, ಅವು ಕೇವಲ ಮನೋಹಂತದ ಉಪದೇಶಗಳಲ್ಲ. ಆದರೆ ಆಧ್ಯಾತ್ಮಿಕತೆಯ ಹಂತದಲ್ಲಿ ಅಭಿವ್ಯಕ್ತಗೊಂಡ ಅಥವಾ ಸಂಭವಿಸಿರುವ ಘಟನೆಗಳಾಗಿ, ಈ ಭೂಮಿಯ ಮೇಲೆ ಅವರದೇ ಜೀವನಾವಧಿಯಲ್ಲಿ, ಅವರ ಮೂಲಕವೇ ಅನುಷ್ಠಾನಗೊಂಡು (ಅಥವಾ ಅಗಾಧ ಪ್ರಮಾಣದ ಸಾಮರ್ಥ್ಯಶೀಲವಾಗಿರುವಂತೆಯೇ), ಇನ್ನುಳಿದವರಲ್ಲಿಯೂ

ಘಟಿಸುವಂತೆ ಇವೆ. ಇಲ್ಲಿ ಸಾಂಪ್ರದಾಯಿಕ ಅಥವಾ ಪಂಥೀಯ ಗೋಡೆಗಳು ನಿರ್ಮಾಣಗೊಂಡಿರುವದು ತಪ್ಪು ಎನ್ನುವದು ಸಾಕ್ಷಿಸಮೇತ ಕಾಣುತ್ತಿದೆ, ಅದೇ ರೀತಿ ಅವುಗಳನ್ನು ಪರಿವೃದ್ಧಿ ಮಾಡಿಕೊಂಡು ಸಾಗುವದಾಗಲಿ, ಭೌದ್ಧಿಕ ಸ್ವರೂಪದಲ್ಲಿ ಮಾತ್ರ ಋತದ ಕುರಿತು ಸೀಮಿತ ಅನುಭವವನ್ನು ಹೊಂದಿರುವದು ಇವೆಲ್ಲವೂ ಮಾನಸಿಕವಾಗಿ ಪರಿಹಾರವನ್ನು ಕೊಡಬಲ್ಲವೇ ವಿನಾ, ಆಧ್ಯಾತ್ಮಿಕ ಉದ್ದೇಶಕ್ಕಂತೂ ಅಲ್ಲ.

ಒಂದು ವೇಳೆ ಶಾಶ್ವತದಲ್ಲಿ ಇರದಿದ್ದರೆ, ಈ ಅವತಾರ, ಗುರು ಎನ್ನುವ ಸಂಗತಿಯು ಯಾವುದೇ ಅರ್ಥವನ್ನೂ ಹೊಂದಿರುವದಿಲ್ಲ. ಅವರನ್ನು ಆರಾಧಿಸುತ್ತಿರುವವರ ಮತ್ತು ಅವರ ಶಿಷ್ಯತ್ವವನ್ನು ಸ್ವೀಕರಿಸುತ್ತಿರುವವರ ಅಭೀಪ್ಸೆಯಂತಿರುವದೇ ಅವತಾರದ ಮೂಲ ಸ್ವರೂಪವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/478–80**



ಆ ನಿರ್ವಿಶೇಷ, ಪರಿಪೂರ್ಣವೀಗ, ಬಾಧನೆಯು ಇರದ ಮುಕ್ತ
ನಮ್ಮಂತರಂಗದಲ್ಲವನು, ಗೂಢ ನಮ್ಮಂತರಾತ್ಮ ಶಕ್ತ
ನಮ್ಮ ಶೂನ್ಯತೆಯ ಬಾಹ್ಯ ಕವಚವನು ಊಹನೆಗೆ ಗಣಿಸಿಕೊಂಡು
ಈ ರಕ್ತ–ಮಾಂಸ–ರಜ್ಜು–ಸ್ನಾಯುಗಳ ಸಂಲಗ್ನ ದೇಹ ಕಂಡು

ತನ್ನ ನೆಲೆಗಾಗಿ ಸೂಕ್ತ ತಾಣವದು ನಿರ್ಧರಿಸಿ, ವಾಸಗೊಂಡು
ಅದು ತನ್ನದೆಂದು ತಾನಿಂತು ಆ ಬಿಡಾರದಲಿ ಉಳಿದುಕೊಂಡು
ಅವನ ಪ್ರತಿಯೊಂದು ಮನುಜ ಮಾನಕದ–ಎಲ್ಲೆಯಲಿ ರೂಪುಗೊಂಡು
ಅದು ಅವನ ದಿವ್ಯ–ಪರಿಮಾಣದಲ್ಲಿ, ನಾವೀಗ ಉದಿತಗೊಂಡು;

ಆಮೇಲೆ ಮತ್ತೆ ಆ ಒಂದು ದಿವ್ಯ–ಆಕೃತಿಯ ಕೃಪೆಯನಿತ್ತ
ಸೃಷ್ಟಾರನವನು ಪುನರ್–ಎರಕದಲಿ ನಮ್ಮನ್ನು ರೂಪಿಸುತ್ತ
ಜೊತೆಜೊತೆಗೆ ಮರ್ತ್ಯ–ಮಾನವನ ಅಚ್ಚು ರೂಪಣೆಗೆ ಆಗ ತಾನು
ಆ ಪರಮದೇವನಾ ನಕ್ಷೆಯನ್ನೆ ವಿಧಿಸುತಿಹನೀಗ ಅವನು

ಅವನ ಆ ಊರ್ಧ್ವ ಅದಿತಿಹಂತದೆಡೆ ಚಿತ್–ಸತ್ವಗೊಳಿಸುತಿರಲು
ಸಾಂತದಲಿ ಇರುವ ನಮ್ಮ ಮನಸುಗಳ ಆ ತಾಣದೆಡೆಗೆ ತರಲು
ನಿತ್ಯತ್ವದಲ್ಲಿ ಸ್ಥಿರವಿರುವ ಸಾಕ್ಷಿ–ಚೈತನ್ಯವನ್ನು ಈಗ
ಸ್ಪರ್ಶಿಸುವ ಚಣವು ಸವಿಕಲ್ಪದಲ್ಲಿ ನಿಸ್ಸೀಮ ಸೇತು–ಯೋಗ

ಮೃಣ್ಮಯದ ರೂಪ ಪರಿವರ್ತವಾಗಿ ಚಿನ್ಮಯವೆ ಆಗುವತ್ತ
ಅದು ದಿವ್ಯ ದಿವಿಗೆ ಪರಿಶೋಧದಲ್ಲಿ ಪಾವತಿಸಲಿರುವ ಮೊತ್ತ;
ಪರಸ್ಪರರಲ್ಲಿ ಕೊಡು–ಕೊಳುವ ಋಣವು, ಮನುಜನನು ಬದ್ಧಗೊಳಿಸಿ
ಆ ಪರಾತ್ಪರದ ಜೊತೆಗೆ ಸತತದಲಿ ಸಂಬಂಧ ಭದ್ರಗೊಳಿಸಿ;

ಅದರ ಗುಣಧರ್ಮದಂತರಾಳದೊಲು ಕಾಯಕದಿ ನಾವು ನಿರತ
ನಮ್ಮ ಗುಣಧರ್ಮವನ್ನದುವು ನಿತ್ಯ ರಕ್ಷಿಸುವ ತೆರದಿ ಸತತ;
ನಾವೀಗ ದೇವಸಂತತಿಯ ಶ್ರೇಣಿ–ಶ್ರೇಣಿಯಲಿ ಸೇರೆ ಮತ್ತೆ
ಅವ ಬಯಸಿದಂತೆ ಅವನಿರುವ ತೆರದಿ ಕಡ್ಡಾಯವಾಗಿ ಸತ್ತೆ;

ಪ್ರಾಣದೆಳೆಯಲ್ಲಿ ದೇಹ ಧರಿಸಿರುವ ನಾವೀಗ ಅವನ ಅಂಶ,
ಕಡ್ಡಾಯದಲ್ಲಿ ದಿವ್ಯತ್ವದೆಡೆಗೆ ಬೆಳೆಬೆಳೆಯಬೇಕು ವಂಶ.
ನಮ್ಮ ಜೀವನವು ಮಾಯೆ–ಮೋಹದಲಿ ವೈರುದ್ಧ ತೆರೆಗಳಲ್ಲಿ
ಅಬ್ಬರದ ಉಕ್ಕು–ಉಬ್ಬರದ ಬೊಬ್ಬೆ ರಭಸಾತಿ ರಭಸದಲ್ಲಿ,

ಘನತಮದ ಪರದೆ ಅಲೆಯಲೆಯ ತೆರದಿ ಆವರಿಸಲೆಂದು ಸುತ್ತ
ಮಿಥ್ಯೆ–ಮಿಂಚುಗಳು ಕ್ಷಣದ ಪ್ರಭೆ ತೋರಿ ವಿಭ್ರಮಕೆ ಸಿಲುಕಿಸುತ್ತ,
ಆದರೂ ಜೊತೆಗೆ ರಕ್ಷಣೆಯ ಭದ್ರ ಕವಚದೊಲು ದೇವನಿರುವ,
ಬೆಳಕಿನೆಡೆ ಚಲಿಸೆ ಚುಕ್ಕಾಣಿಯಿರುವ ನಿತ್ಯ–ನಿರ್ವಚನ–ಭಾವ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 57)**

# ಅವತಾರದ ಕ್ರಿಯೆ

**– ಅನು: ನಾಗಜ್ಯೋತಿ ಮಾನ್ವಿ**

## ವಿಕಾಸದ ಮುಂದಿನ ಹೆಜ್ಜೆಗಳನ್ನು ಸೇರಿಸುವುದು

ಪ್ರಜ್ಞೆಯು ಒಂದು ಏಣಿಯಿದ್ದಂತೆ; ಪ್ರತಿಯೊಂದು ಶ್ರೇಷ್ಠ ಪರ್ವದಲ್ಲಿಯೂ ಏಣಿಗೆ ಇನ್ನೊಂದು ಹಂತವನ್ನು ಸೇರಿಸಲು ಸಾಮರ್ಥ್ಯವಿರುವ ಒಂದು ಶ್ರೇಷ್ಠ ಸತ್ತೆ ಇರುತ್ತದೆ. ಮತ್ತು ಸಾಮಾನ್ಯ ಪ್ರಜ್ಞೆ ಎಂದೂ ತಲುಪದ ಸ್ಥಾನವನ್ನು ತಲುಪುತ್ತದೆ. ಉನ್ನತ ಸ್ತರವನ್ನು ಸಾಧಿಸುವ ಮತ್ತು ಭೌತಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ದಾಟಿ ಹೋಗುವ ಸಾಧ್ಯತೆಯಿದೆ. ಆದರೆ ಒಬ್ಬರು ಏಣಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವದಿಲ್ಲ, ಇಲ್ಲಿ ವಿಶ್ವದ ಶ್ರೇಷ್ಠ ಪರ್ವಗಳ ಶ್ರೇಷ್ಠ ಸಾಧನೆಗೆ ಭೌತಿಕದೊಂದಿಗೆ ಸಂಪರ್ಕವನ್ನು ಕಳೆದುಕೊಳ್ಳದೆ, ಏಣಿಗೆ ಇನ್ನೊಂದು ಹೆಜ್ಜೆಯನ್ನು ಸೇರಿಸುವ ಸಾಮರ್ಥ್ಯವಿದೆ. ಅತ್ಯುನ್ನತ ಹಂತವನ್ನು ತಲುಪುವ ಸಾಮರ್ಥ್ಯ ಮತ್ತು ಅದೇ ಸಮಯದಲ್ಲಿ ವಿವಿಧ ಸ್ತರಗಳ ನಡುವಿನ ಸಂಪರ್ಕವನ್ನು ಕಡಿದು ಹಾಕಿ ಒಂದು ರೀತಿಯ ಖಾಲೀತನಕ್ಕೆ ಅವಕಾಶ ಕೊಡುವ ಬದಲು, ಈ ಭೂತಳದೊಂದಿಗೆ ಮೇಲ್ಭಾಗವನ್ನು ಸಂಪರ್ಕಿಸುವ ಸಾಮರ್ಥ್ಯವಿದೆ. ಮೇಲೆ ಮತ್ತು ಕೆಳಗೆ ಹೋಗುವ ಮತ್ತು ಮೇಲ್ಭಾಗವನ್ನು ತಳಕ್ಕೆ ಸೇರಿಸುವುದು. ಸಾಕ್ಷಾತ್ಕಾರದ ಇಡೀ ರಹಸ್ಯವಾಗಿದೆ. ಮತ್ತು ಅದು 'ಅವತಾರದ' ಕರ್ತವ್ಯವಾಗಿದೆ. ಪ್ರತಿ ಬಾರಿಯೂ ಅವರು ಏಣಿಗೆ ಮತ್ತೊಂದು ಹೆಜ್ಜೆಯನ್ನು ಸೇರಿಸುತ್ತಾರೆ. ಆಗ ಭೂಮಿಯ ಮೇಲೆ ಹೊಸ ಸೃಷ್ಟಿಯಾಗುತ್ತದೆ. ಈಗ ಸೇರಿಸಿರುವ ಹೆಜ್ಜೆಗೆ ಶ್ರೀ ಅರವಿಂದರು 'ಸುಪ್ರಮಾನಸ' ಎಂದು ಕರೆದಿದ್ದಾರೆ; ಇದರ ಪರಿಣಾಮವಾಗಿ ಪ್ರಜ್ಞೆಯು ಸುಪ್ರಮಾನಸ ಜಗತ್ತನ್ನು ಪ್ರವೇಶಿಸುವ ಸಾಧ್ಯತೆಯಿದೆ. ಮತ್ತು ಅದಾಗ್ಯೂ ಅದರ ವೈಯಕ್ತಿಕ ರೂಪವನ್ನು ಉಳಿಸಿಕೊಳ್ಳಬಹುದು. ಮತ್ತು ಆಗ ಒಂದು ಹೊಸ ಸೃಷ್ಟಿಯನ್ನು ಸ್ಥಾಪಿಸಲು ಕೆಳಗೆ ಬರುತ್ತದೆ.

ಖಂಡಿತವಾಗಿಯೂ ಇದು ಕೊನೆಯಲ್ಲ, ಸತ್ತೆಯ ದೂರದ ಶ್ರೇಣಿಗಳೂ ಸಹ ಇವೆ; ಆದರೆ ಜಗತ್ತನ್ನು ಮರುಸಂಘಟನೆ ಮಾಡಲು, ನಿಜವಾದ ದೈವೀಕ್ರಮಕ್ಕೆ ಜಗತ್ತನ್ನು ಮರಳಿ ತರಲು ಈಗ ನಾವು ಸುಪ್ರಮಾನಸವನ್ನು ಅವತರಣಗೊಳಿಸಿ ತರುವ ಕೆಲಸದಲ್ಲಿದ್ದೇವೆ. ಇದು ಮೂಲಭೂತವಾಗಿ ಕ್ರಮಬದ್ಧತೆಯ ಒಂದು ಸೃಷ್ಟಿಯಾಗಿದೆ, ಪ್ರತಿಯೊಂದನ್ನು ಅದರ ನಿಜವಾದ ಜಾಗದಲ್ಲಿಡಬೇಕು; ಮತ್ತು

ಮುಖ್ಯವಾದ ಚೈತನ್ಯ ಅಥವಾ ಶಕ್ತಿ, ಪರಿಪೂರ್ಣ ಸಂಘಟನೆಯ ದೇವತೆ, ಮಹಾಸರಸ್ವತಿ, 'ಶಕ್ತಿಯು' ಪ್ರಸ್ತುತದಲ್ಲಿ ಸಕ್ರಿಯವಾಗಿರುತ್ತಾಳೆ.

ನೀವು ಮೇಲೆ ಅಥವಾ ಕೆಳಗೆ ಹೋಗುವ ಮತ್ತು ಮೇಲಿರುವದನ್ನು ಭೌತಿಕದೊಳಗೆ ತರುವುದನ್ನು ಅನುಮತಿಸುವ, ನಿರಂತರತೆಯನ್ನು ಸಾಧಿಸುವ, ಕೆಲಸವನ್ನು ಪ್ರಜ್ಞೆಯ ಒಳಭಾಗದಲ್ಲಿ ಮಾಡಬೇಕಾಗಿದೆ. ಇದನ್ನು ಮಾಡಲೇಬೇಕಾದವನೇ ಅವತಾರ ಪುರುಷ, ಆತನು ಒಂದು ಬಂಧೀಖಾನೆಯಲ್ಲಿ ಬಂಧಿಯಾಗಿದ್ದು ಮತ್ತು ಯಾರನ್ನು ನೋಡದಿದ್ದರೂ, ಮತ್ತು ಎಂದೂ ಹೊರಹೋಗದಿದ್ದರೂ ಸಹ ಆತ ಈ ಕೆಲಸವನ್ನು ಮಾಡಿರುತ್ತಾನೆ. ಏಕೆಂದರೆ ಇದು ಪ್ರಜ್ಞೆಯ ಒಳಭಾಗದ ಕೆಲಸವಾಗಿದೆ, ಅತಿಮಾನಸ ಮತ್ತು ಭೌತಿಕ ಸತ್ತೆಯ ನಡುವಿನ ಸಂಪರ್ಕದ ಈ ಪ್ರಜ್ಞಾಯುತ ಸಂಪರ್ಕವನ್ನು ಸಾಧಿಸಲು ಆತನಿಗೆ ಯಾವುದೇ ಬಾಹ್ಯ ಸಾಮರ್ಥ್ಯದ ಅವಶ್ಯಕತೆಯಿಲ್ಲ. ಒಂದು ಬಾರಿ ಸಂಪರ್ಕವಾದ ಮೇಲೆ ಬಹಿರಂಗದ ಜಗತ್ತಿನಲ್ಲಿ ಹೊಸ ಸೃಷ್ಟಿಯ ರೂಪದಲ್ಲಿ ಆಗಬೇಕು, ಅದು ಒಂದು ಮಾದರಿ ನಗರದ ರೂಪದಲ್ಲಿ ಆರಂಭವಾಗಿ ಮತ್ತು ಸಂಪೂರ್ಣ ಜಗತ್ತಿನೊಂದಿಗೆ ಕೊನೆಗೊಳ್ಳಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/178–79**

## ದೈವತ್ವದಲ್ಲಿ ಮಾನವನ ಉದಯ

ದೈವತ್ವದಲ್ಲಿ ಮಾನವನ ಉದಯವಾಗುವದನ್ನು 'ದೇವನು' ಮಾನವ ಜನಾಂಗದಲ್ಲಿ ಅವತರಣವಾಗಿ ಮನುಷ್ಯನು ದೇವ ಮಾನವನಾಗಿ ಬೆಳೆಯುವದಕ್ಕೆ ಸಹಾಯ ಮಾಡದಿದ್ದರೆ, ಧರ್ಮಕ್ಕಾಗಿ ಅವತಾರತ್ವವು ಒಂದು ಅನುಪಯೋಗಕರ ವಿದ್ಯಮಾನವಾಗಿರುತ್ತಿತ್ತು. ಅದು ಕೇವಲ 'ಹಕ್ಕು', ಕೇವಲ ನ್ಯಾಯ ಅಥವಾ ಸದ್ಗುಣಗಳ ಮಾನದಂಡಗಳು ಅವುಗಳ ಸಾಮಾನ್ಯ ರೀತಿಯಲ್ಲಿ ಶ್ರೇಷ್ಠ ಮನುಷ್ಯರಿಂದ ಅಥವಾ ಸಾಮಾಜಿಕ ಕ್ರಾಂತಿ, ಋಷಿಗಳು, ರಾಜರ ಮತ್ತು ಧಾರ್ಮಿಕ ಭೋದಕರ ಜೀವನ ಮತ್ತು ಕಾರ್ಯಗಳಿಂದಲೇ ಮಾಡಬಹುದು, ಇದಕ್ಕೆ ಯಾವುದೇ ಅವತಾರಿಯ ಅವಶ್ಯಕತೆಯಿರುವದಿಲ್ಲ. ಅವತಾರಿಯು ಮಾನವನ ಪ್ರಕೃತಿಯಲ್ಲಿ ದೈವೀ ಪ್ರಕೃತಿಯನ್ನು ಪ್ರಕಟ ಮಾಡಲು ಬರುವನು, ಕ್ರೈಸ್ತನ, ಕೃಷ್ಣನ, ಬುದ್ಧನ, ಪ್ರಭಾವದಿಂದ ಮಾನವನ ಪ್ರಕೃತಿಯಲ್ಲಿ ತತ್ವ, ವಿಚಾರ ಭಾವನೆ ಕ್ರಿಯೆ, ಈ

ಅವತಾರಗಳ ಮೂಲಕ ದೈವತ್ವಕ್ಕೆ ಏರಿಸುವದು ಈ ಉದ್ದೇಶಕ್ಕಾಗಿ ಅವತಾರಿಯು ಧರ್ಮ ಅಥವಾ ನಿಯಮವನ್ನು ಸ್ಥಾಪಿಸುತ್ತಾನೆ, ಕ್ರೈಸ್ತ, ಕೃಷ್ಣ, ಬುದ್ಧ ಅವರು ಕೇಂದ್ರದಲ್ಲಿ ಇದಕ್ಕೆ ದ್ವಾರವಾಗಿ ನಿಂತು, ಅವರ ಮೂಲಕವೇ ಮನುಷ್ಯರಿಗೆ ದಾರಿಯನ್ನು ಸೃಷ್ಟಿಸುವರು. ಅದಕ್ಕಾಗಿ ಪ್ರತಿಯೊಂದು ಅವತಾರಿಯೂ ಮನುಷ್ಯನ ಮುಂದೆ ಉದಾಹರಣೆಯನ್ನು ನೀಡುತ್ತಾನೆ. ಮತ್ತು ತನ್ನನ್ನು ತಾನು ದಾರಿ ಮತ್ತು ದ್ವಾರ ಎಂದು ಘೋಷಿಸುತ್ತಾನೆ; ದೈವೀ ಅಸ್ತಿತ್ವದೊಂದಿಗೆ ಮಾನವ ಜನಾಂಗದ ಏಕತೆಯನ್ನು ಅವನು ಘೋಷಿಸುತ್ತಾನೆ. “ಮಾನವನ ಸುತನು” ಮತ್ತು ತಾನು ಯಾವ ತಂದೆಯಿಂದ ಉದಿಸಿ ಬಂದಿರುವೆನೋ ಅವರು ಒಂದೇ ಎಂದು ಘೋಷಿಸುತ್ತಾನೆ, ಮಾನವನ ದೇಹದಲ್ಲಿ ಕೃಷ್ಣನು ಪರಾತ್ಪರ ಒಡೆಯ, ಎಲ್ಲಾ ಸೃಷ್ಟಿಯ ಗೆಳೆಯ, ಒಂದೇ ದೈವೀ ಪುರುಷೋತ್ತಮನ ಎರಡು ದೈವೀ ಪ್ರೇರಣೆಯಾಗಿದೆ, ಮಾದರಿಯಲ್ಲಿ ಪ್ರಕಟ ಮಾಡುವಿಕೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 19/148–49**

**ಅವತಾರ ದ್ವಿಮುಖ ವಿದ್ಯಮಾನ**

ಅವತಾರಿಯು ಯಾವಾಗಲೂ ದೈವತ್ವ ಹಾಗೂ ಮಾನವೀಯತೆಯ ದ್ವಿಮುಖ ವಿದ್ಯಮಾನವಾಗಿದ್ದಾನೆ. ದೈವತ್ವವು ಮಾನವ ಪ್ರಕೃತಿಯನ್ನು ಅದರ ಇತಿಮಿತಿಗಳೊಂದಿಗೆ ಧಾರಣೆ ಮಾಡಿಕೊಂಡು ಮತ್ತು ಅದನ್ನು ದೈವೀ ಪ್ರಜ್ಞೆಯ ಮತ್ತು ದೈವೀ ಶಕ್ತಿಯ ಪರಿಸರ, ಮಾಧ್ಯಮ, ಉಪಕರಣಗಳಾಗಿ ಮಾಡಿಕೊಳ್ಳುತ್ತದೆ; ದೈವೀ ಹುಟ್ಟಿನ ಮತ್ತು ದೈವೀ ಕಾರ್ಯದ ಪಾತ್ರನನ್ನಾಗಿಸಿಕೊಳ್ಳುತ್ತದೆ. ಇದು ಹೀಗಾಗಲೇಬೇಕು ಇಲ್ಲದಿದ್ದಲ್ಲಿ ಅವತಾರದ ಉದ್ದೇಶ ಈಡೇರಿದಂತಾಗುವುದಿಲ್ಲ; ಹೀಗಾಗಿ ಅವತಾರಿಯ ಮೂಲ ಉದ್ದೇಶವು ಮಾನವ ಪ್ರಕೃತಿಯ ಮೂಲಕವೇ ದೈವೀ ಹುಟ್ಟು ಮತ್ತು ದೈವೀ ಕಾರ್ಯಗಳನ್ನು ಮಾಡಬಹುದೆಂದು ತೋರಿಸುವುದಾಗಿದೆ. ಮಾನವ ಪ್ರಜ್ಞೆಯ ಮೂಲಕವೇ ದೈವೀ ಪ್ರಜ್ಞೆಯ ಸಾರವನ್ನು ಪ್ರಕಟಪಡಿಸಲು ಹೊಂದಾಣಿಕೆ ಮಾಡಬಹುದಾಗಿದೆ, ಇದರ ಉಪಕರಣಗಳ ಶಕ್ತಿಗಳಾದ ಬೆಳಕು, ಪ್ರೀತಿ, ಸಾಮರ್ಥ್ಯ, ಪಾವಿತ್ರ್ಯತೆಯನ್ನು ಉನ್ನತೀಕರಣಗೊಳಿಸಿ ಪಾತ್ರದ ಯೋಗ್ಯತೆಯನ್ನು ಹೆಚ್ಚಿಸಿ ಮತ್ತು ಅದನ್ನು ಹೇಗೆ ಮಾಡಬೇಕೆಂದು ತೋರಿಸುವುದೇ ಅವತಾರಿಯ ಕೆಲಸವಾಗಿದೆ. ಒಂದು ವೇಳೆ ಅವತಾರಿಯು ಪವಾಡ ಸದೃಶ್ಯ ರೀತಿಯಲ್ಲಿ ಕೆಲಸ ಮಾಡಿದರೆ ಈ ಉದ್ದೇಶವನ್ನು

ಈಡೇರಿಸಲಾಗುವದಿಲ್ಲ. ಅವತಾರಿಯು ಕೇವಲ ಪವಾಡ ಸದೃಶವಾಗಿ ಕಾರ್ಯ ಮಾಡಿದರೆ ಅದು ಅರ್ಥವಿಲ್ಲದ ಅಸಂಬದ್ಧತೆಯಾಗಿರುತ್ತದೆ; ಅದರ ಅರ್ಥ ಪವಾಡ ಸದೃಶ್ಯ ಶಕ್ತಿಗಳು ಇರಲೇಬಾರದು ಎಂದಲ್ಲ, (ಕ್ರೈಸ್ತನ ಪವಾಡ ಸದೃಶ್ಯ ಗುಣಪಡಿಸುವಿಕೆ), ಮಾನವನ ಪ್ರಕೃತಿಯಲ್ಲಿ ಪವಾಡ ಸದೃಶ್ಯ ಶಕ್ತಿಗಳನ್ನು ಉಪಯೋಗಿಸುವ ಸಾಧ್ಯತೆಯಿದೆ; ಈ ಶಕ್ತಿಗಳು ಇರಲೇಬೇಕೆಂದೇನಲ್ಲ, ಅದೇ ಮೂಲ ವಿಷಯವೂ ಅಲ್ಲ, ಅಥವಾ ಜೀವನವೆಂಬುವುದೇ ಪವಾಡ ಸದೃಶ್ಯ ಶಕ್ತಿಗಳ ಪ್ರದರ್ಶನದ ಆಟವಾಗಬೇಕಿಲ್ಲ. ಅವತಾರಿಯು ಒಬ್ಬ ಪವಾಡ ಸದೃಶ್ಯ ವ್ಯಕ್ತಿಯೆಂದು ತೋರಿಸಿಕೊಳ್ಳಲು ಬಂದಿರುವುದಿಲ್ಲ, ಆತನ ಕಾರ್ಯವು ಮಾನವತೆಗೆ ದೈವೀ ನಾಯಕನಾಗಿ ಮತ್ತು ದೈವೀ ಮಾನವತೆಯ ಉದಾಹರಣೆಯಾಗಿ ತೋರಿಸುವುದಾಗಿದೆ. ಆತನು ಮಾನವನ ದುಃಖ ಮತ್ತು ದೈಹಿಕ ಯಾತನೆಯನ್ನೂ ಸಹ ಧಾರಣೆ ಮಾಡಿಕೊಂಡು ಮತ್ತು ಅದರ ಮೂಲಕವೇ ಹೇಗೆ ಮುಕ್ತನಾಗಬೇಕೆಂದು ತೋರಿಸಿದವನೇ ಬುದ್ಧ. ಎರಡನೆಯದಾಗಿ ಬುದ್ಧನು ಮಾನವ ಪ್ರಕೃತಿಯಲ್ಲೇ ದುಃಖದಿಂದ ಹೇಗೆ ಮುಕ್ತನಾಗಬೇಕೆಂದು ತೋರಿಸಿದ್ದಾನೆ. ವಿಚಾರವಾದಿಯು ಕ್ರೈಸ್ತನನ್ನು ನೋಡಿ ಕೂಗಿ ಹೇಳುತ್ತಾನೆ, "ಒಂದು ವೇಳೆ ನೀನು ದೇವರ ಮಗನೇ ಆಗಿದ್ದರೆ ಶಿಲುಬೆಯಿಂದ ಕೆಳಗಿಳಿದು ಬಾ", ಅಥವಾ ಅವತಾರಿಯು ದೈವಾಂಶವಲ್ಲ ಏಕೆಂದರೆ ಅವನು ಸಾಯುತ್ತಾನೆ. ಮತ್ತು ಸಾವನ್ನು ತರುವ ರೋಗಗಳಿಂದ ಸಾಯುತ್ತಾನೆ. ಈ ವಿಚಾರವಾದಿ ತಾನು ಏನು ಹೇಳುತ್ತಿದ್ದಾನೆಂದು ಅವನಿಗೇ ಅರಿವಿಲ್ಲ, ಏಕೆಂದರೆ ಅವತಾರದ ಮೂಲ ಉದ್ದೇಶದ ಸಾರವನ್ನೇ ತಿಳಿದುಕೊಂಡಿಲ್ಲ. ದೈವೀ ಆನಂದವನ್ನು ಸಾರುವ ಅವತಾರಿಯು ಬರುವ ಮೊದಲೇ ದುಃಖ ಮತ್ತು ಯಾತನೆಯನ್ನು ಸಹಿಸುವ ಅವತಾರಿಯು ಬರಲೇಬೇಕಾಗುತ್ತದೆ; ಮಾನವ ಇತಿಮಿತಿಗಳನ್ನು ಧಾರಣೆ ಮಾಡಿಕೊಂಡು ಅವುಗಳನ್ನು ಹೇಗೆ ಮೀರಬೇಕೆಂದು ತೋರಿಸಬೇಕಾಗುತ್ತದೆ; ಯಾವ ರೀತಿಯಲ್ಲಿ ಮತ್ತು ಎಷ್ಟರ ಮಟ್ಟಿಗೆ ಈ ಇತಿಮಿತಿಗಳಿಂದ ಹೊರಬರುತ್ತೇವೋ, ಅದು ಕೇವಲ ಅಂತರಂಗದ ಅಥವಾ ಬಹಿರಂಗದ ಇತಿಮಿತಿಗಳಾಗಿರಬಹುದು, ಅದು ಮಾನವ ಜನಾಂಗದ ಪ್ರಗತಿಯ ಹಂತದ ಮೇಲೆ ಇದು ಅವಲಂಬನೆಯಾಗಿರುತ್ತದೆ; ಹೀಗಾಗಿ ಮಾನವನಿಗಿಂತ ಅತೀತವಾದ ಪವಾಡದ ರೀತಿಯಲ್ಲಿ ಈ ಇತಿಮಿತಿಗಳನ್ನು ಮೀರಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 19/164–65**

**ಅವತಾರಿಯ ಕಾರ್ಯದ ಎರಡು ಮುಖಗಳು**

ಯಾವ ಕಾರ್ಯಕ್ಕಾಗಿ ಅವತಾರಿಯು ಅವತರಿಸುತ್ತಾನೋ ಅವನ ಹುಟ್ಟಿನ ರೀತಿಯಲ್ಲಿ ಎರಡು ಅರ್ಥ ಮತ್ತು ರೂಪವನ್ನು ಹೊಂದಿರುತ್ತಾನೆ. ಅವತಾರಿಯ ಕಾರ್ಯದ ಬಹಿರ್ಮುಖದಲ್ಲಿ ದೈವೀ ಶಕ್ತಿಯು ಬಹಿರಂಗದ ಜಗತ್ತಿನ ಮೇಲೆ ಪ್ರಭಾವ ಬೀರಿ ಅಲ್ಲಿನ ದೈವೀ ನಿಯಮವನ್ನು ಕಾಪಾಡಿಕೊಂಡು ಮರು ರೂಪವನ್ನು ಕೊಡುತ್ತಾ ಮಾನವೀಯ ಸ್ವಭಾವವು ಪರಮಾತ್ಮನೆಡೆಗೆ ಮಾಡುವ ಪ್ರಯತ್ನವು ಹಿನ್ನಡೆಯಾಗದಂತೆ ಕಾಪಾಡುವುದು ಮತ್ತು ಅದನ್ನು ಉನ್ನತಕ್ಕೆ ಮೇಲೆರಿಸುವದಾಗಿದೆ, ಅದಾಗ್ಯೂ ಪ್ರಕೃತಿಯು ಯಾವಾಗಲೂ ಕ್ರಿಯೆ–ಪ್ರತಿಕ್ರಿಯೆ, ಪ್ರಗತಿ ಮತ್ತು ವಿಗತಿಯ ರೀತಿಯಲ್ಲಿಯೇ ಮುಂದುವರಿಯುತ್ತಿರುತ್ತದೆ. ಅವತಾರಿ ಕಾರ್ಯವು ಅಂತರಂಗದಲ್ಲಿ ದೈವೀ ಶಕ್ತಿಯ ವೈಯಕ್ತಿಕ ಆತ್ಮ ಮತ್ತು ಮಾನವ ಜನಾಂಗದ ಆತ್ಮನ ಮೇಲೆ ಪ್ರಭಾವ ಬೀರಿ ಪರಮಾತ್ಮನೆಡೆಗೆ ಏರಲು ಶ್ರಮಿಸುತ್ತದೆ, ಅದರಿಂದ ದೈವತ್ವದ ಹೊಸ ರೂಪಗಳ ಅನಾವರಣವಾಗಿ ಮಾನವನ ಉನ್ನತ ಪ್ರಜ್ಞೆಯ ಅರಳುವಿಕೆಯನ್ನು ಕಾಪಾಡಿ, ನವೀಕರಿಸಿ ಸಂಪದ್ಭರಿತವನ್ನಾಗಿ ಮಾಡುತ್ತದೆ. ಅವತಾರಿಯು ಕೇವಲ ಶ್ರೇಷ್ಠವಾದ ಬಹಿರಂಗದ ಕಾರ್ಯ ಮಾಡಲು ಮಾತ್ರ ಬಂದಿರುತ್ತಾನೆ ಎಂಬ ನಂಬಿಕೆಯೇ ಸಾಮಾನ್ಯ ವ್ಯವಹಾರಿಕ ಜನರ ತಿಳಿವಳಿಕೆಯಾಗಿದೆ. ಯಾವುದೇ ಕ್ರಿಯೆ ಅಥವಾ ಘಟನೆಗಳು ತಮ್ಮದೆ ಆದ ಯಾವ ಮೌಲ್ಯವನ್ನು ಹೊಂದಿಲ್ಲ, ಆದರೆ ಯಾವ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಮತ್ತು ಯಾವ ಶಕ್ತಿಯ ಸೇವೆಯನ್ನು ಮಾಡುತ್ತಿವೆ ಎಂಬುದರ ಮೇಲೆ ಅವುಗಳ ಮೌಲ್ಯ ನಿರ್ಧಾರವಾಗುತ್ತದೆ.

ಯಾವ ಬಿಕ್ಕಟ್ಟಿನ ಸಮಯದಲ್ಲಿ ಅವತಾರಿಯು ಬಂದು ಇಳಿಯುತ್ತಾನೋ ಅದು ಬಹಿರಂಗದ ಕಣ್ಣಿಗೆ ಕೇವಲ ಘಟನೆಗಳ, ಭೌತಿಕ ಬದಲಾವಣೆಯ ಬಿಕ್ಕಟ್ಟಿನಂತೆ ಕಾಣಿಸುತ್ತದೆ, ಆದರೆ ಯಾವುದೇ ಬಿಕ್ಕಟ್ಟಿನ ಮೂಲ ಮಾನವ ಪ್ರಜ್ಞೆಯಲ್ಲಿನ ಬಿಕ್ಕಟ್ಟೆ ನಿಜವಾದ ಕಾರಣವಾಗಿರುತ್ತದೆ, ಯಾವಾಗ ಮಾನವ ಪ್ರಜ್ಞೆಯು ಒಂದು ಉನ್ನತ ಬದಲಾವಣೆ ಮತ್ತು ಹೊಸ ಬೆಳವಣಿಗೆಯಾಗಬೇಕಾದಾಗ ಬಿಕ್ಕಟ್ಟು ಸಂಭವಿಸುತ್ತದೆ. ಈ ಬದಲಾವಣೆಯ ಪ್ರಕ್ರಿಯೆಗೆ ದೈವೀ–ಶಕ್ತಿಯ ಅವಶ್ಯಕತೆಯಿರುತ್ತದೆ; ಆದರೆ ದೈವೀ ಶಕ್ತಿಯ ಯಾವ ಪ್ರಜ್ಞೆಯ ಸಾಮರ್ಥ್ಯವನ್ನು ಧಾರಣೆ ಮಾಡಿಕೊಂಡಿರುತ್ತದೆಯೋ ಅದರ ಮೇಲೆ ಶಕ್ತಿಯು ಬದಲಾಗಿರುತ್ತದೆ; ಹೀಗಾಗಿ ದೈವೀ ಪ್ರಜ್ಞೆಯು ಮಾನವ ಜನಾಂಗದ ಮನ ಮತ್ತು ಆತ್ಮದಲ್ಲಿ ಪ್ರಕಟವಾಗುವುದು ಅವಶ್ಯಕವಾಗಿದೆ. ಯಾವಾಗ ಬದಲಾವಣೆಯು ಕೇವಲ ಬೌದ್ಧಿಕ ಮತ್ತು

ಪ್ರಾಯೋಗಿಕ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆಯೋ ಆಗ ಅವತಾರಿಯ ಹಸ್ತಕ್ಷೇಪದ ಅವಶ್ಯಕತೆಯಿರುವುದಿಲ್ಲ; ಅಲ್ಲಿ ಪ್ರಜ್ಞೆಯು ಉನ್ನತೀಕರಣಗೊಂಡಿರುತ್ತದೆ, ಉನ್ನತ ಸಾಮರ್ಥ್ಯದ ಪ್ರಕಟಣೆಯಿಂದ ಸಾಮಾನ್ಯ ಜನರ ಪ್ರಜ್ಞೆಯು ತಾತ್ಕಾಲಿಕವಾಗಿ ಮೇಲೆತ್ತಲ್ಪಟ್ಟಿರುತ್ತದೆ. ಈ ಪ್ರಜ್ಞೆಯ ಶಕ್ತಿಯ ಅಲೆಯು ಕೆಲವು ವಿಶಿಷ್ಟ ವ್ಯಕ್ತಿಗಳನ್ನು ಆರಿಸಿಕೊಳ್ಳುತ್ತದೆ, ವಿಭೂತಿಗಳ ಕಾರ್ಯಚಟುವಟಿಕೆಗಳಿಂದ ಅವಶ್ಯವಾದುದನ್ನು ನೆರವೇರಿಸುತ್ತದೆ. ಯುರೋಪಿನ ಸುಧಾರಣೆ ಮತ್ತು ಫ್ರೆಂಚ್ ಕ್ರಾಂತಿಯ ಈ ತರಹದ ಬಿಕ್ಕಟ್ಟುಗಳೇ ಆಗಿದ್ದವು ಅವು ಶ್ರೇಷ್ಠ ಆಧ್ಯಾತ್ಮಿಕ ಘಟನೆಗಳೇನು ಅಲ್ಲ. ಆದರೆ ಕೇವಲ ಬೌದ್ಧಿಕ ಮತ್ತು ಪ್ರಾಯೋಗಿಕ ಬದಲಾವಣೆಗಳಾಗಿವೆ. ಮೊದಲನೆಯದು ಧಾರ್ಮಿಕ, ಎರಡನೆಯದು ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದವುಗಳಾಗಿವೆ, ಇಲ್ಲಿ ಆದ ಬದಲಾವಣೆಯು ಕೇವಲ ಮಾನಸಿಕ ಮತ್ತು ಕ್ರಿಯಾಶೀಲವಾಗಿವೆಯೇ ಹೊರತು ಆಧ್ಯಾತ್ಮಿಕ ಬದಲಾವಣೆಯಲ್ಲ. ಆದರೆ ಬಿಕ್ಕಟ್ಟಿನ ಹಿಂದಿನ ಕಾರಣವು ಆಧ್ಯಾತ್ಮಿಕ ಉದ್ದೇಶವಾಗಿದ್ದರೆ, ಆಗ ಸಂಪೂರ್ಣ ಅಥವಾ ಭಾಗಶಃ ಪರಮಾತ್ಮನ ಪ್ರಜ್ಞೆಯು ಮಾನವನ ಮನ ಮತ್ತು ಆತ್ಮದಲ್ಲಿ ಪ್ರಕಟವಾಗಿ ಆ ಬಿಕ್ಕಟ್ಟಿನ ಜನಕ ಅಥವಾ ನಾಯಕನಾಗಿ ಹೊರಹೊಮ್ಮುತ್ತಾನೆ. ಅವನೇ ಅವತಾರಿಯಾಗಿದ್ದಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 19/168–69**

## ವಿಶಿಷ್ಟ ಅವತಾರ ಮತ್ತು ವಿಭೂತಿ ಪುರುಷ

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

### ದಶಾವತಾರಗಳ ಪರಿಕಲ್ಪನೆಯಲ್ಲಿ ಹುದುಗಿದ ವಿಕಸನಾತ್ಮಕ ನೀತಿಕಥೆ

ಹಿಂದೂ ತತ್ವಗಳಲ್ಲಿ ಉಲ್ಲೇಖಿತವಾದ ದಶಾವತಾರದ ಪರಿಕಲ್ಪನೆಯು ತನ್ನೊಳಗೆ ಬುವಿಯ ಜೀವಸಂಕುಲಗಳ ವಿಕಸನದ ನೀತಿ ಕಥೆಯೊಂದನ್ನು ಹೊತ್ತು ತಂದಿದೆ. ಜೀವ ವಿಕಸನದ ಆಧುನಿಕ ತತ್ವದಂತೆ ಈ ಬುವಿಯಲ್ಲಿ ಮೊದಲು ಜೀವೋತ್ಪತ್ತಿ ಸಂಭವಿಸಿರುವುದು ನೀರಿನೊಳಗೆ; ನಂತರ ನಿಧಾನವಾಗಿ ಜಲದಿಂದ ನೆಲತತ್ವಕ್ಕೆ ಮುಂದುವರಿದ ಪ್ರಭೇದವೊಂದು ನೆಲ–ಜಲ ಎರಡರಲ್ಲೂ ಬದುಕಬಲ್ಲ ಉಭಯಚರವಾಗಿ ಕಾಣಿಸಿಕೊಂಡಿತು; ಆನಂತರ ಕ್ರಮೇಣ ಪೂರ್ಣರೂಪದಲ್ಲಿ ಭೂವಾಸಿಯಾದ ಪ್ರಭೇದವು ಗೋಚರಿಸಿತು; ನಂತರ ಆ ಪ್ರಭೇದದಲ್ಲಾದ

ಪರಿವರ್ತನೆಯಿಂದ ಅದು ತನ್ನಲ್ಲಿನ ಮೃಗೀಯ ಸ್ವರೂಪಗಳಿಂದ ವಿಕಸನದ ಇನ್ನೊಂದು ಮೆಟ್ಟಿಲೆಂಬಂತೆ ಮಾನವನ ಸ್ತರಕ್ಕೆರಲು ಪ್ರಯತ್ನಿಸಿತು; ಇದರಿಂದಾಗಿ ಕುಬ್ಜರೂಪಿ ಮಾನವನ ಉದಯವಾಯಿತು; ಹೀಗೆ ಈ ಪ್ರಕ್ರಿಯೆ ಮುಂದುವರಿದಂತೆ ಕುಬ್ಜ ಮಾನವನು ಸುತ್ತಣ ಪ್ರಪಂಚದಲ್ಲಿ ತನ್ನ ಉಳಿವಿಗಾಗಿ ಮಾಡುವ ಹೋರಾಟದಲ್ಲಿ ಅದಿಮ ಆಯುಧಗಳನ್ನು ಬಳಸಲಾರಂಭಿಸಿದನು. ಈ ನಿರಂತರ ಬೆಳವಣಿಗೆಯಿಂದ ಆದಿಮಾನವನ ಬೌದ್ಧಿಕ ಸ್ತರವು ಹೆಚ್ಚೆಚ್ಚು ಊರ್ಧ್ವಮುಖಿ–ಯಾಗುತ್ತಾ ಸಾಗಿತ್ತು. ತತ್ಪರಿಣಾಮವಾಗಿ ನಾಗರಿಕ ಸಂಕುಲವೊಂದು ಬುವಿಯನ್ನು ಹೊಸ ಸಿದ್ಧಾಂತಗಳೆಡೆ ಕರೆದೊಯ್ದಿತು. ಆದರೆ ಮರ್ತ್ಯಕ್ಕೆ ಇದಷ್ಟೇ ಸಾಕಾಗಿರಲಿಲ್ಲ. ಅದು ತನ್ನ ಬೌದ್ಧಿಕ ಸ್ತರದಿಂದ ಪ್ರಜ್ಞೆಯ ಅತ್ಯುಚ್ಚ ಪಾತಳಿಗಳೆಡೆ ಆರೋಹಿಸಬೇಕಿತ್ತು. ಅದಕ್ಕೆ ತನ್ನ ಮಾನಸಿಕ ಹಂತಕ್ಕೂ ಮೀರಿದ ಅತಿಮಾನಸ ಪ್ರಜ್ಞೆಯೊಡನೆ ಸಂಪರ್ಕ ಸಾಧಿಸಬೇಕಿತ್ತು. ಈ ಸಾಧನೆಗಾಗಿ ಬುವಿಗೆ ಅಧಿಮಾನವನ, ಮುಂದೊಮ್ಮೆ ಅತಿಮಾನವನ ಅವತರಣಿಕೆಯಾಗಬೇಕಿತ್ತು. ಬುವಿಯನ್ನು ಭುವನದೆಡೆಗೆ ಕೊಂಡೊಯ್ಯಬಲ್ಲ ಯುಗ ಪುರುಷರ ಆಗಮನವಾಗಬೇಕಿತ್ತು.

ಈ ಆಧುನಿಕ ವಾದಕ್ಕೆ ಉಕ್ತವೆಂಬಂತೆ ದಶಾವತಾರದಲ್ಲಿ ಪ್ರಥಮವಾಗಿ ಜಲ ತತ್ವವನ್ನು ಸಾಧಿಸಿದ್ದ ಮತ್ಸ್ಯಾವತಾರದ ಉಲ್ಲೇಖವಿದೆ; ನಂತರ ಉಭಯಚರಿಯಾದ ಕೂರ್ಮವು ದ್ವಿತೀಯ ಅವತಾರಿಯಾಗಿ ನಿಲ್ಲುತ್ತದೆ (ನೆಲ–ಜಲ ಎರಡೂ ತತ್ವವನ್ನು ಸಾಧಿಸಿರುವ ಸಂಕೇತದಂತೆ ಕೂರ್ಮಾವತಾರವು ಸಮುದ್ರ ಮಂಥನದ ಪೌರಾಣಿಕ ಕಥಾನಕದಲ್ಲಿ ಸಾಗರದಾಳದ ಜಲದಲ್ಲಿ ನಿಂತು ಮಂದಾರ ಪರ್ವತವೆಂಬ ನೆಲಪ್ರತಿಮೆಯನ್ನು ಎತ್ತಿಹಿಡಿದು ಏಕಕಾಲಕ್ಕೆ ಎರಡೂ ತತ್ವವನ್ನು ಸಮೀಕರಿಸಿತ್ತು.). ಮುಂದೆ ಜಲತತ್ವದಿಂದ ಸಂಪೂರ್ಣವಾಗಿ ನೆಲತತ್ವಕ್ಕೆ ತನ್ನನ್ನು ಪ್ರವರ್ತಿಸಿಕೊಂಡ ವರಾಹವತಾರವು ಪೂರ್ಣರೂಪದ ಭೂಚರವಾಗಿ ನೆಲೆಸಲಾರಂಭಿಸಿದರೂ ಅದು ಮರ್ತ್ಯದ ನಿಯಮಗಳಿಗೆ ಇನ್ನೂ ಹೊಂದಿಕೊಂಡಿರಲಿಲ್ಲ, ಹಾಗಾಗಿ ಆ ಅವತಾರಿ ಪ್ರಭೇದವಿನ್ನೂ ಮೃಗೀಯ ಪ್ರವೃತ್ತಿಯಲ್ಲಿಯೇ ಬದುಕುತ್ತಿತ್ತು (ಭೂಮಿಯನ್ನು ತನ್ನ ಕೋರೆಗಳಲ್ಲಿ ಎತ್ತಿಹಿಡಿದ ವರಾಹವತಾರವು ತಾನು ಪೂರ್ಣರೂಪದಿ ನೆಲತತ್ವವನ್ನು ಸಾಧಿಸಿರುವದನ್ನು ಸಾಕ್ಷೀಕರಿಸಿತ್ತು.); ಆನಂತರದಲ್ಲಿ ಅಸ್ತಿತ್ವಕ್ಕೆ ಬಂದ ಚತುರ್ಥ ನರ–ಸಿಂಹ ಅವತಾರದ ರೂಪದಲ್ಲಿ ಮೃಗೀಯತನದಿಂದ ಮಾನವತ್ವದೆಡೆಗೆ ಆರೋಹಿಸುತ್ತಿರುವ ನರ–ವಾನರನಾದ ಅರ್ಧಮಾನವನ ಉದ್ಭವವಾಯಿತು; ಈ ಪ್ರಕ್ರಿಯೆಯು ಮುಂದುವರಿದಂತೆ ಪೂರ್ಣ ನರನ ಸಂಕೇತವಾದ ಕುಬ್ಜರೂಪಿ

ವಾಮನಾವತಾರವು ಪಂಚಮದ ಸ್ಥಾನವನ್ನು ಪಡೆಯಿತು. ಈ ಕುಬ್ಜ ನರನು ತನ್ನ ಭೌತಿಕತೆಯಲ್ಲಿ ಉನ್ನತಿಯನ್ನು ಸಾಧಿಸದಿದ್ದರೂ, ತನ್ನಾಳದೊಳಗೆ ದೈವೀಕತೆಯ ಅಂಶವೊಂದನ್ನು ಹೊತ್ತು ನಿಂತಿದ್ದನು (ನೆಲದಿಂದ ಊರ್ಧ್ವದೆಡೆಗೆ ಆರೋಹಿಸಲು ಪ್ರಯತ್ನಿಸುತ್ತಿರುವ ಪ್ರಭೇದವಾಗಿ, ನೆಲತತ್ವದಿಂದ ಆಕಾಶ ತತ್ವದೆಡೆಗೆ ಏರಿಹೋಗಬಲ್ಲ ಸಾಹಸಿಯಾಗಿ, ಇದಕ್ಕೆ ಸಾಂಕೇತಿಕಾರ್ಥದಂತೆ ಏಕಕಾಲದಲ್ಲಿ ನೆಲ ಮತ್ತು ಆಕಾಶ ಎರಡರಲ್ಲೂ ಸಮನ್ವಯ ಸಾಧಿಸಿದಂತೆ ವಾಮನನು ತ್ರಿಪದ ವಿಕ್ರಮಣದಿಂದ ಆಕಾಶವನ್ನಳೆದನು); ಇನ್ನು ಮುಂದೆ ಬರಲಿರುವ ರಾಜಸಿಕ, ಸಾತ್ವಿಕ ಮತ್ತು ನಿರ್ಗುಣ ಅವತಾರಿಗಳು ಮರ್ತ್ಯವನ್ನು ಬೌದ್ಧಿಕ(ರಾಜಸಿಕ) ಹಂತದಿಂದ ಅತಿಬೌದ್ಧಿಕ(ಸಾತ್ವಿಕ) ಹಂತಕ್ಕೂ, ಅತಿಬೌದ್ಧಿಕ(ಸಾತ್ವಿಕ) ಹಂತದಿಂದ ಅತಿಮಾನಸ(ನಿರ್ಗುಣ) ಹಂತಕ್ಕೂ ಕೊಂಡೊಯ್ಯಬೇಕಿತ್ತು. ಹಾಗಾಗಿ ಮುಂದೆ ಇಳೆಗಿಳಿದ ಕೃಷ್ಣ, ಬುದ್ಧ ಮತ್ತು ಕಲ್ಕಿ ಅವತಾರಗಳು ಆ ಕೊನೆಯ ಮೂರು ಸ್ತರಗಳನ್ನು ಸಂಕೇತಿಸುವ ಪ್ರತಿಮೆಗಳಾಗಿ ಭುವಿಯ ಮೇಲೆ ತಮ್ಮ ಅವತರಣಿಕೆಗಿರುವ ಮಹತ್ತರ ಕಾರ್ಯವನ್ನು ಪೂರೈಸಿದರು. ಆಧ್ಯಾತ್ಮಿಕ ಪ್ರೇರಣೆಯ ಮೂಲಕ ಇಳೆಯಿಂದ ಮುಗಿಲಿನೆಡೆಗೆ ವಿಕಸನದ ಶ್ರೇಣಿಯೊಂದನ್ನು ನೆಟ್ಟ ಕೃಷ್ಣನು ಮರ್ತ್ಯವನ್ನು ಅಧಿಮಾನಸದ ಪಾತಳಿಯವರೆಗೆ ಕೊಂಡೊಯ್ದನು. ಕೃಷ್ಣ ಯುಗಾಂತ್ಯದ ನಂತರ ಬಂದ ಬುದ್ಧಾವತಾರವು ಮೃಣ್ಮಯಕ್ಕೆ ಅಧಿಮಾನಸಕ್ಕೂ ಮೀರಿದ ಸರ್ವೋಚ್ಚ ವಿಮೋಚನೆಯ ಅವಶ್ಯಕತೆಯಿರುವುದನ್ನರಿತು ಅತಿಮಾನಸದ ಮಹಾಕಾರಣಮಯದ ಮಹಾದ್ವಾರವನ್ನು ತೆರೆದು ಭುವಿಯ ಔನ್ನತ್ಯಕ್ಕೆ ಅನುವು ಮಾಡಿಕೊಟ್ಟನು. ಆದರೆ ಪೃಥ್ವಿಯ ವಾತಾವರಣವು ಅತಿಮಾನಸ ಸ್ತರವನ್ನು ಗ್ರಹಿಸಲು ಇನ್ನೂ ಶಕ್ಯವಾಗದೇ ಇರುವ ಕಾರಣ ಮಾನಸವು ಸುಪ್ರಮಾನಸದ ಆ ಸುವರ್ಣ ಕದವನ್ನು ದಾಟಿ ಮೇಲೇರುವ ಪ್ರಯತ್ನವನ್ನೇ ಮಾಡಲಿಲ್ಲ. ಹಾಗಾಗಿ ಈ ವಿಕಸನವು ಇನ್ನೂ ನಕಾರಾತ್ಮಕವಾಗಿಯೇ ಉಳಿದಿದೆ. ಈ ಮಾರ್ಗದಲಿ ಅಸುರೀ ಶಕ್ತಿಗಳ ಪಡೆಯೇ ಅವ್ಯಕ್ತವಾಗಿ ನೆಲೆಸಿ ಮರ್ತ್ಯದ ಆರೋಹಣಕ್ಕೆ ಮಾರ್ಗ ಪ್ರತಿಬಂಧಕವನ್ನೊಡ್ಡುತ, ಚೋದನೆ–ಪ್ರಲೋಭನೆಗಳ ಮೂಲಕ ಸಾಹಸಿಗಳನ್ನು ಅಡ್ಡಗಟ್ಟುತ್ತ ವಿಕಸನವನ್ನು ಸ್ಥಗಿತಗೊಳಿಸುತ್ತಿರುವುದೇ ಈ ನಕಾರಾತ್ಮಕತೆಗೆ ಇನ್ನೊಂದು ಕಾರಣವಾಗಿದೆ. ಈ ಅಸುರೀ ಸೈನ್ಯವನ್ನು ಪರಾಭವಗೊಳಿಸಿ ವಿಕಸನದ ನಿಶ್ರೇಣಿಯ ಮೂಲಕ ಮರ್ತ್ಯವು ಅತಿಮಾನಸದ ಮಹಾಕಾರಣದವರೆಗೆ ಆರೋಹಿಸುವಂತೆ ಗೈದು, ಭುವಿಯ ಮೇಲೆ ದೈವೀಕ ಸಾಮ್ರಾಜ್ಯವನ್ನು ಅವರೋಹಿಸುವ ಕಾರ್ಯವು ದಶಮಾವತಾರವಾದ ಕಲ್ಕಿಯದ್ದಾಗಿದೆ. ಅಂದು ಮರ್ತ್ಯವು ಪ್ರಗತಿಯ ಅತ್ಯುಚ್ಚ ಶಿಖರವನ್ನೇರುವದರಲ್ಲಿ ಯಾವ ಸಂಶಯವೂ ಇಲ್ಲ.

ಅವತಾರಿಗಳ ಯುಗಮಾನಗಳ ಮಧ್ಯದ ಕಾಲಾವಧಿಯ ಜೀವನವನ್ನು ಅರಿಯಬೇಕಾದರೆ, ಕೃಷ್ಣನು ಬೆಳಕು ಚೆಲ್ಲಿದ ತನ್ನ ಪೂರ್ವ ಭವಾವಳಿಗಳ ಕುರಿತು ಅಭ್ಯಸಿಸಬೇಕು. ಕೃಷ್ಣನು ತನ್ನ ಹಿಂದಿನ ಹಲವು ಜನ್ಮಗಳ ಕುರಿತು ನುಡಿದಿದ್ದಾನೆ. ಆ ಎಲ್ಲ ಭವಗಳಲ್ಲಿ ತಾನು ಸರ್ವೋಚ್ಚನೇ ಆಗಿರುವೆನೆಂದೇನು ಆತ ವಾದಿಸಿಲ್ಲ. ತನ್ನ ಅವತಾರಿ ಯುಗದಲ್ಲಿ ತನ್ನನ್ನು ತಾನು ಪರಮಾತ್ಮನೆಂದು ಹೇಳಿಕೊಂಡ ಕೃಷ್ಣ ವಾಸುದೇವನು ಒಂದು ಕಾಲದಲ್ಲಿ ತಾನೊಬ್ಬ ವಿಭೂತಿಯಾಗಿ ಬದುಕಿದ್ದನ್ನೂ ನೆನಪಿಸಿಕೊಳ್ಳುತ್ತಾನೆ. ಇದರಿಂದ ನಾವು ಅರಿತುಕೊಳ್ಳಬೇಕಾದ ಸಂಗತಿಯೆಂದರೆ ತನ್ನಾಳದೊಳಗೆ ಸರ್ವೋಚ್ಚ ದೈವೀಕ ಪ್ರಜ್ಞೆಯೊಂದನ್ನು ಹೊಂದಿದ ಆತ್ಮವು ವಿಭೂತಿ ರೂಪದಲ್ಲಿ ನೆಲೆಸಿ ತನ್ನ ಪರಮೋಚ್ಚ ಶಕ್ತಿಯನ್ನು ಮರೆಯಾಗಿಸಿಕೊಂಡು, ಅವ್ಯಕ್ತವಾಗಿ ಬದುಕುತ್ತ, ತನ್ನ ಕಾರ್ಯವನ್ನು ಮಾಡುತ್ತ, ಬರಲಿರುವ ತನ್ನ ಕರ್ಮ ಯುಗಕ್ಕಾಗಿ ಕಾಯುತ್ತಿರುತ್ತದೆ ಎಂಬುದಾಗಿದೆ. ಬುವಿಯ ವಿಕಸನಕ್ಕೆ ಅವತಾರದ ಅವಶ್ಯಕತೆಯಿದೆ ಎಂಬುದನ್ನು ನಾವೆಲ್ಲರೂ ಅರಿತಿರಬೇಕು. ಮರ್ತ್ಯದಲ್ಲಿ ಜರುಗ–ಬೇಕಿರುವ ಮಹತ್ತರ ಚಕ್ರೀಯ ಪರಿವರ್ತನೆಗಾಗಿ ಅವತಾರಿಯ ಆಗಮನವಾದರೆ, ಅತ್ಯಲ್ಪ ಪ್ರಮಾಣದ ಪರಿವರ್ತನೆಗಾಗಿ ವಿಭೂತಿಯ ಉದಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/487**

**ರಾಮಾವತಾರ**

ರಾಮನ ದಿವ್ಯ ವ್ಯಕ್ತಿತ್ವದಿಂದ ಪ್ರೇರಿತರಾಗಿ ನಿಮ್ಮ ಪ್ರಸ್ತುತ ವ್ಯಕ್ತಿತ್ವವನ್ನು ಆ ಅವತಾರಿಯ ಹಂತಕ್ಕೆ ಏರಿಸಿ ನೀವೂ ಒಬ್ಬ ದಿವ್ಯಾತ್ಮರಾಗ ಬಯಸುವ ನಿಮ್ಮ ಮನೋಭಾವನೆಯ ಕುರಿತು ನಾನೇನೂ ಹೇಳುವದಿಲ್ಲ. ಏಕೆಂದರೆ ಇಲ್ಲಿ ವಾಲ್ಮೀಕಿಯು ಚಿತ್ರಿಸಿದ ತನ್ನ ಕಥಾನಾಯಕನ ವ್ಯಕ್ತಿತ್ವ, ಅವನ ಕಾರ್ಯಕ್ಷೇತ್ರ ಮತ್ತು ಕರ್ಮ ಭೂಮಿಕೆಗಳೆಲ್ಲವನ್ನು ಪರಿಗಣಿಸಬೇಕಾಗುತ್ತದೆ. (ಶ್ರೀರಾಮನ ದಿವ್ಯ ವ್ಯಕ್ತಿತ್ವಕ್ಕೇರಬಯಸುವ ಈಗಿನ ಯುಗಮಾನದ ಮಾನವರು ತಿಳಿದಿರಬೇಕಾದ ಮುಖ್ಯ ಸಂಗತಿಯೆಂದರೆ, ವಾಲ್ಮೀಕಿಯ ರಾಮನು ಆಧುನಿಕ ಮಾನವನಲ್ಲ, ಬದಲಾಗಿ ವಿಕಸನದ ಮಾರ್ಗದಲ್ಲಿ ಈ ಹಿಂದೆಯೇ ಘಟಿಸಿಹೋದ ಪೂರ್ವ ಯುಗವೊಂದರ ಆದರ್ಶ ಮಾನವ. ಆ ಪುರುಷೋತ್ತಮನ ನೈತಿಕ ಆದರ್ಶ ಗುಣಗಳು ಪ್ರಸ್ತುತ ಕಾಲಘಟ್ಟದಲ್ಲಿ ಅಸಾಧ್ಯ ಮತ್ತು ಅಪ್ರಸ್ತುತ!) ರಾಮಾಯಣದ ನಾಯಕ ಶ್ರೀರಾಮನ ಅಸ್ತಿತ್ವವನ್ನು ಆ ಯುಗಮಾನ ನೆಲೆಯಿಂದ ಹೊರತೆಗೆದು,

ಆಧುನಿಕ ಮಾನಸ ಶಾಸ್ತ್ರೀಯ ದೃಷ್ಟಿಯಿಂದ ಭೇದಿಸಿ ನೋಡಿದರೆ. ಆ ಆದರ್ಶಗಳೂ ಸಹ ಕ್ಷಣಾರ್ಧದಲ್ಲಿ ತನ್ನ ಅಸ್ತಿತ್ವವನ್ನು–ಮಹತ್ವವನ್ನು ಕಳೆದುಕೊಳ್ಳುತ್ತವೆ.

ಅವತಾರಿ ತತ್ವಕ್ಕೆ ಸಂಬಂಧಿಸಿದಂತೆ, ಆ ಒಂದು ನಿರ್ಧಿಷ್ಟ ಯುಗ ಮಾನದಲ್ಲಿ ಮೃಣ್ಮಯಕೆ ರಾಮನ ಅವತರಣಿಕೆಗಿದ್ದ ಅವಶ್ಯಕತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ವಿಕಸನದ ಮಾರ್ಗದಲ್ಲಿ ಪ್ರಕೃತಿಯು ಕಲ್ಪಿಸಿದ ಮಹತ್ತರವಾದ ಯೋಜನೆಯಲ್ಲಿ ರಾಮನು ತನ್ನ ಕಾರ್ಯವನ್ನು ಸಮರ್ಥವಾಗಿ ಪೂರೈಸಿ, ಸಂಕುಲದ ಪ್ರಜ್ಞಾರೋಹಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾನೆ. ನಾನು ರಾಮಾಯಣವನ್ನು ಓದುವಾಗಲೆಲ್ಲ ಆ ಪಾತ್ರ ಪ್ರಪಂಚ ಮತ್ತು ಕಥಾನಕವನ್ನು ಶ್ರೀಮಂತಗೊಳಿಸಿದ ತಾತ್ವಿಕ ಸಂದೇಶವನ್ನು ಕಂಡು ಪ್ರೇರಿತನಾಗುತ್ತೇನೆ. ಮೇಲ್ನೋಟಕ್ಕೆ ರಾಮ ಪುರಾಣವು ಒಂದು ಕಾಲ್ಪನಿಕ ಕಥೆಯಂತೆ ಕಂಡುಬಂದರೂ, ಅದರ ಅಂತರಾರ್ಥವನ್ನು ಸೂಕ್ಷ್ಮವಾಗಿ ಗ್ರಹಿಸಿದಲ್ಲಿ ಇದು ಬುವಿಯ ವಿಕಸನಾ ಪಥದಲ್ಲಿ ಸಂಭವಿಸಿದ ಒಂದು ಮಹಾನ್ ನಿರ್ಣಾಯಕ ಪರಿವರ್ತನೆಯ ಘಟನೆಯನ್ನು ನಿರೂಪಿಸುವ ನೀತಿಕಥೆಯೆಂಬುದು ಸ್ಪಷ್ಟವಾಗುತ್ತದೆ. ಮತ್ತು ಕಥೆಯ ಆದ್ಯಂತಕ್ಕೂ ಬಂದುಹೋಗುವ ಪಾತ್ರಗಳ ವ್ಯಕ್ತಿತ್ವ, ಮಹತ್ವ ಮತ್ತು ಕಾರ್ಯಗಳಿಗೆ ಆರೋಪಿಸಿದ ವಿಶ್ವಮಾನವ ಶಕ್ತಿಯನ್ನು ಗಮನಿಸಿದರೆ, 'ಆ ಕಥಾನಕದಲ್ಲಿ ಜರುಗಿದ ಎಲ್ಲ ಘಟನೆಗಳು ಬುವಿಯ ವಾತಾವರಣದಲ್ಲಿ ಸಂಭವಿಸಿಯೇ ಇಲ್ಲವೇನೋ? ಅವೆಲ್ಲ ಕಾರ್ಯಗಳು ಮತ್ತೊಂದು ಆಯಾಮದಲ್ಲಿ ನೆಲೆಸಿರುವ ಅತಿಮಾನವ ಶಕ್ತಿಗಳಿಂದಲೇ ರೂಪಿಸಲ್ಪಟ್ಟಿದೆಯೇನೋ?' ಎಂದೆನಿಸುತ್ತದೆ. ಏಕೆಂದರೆ, ಅವತಾರಿಗಳು ಅತೀಂದ್ರಿಯ ಕಾರ್ಯಗಳನ್ನು ಮಾಡಲು ನಿಯೋಜಿತರಾದವರಲ್ಲ, ಬದಲಾಗಿ ಯುಗಮಾನಗಳಿಗನುಸಾರವಾಗಿ ಮೃಣ್ಮಯವನ್ನು ವಿಕಸನದ ಮಾರ್ಗದಲ್ಲಿ ಮುನ್ನಡೆಸುವ ಮಹತ್ತರ ಕಾರ್ಯಕ್ಕಾಗಿ ಭುವಿಗೆ ಬಂದಿಳಿದಿರುತ್ತಾರೆ. ಅವರ ಕಾರ್ಯದಿಂದ ಪೃಥ್ವಿಯ ಜನಾಂಗವು ತಾನು ಬದುಕುತ್ತಿರುವ ಪಾತಳಿಗಿಂತಲೂ ಶ್ರೇಷ್ಠತರವಾದ ಇನ್ನೊಂದು ಭೂಮಿಕೆಯೆಡೆಗೆ ಸಾಗಿಹೋಗುತ್ತಾರೆ.

*

**ಶ್ರೀರಾಮನ ಕರ್ತವ್ಯ**

ಅವತಾರಿಗಳು ಆಧ್ಯಾತ್ಮಿಕ ನೆಲೆಯನ್ನು ಸ್ಥಾಪಿಸಲು ಬಂದ ಪ್ರವಾದಿಗಳಲ್ಲ. ಅಂತೆಯೇ ರಾಮನೂ ಸಹಿತ ಪ್ರವಾದಿಯಲ್ಲ. ಆತನೊಬ್ಬ ಸಾಕ್ಷಾತ್ಕಾರಿ, ದಿವ್ಯತೆಯ ಸ್ಥಾಪಕ. ಹಾಗೆಂದು ಅವನು ಬಾಹ್ಯ ಪ್ರಕೃತಿಯನ್ನು ವೈಭವೀಕರಿಸುವ ಪ್ರಭೃತಿಯಲ್ಲ.

ಬದಲಾಗಿ ಆತನೊಬ್ಬ ಅಂತರಂಗದ ಆತ್ಮ ಸಾಮ್ರಾಜ್ಯದ ಸ್ಥಾಪಕ. ಅದಾಗ್ಯೂ ಆತ ಬಾಹ್ಯ ಸಂಸ್ಕೃತಿಯಿಂದ ಹಲವಾರು ವಿಷಯಗಳನ್ನು ಅರಿತುಕೊಂಡಿರುತ್ತಾನೆ. ನಾನು ಈ ಮುಂಚೆಯೇ ತಿಳಿಸಿದಂತೆ ಬುವಿಯು ಸದಾಕಾಲ ತನ್ನ ಭೌಗೋಳಿಕ ವಿಕಸನಕ್ಕೆ ಅಗತ್ಯವಿರುವ ಮೂಲಭೂತ ಅಂಶಗಳನ್ನು ದಿವ್ಯ ಚೈತನ್ಯದ ಮೂಲಕ ಸಂಗ್ರಹಿಸಿಕೊಂಡು, ದಿವ್ಯತೆಯೆಡೆಗೇರುತ್ತ, ಕೊನೆಗೊಮ್ಮೆ ತನ್ನ ಮರ್ತ್ಯ ಪ್ರಜ್ಞೆಯನ್ನು ಅತ್ಯುಚ್ಚ ಪಾತಳಿಯಲ್ಲಿ ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಆದರೆ ಆ ವಿಕಸನದ ಆಧ್ಯಾತ್ಮಿಕ ಹಂತವನ್ನು ಸ್ಥಾಪಿಸುವುದು ರಾಮನ ಕರ್ತ್ಯವ್ಯವಾಗಿರಲಿಲ್ಲ. ಹಾಗಾಗಿ ಅವನು ಅದರ ಬಗ್ಗೆ ಯೋಚಿಸಲಿಲ್ಲ. ಅವನ ಅವತರಣಿಕೆಗಿದ್ದ ಪ್ರಮುಖ ಕರ್ತವ್ಯವೆಂದರೆ, ರಾವಣನನ್ನು ನಾಶಪಡಿಸುವುದು ಮತ್ತು ಆ ಅಸುರೀ ನೆಲೆಯನ್ನು ನಿರ್ಮೂಲಿಸುವದರ ಮೂಲಕ ರಾಮ ರಾಜ್ಯವೊಂದನ್ನು ಸ್ಥಾಪಿಸುವುದಾಗಿತ್ತು. ಇನ್ನೊಂದು ರೀತಿಯಿಂದ ಹೇಳಬೇಕಾದರೆ, ತನ್ನ ಜೀವನ ಯಜ್ಞವನ್ನು ಸಂಪನ್ನಗೊಳಿಸುವ ಮೂಲಕ ಬುವಿಯ ಭವಿತವ್ಯದಲ್ಲಿ, ತನ್ನ ಬದುಕಿರುವ ಕಾರಣ ಸೂಕ್ಷ್ಮ ಭಾವನೆ; ನೈತಿಕತೆ ಅಥವಾ ಸತ್ಯ, ವಿಧೇಯತೆ, ಸಹಕಾರಯುತ ಸಾಮರಸ್ಯತೆ, ಹಾಸ್ಯ ಪ್ರಜ್ಞೆ, ಸ್ಥಾನಿಕ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಪ್ರಜ್ಞೆಗಳೆಂಬ ಕನಿಷ್ಠ ನೈತಿಕ ಆದರ್ಶಗಳ ಮೂಲಕ ತನ್ನ ಜೀವನವನ್ನು ತಾನೇ ನಿಯಂತ್ರಿಸಿಕೊಳ್ಳುವ ಪ್ರಜೆಗಳನ್ನೊಳಗೊಂಡ ಸಾತ್ವಿಕಯುತವಾದ ನಾಗರೀಕ ಸಮಾಜವೊಂದನ್ನು ಸ್ಥಾಪಿಸುವದಾಗಿತ್ತು. ಆದರೆ ಈ ರೀತಿಯಾದ ನಾಗರೀಕ ಸಮಾಜವನ್ನು ಪೃಥ್ವಿಯ ವಾತಾವರಣದಲ್ಲಿ ನೆಲೆಗೊಳಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಏಕೆಂದರೆ, ಆ ಯುಗಮಾನದಲ್ಲಿ ಮೃಗೀಯ ಮನ ಮತ್ತು ವೈಚಾರಿಕ ವಲಯದ ಅಹಮಿಕೆಯ ಶಕ್ತಿಗಳು ಜನ ಜೀವನವನ್ನು ಆಕ್ರಮಿಸಿಕೊಂಡು ನಿರಂಕುಶವಾದ ಪ್ರಭುತ್ವವೊಂದನ್ನು ಸ್ಥಾಪಿಸಿದ್ದವು. ಇನ್ನೊಂದು ವಿಧದಲ್ಲಿ ಹೇಳಬೇಕಾದರೆ, ವಾನರ ಮತ್ತು ರಾಕ್ಷಸ ಸಂಕುಲಗಳೇ ಅಂದಿನ ಯುಗವನ್ನು ಸೂರೆಗೈದಿದ್ದವು. ಇಂತಹ ಸಂದಿಗ್ದ ದೇಶ–ಕಾಲದಲ್ಲಿ ರಾಮನು ಹೇಗೆ ತನ್ನ ಅವತರಣಿಕೆಗಿದ್ದ ಅರ್ಥ(ಪುರುಷಾರ್ಥ)ವನ್ನು, ಜೀವನ ಕಾರ್ಯವನ್ನು ಪೂರೈಸಿದನು ಎಂಬುದರ ಆಧಾರದ ಮೇಲೆ ಅವನು ಅವತಾರಿ ಹೌದೋ? ಅಲ್ಲವೋ? ಎಂಬುದನ್ನು ನಿರ್ಣಯಿಸಬೇಕಿದೆ. ಕ್ಷತ್ರಿಯತನವೆಂದರೆ, ಆಯುಧಪಾಣಿಯಾಗಿ ವನಚರ ಮೃಗಗಳನ್ನು ಬೇಟೆಯಾಡಿ ಕೊಲ್ಲುವದಲ್ಲ, ಬದಲಾಗಿ ತನ್ನೊಳಗಿರುವ ಅಹಮಿಕೆಯೆಂಬ ಮೃಗೀಯತನದ ಪ್ರವೃತ್ತಿಯನ್ನು ಸಂಹರಿಸಿ ಮನವನ್ನು ಹತೋಟಿಯಲ್ಲಿಟ್ಟು–ಕೊಳ್ಳುವುದಾಗಿದೆ. ಅದನ್ನು ಸಾಧಿಸಿದವನೇ ನಿಜವಾದ ಕ್ಷತ್ರಿಯ! ಈ ಸಾಧನೆಗಳೆಲ್ಲವೂ

ರಾಮನ ಅಂಕೆಯಲ್ಲಿ ಸಿದ್ಧಿತವಾದುದರಿಂದ ಆತನನ್ನು ಒಬ್ಬ ಪರಿಪೂರ್ಣ ಕ್ಷತ್ರಿಯನೆಂದು ಸಮರ್ಥಿಸಬಹುದು. ಆ ಯುಗದಲ್ಲಿ ಪರಿಪೂರ್ಣ ಕ್ಷತ್ರಿಯತನವನ್ನು ಸಾಧಿಸಿದ್ದ ರಾಮನಿಗೆ ಪರಿಪೂರ್ಣ ಮಾನವತೆಯನ್ನೂ ಸಾಧಿಸಬೇಕೆಂಬ ಒತ್ತಡವಿದ್ದಿರಲಿಲ್ಲ. ಆ ಹಂತಕ್ಕೆ ಸಾತ್ವಿಕ ವ್ಯಕ್ತಿತ್ವವನ್ನು ಪ್ರತಿನಿಧಿಸುವ ಒಬ್ಬ ವಿಧೇಯನಾದ ಪ್ರಿಯಪುತ್ರ, ಕರುಣಾಶೀಲನಾದ ಸಹೋದರ, ಕೈಹಿಡಿದಾಕೆಯನ್ನು ಪ್ರೀತಿಸುವ ನಿಷ್ಠಾವಂತ ಪತಿ, ಒಲವುಳ್ಳ ತಂದೆ ಮತ್ತು ಮೈತ್ರ ಭಾವನೆಯ ಸ್ನೇಹಿತ.. ಈ ಮುಂತಾದ ಗುಣಗಳುಳ್ಳ ಸಮರ್ಥ ಪುರುಷೋತ್ತಮನೋರ್ವನ ಅಗತ್ಯವಿತ್ತು. ರಾಮನು ಆ ಎಲ್ಲ ಆದರ್ಶಗಳನ್ನು ಹೊತ್ತು ತಂದಿದ್ದನು. ಮುಖ್ಯವಾಗಿ ಸ್ನೇಹಶೀಲನಾದ ಅವನು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ವಿಧದ ಜನ ಸಮುದಾಯದ ಮಿತ್ರನಾಗಿದ್ದನು. ಉದಾಹರಣೆಗೆ, ಆತ ನಾಗರೀಕ ವಲಯದಿಂದ ಬಹಿಷ್ಕೃತನಾದ ಬೇಡ ಗುಹಕನ ಮಿತ್ರ; ಆತ ಮೃಗ ಮಾನವ(ವಾನರ) ಸಮುದಾಯದ ನಾಯಕರಾದ ಸುಗ್ರೀವ–ಹನುಮಂತರ ಸ್ನೇಹಿತ; ಪಕ್ಷಿಸಂಕುಲದ ಜಟಾಯುವಿನ ಮಿತ್ರ; ರಾಕ್ಷಸ ವಂಶದ ವಿಭೀಷಣನ ಮಿತ್ರ! ಈ ಸ್ನೇಹ ವಲಯವನ್ನು ಸಂಪಾದಿಸಿದ್ದ ರಾಮನು, ಆ ಕ್ಷಣದ ಅನಿವಾರ್ಯತೆಯನ್ನು ಭರಿಸಲು ಸ್ವಯಂಪ್ರೇರಿತನಾಗಿ ಅವರೆಡೆ ಸ್ನೇಹ ಹಸ್ತವನ್ನು ಚಾಚಿದ್ದನೇ ಹೊರತು ಪೂರ್ವ ನೃಪರುಗಳಾದ ಹರಿಶ್ಚಂದ್ರ ಮತ್ತು ಶಿಬಿಯರ ಕಥೆಗಳಲ್ಲಿರುವಂತೆ ಬಲವಂತದ ಸ್ನೇಹ ಸಂಪಾದನೆ ಅದಾಗಿರಲಿಲ್ಲ. ಅದಕ್ಕೂ ಮೀರಿದ ಸಾಮಾಜಿಕ ಸಾಮರಸ್ಯವನ್ನು ಭರಿಸಿ, ಪ್ರಭುತ್ವದಲ್ಲಿ ಸತ್ಯ, ಗೌರವ, ಸ್ಥಿರತೆ, ಧಾರ್ಮಿಕ ಪ್ರಜ್ಞೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಪ್ರಜ್ಞೆಯನ್ನು ಸ್ಥಾಪಿಸುವುದು ಅವನ ಪ್ರಮುಖ ಕರ್ತವ್ಯಗಳಲ್ಲೊಂದಾಗಿತ್ತು. ಅವುಗಳಲ್ಲಿ ಸತ್ಯ ಮತ್ತು ಗೌರವವನ್ನು ಸಮರ್ಥಿಸುವದಕ್ಕಾಗಿ ಪ್ರಕೃತಿಯಿತ್ತ ಪರಿಕ್ಷೆಯನ್ನು ಸಮರ್ಥವಾಗಿ ಎದುರಿಸಿದ ರಾಮನು ತನ್ನ ತಂದೆಯ ಮೇಲಿನ ಗೌರವಕ್ಕಾಗಿ, ಪಿತೃವಾಕ್ಯ ಪರಿಪಾಲನೆಗಾಗಿ ಈಗಾಗಲೇ ರಾಜ ಸಭೆಯಲ್ಲಿ ಜರುಗಿದ ತನ್ನ ಯುವರಾಜ ಪದವಿಯನ್ನು, ಸಿಂಹಾಸನಾಧಿಪತಿಯಾಗಲು ಮಂತ್ರಿ ಮಂಡಲದಿಂದ ಚುನಾಯಿತವಾದ ತನ್ನ ಹಕ್ಕುಗಳೆಲ್ಲವನ್ನು ತ್ಯಾಗ ಮಾಡಿ, ರಾಜ್ಯದಿಂದ ಗಡಿಪಾರಾಗಿ, ಹದಿನಾಲ್ಕು ವರ್ಷ ವನವಾಸದಲ್ಲಿ ಕಳೆದನು. ಇನ್ನು ಅವನ ಸಾಮಾಜಿಕ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ವಿಷಯಕ್ಕೆ ಬಂದರೆ, (ಪ್ರಾಚೀನ ಭಾರತೀಯರ, ಗ್ರೀಕರ, ರೋಮನ್ನರ ದೃಷ್ಟಿಯಲ್ಲಿ ಶ್ರೇಷ್ಠ ಮತ್ತು ಸರ್ವೋಚ್ಛ ನಾಗರಿಕನ ವ್ಯಕ್ತಿತ್ವವೆಂಬುದು, ಯಾವುದೋ ಒಂದು ನಿರ್ದಿಷ್ಟ ಸಮುದಾಯ ಅಥವಾ ಯಾವುದೋ ಒಬ್ಬ ನಿರ್ಧಿಷ್ಟ

ವ್ಯಕ್ತಿಯ ಅಭಿವೃದ್ಧಿಗಾಗಿ ಹೆಣಗುವ ನಾಯಕನ ಗುಣವಾಗಿರಲಿಲ್ಲ. ಬದಲಾಗಿ ಆ ಯುಗಮಾನದಲ್ಲಿ ಜೀವಿಸುತಿಹ ಇಡೀ ಮಾನವ ಸಂಕುಲವನ್ನೇ ಪ್ರಜ್ಞೆಯ ಅನಂತ ಶಿಖರಗಳೆಡೆ ಕೊಂಡೊಯ್ಯಬಲ್ಲ ಯುಗ ಪುರುಷನ ದಿವ್ಯ ಚೈತನ್ಯವಾಗಿತ್ತು.) ರಾಮನು ಆ ವಿಕಸನದ ಮಹಾಯಜ್ಞದಲ್ಲಿ ತನ್ನ ಮತ್ತು ತನ್ನಾಕೆ(ಸೀತೆ)ಯ ವೈಯಕ್ತಿಕ ಸುಖ ಸಂಪದಗಳನ್ನೇ ಹವಿಸ್ಸಾಗಿ ಅರ್ಪಿಸಿದ್ದನು. ಈ ತ್ಯಾಗವು ಅವನ ತತ್ ಪ್ರೇರಿತ ನಿರ್ಧಾರವಾಗಿರಲಿಲ್ಲ. ಏಕೆಂದರೆ ಅವನಾತ್ಮವು ಇಲ್ಲಿಯವರೆಗೆ ಹಾಯ್ದುಬಂದ ಎಲ್ಲಾ ಪುರಾತನ ಜನಾಂಗಗಳ ನೈತಿಕ ಪ್ರಜ್ಞೆಯಲ್ಲಿ ಪುಟವಿಕ್ಕಿ ಸಮರ್ಥವಾಗಿತ್ತು. ಆದರೆ ಬರಲಿರುವ ಆಧುನಿಕೋತ್ತರ ಮಾನವ ಜಾತಿಯು ಅತ್ಯಲ್ಪ ಪ್ರಮಾಣದ ಭಾವನಾತ್ಮಕ ನೈತಿಕತೆಯನ್ನು ಹೊಂದಿ, ತ್ಯಾಗ ಮನೋಭಾವನೆಯನ್ನು ಸಂಪೂರ್ಣವಾಗಿ ಅಲಕ್ಷಿಸುತ್ತಾ ಸಾಗುವದು. ಏಕೆಂದರೆ ನಮ್ಮ ಪೂರ್ವ ಪುರಾತನರು ಈ ಜಗದ ಸುರಕ್ಷತೆಗಾಗಿ, ಸಾಮಾಜಿಕ ಚೈತನ್ಯದ ಉಳಿವಿಗಾಗಿ ತಮ್ಮ ವೈಯಕ್ತಿಕ ಸುಖಭೋಗಗಳನ್ನು ತ್ಯಾಗ ಮಾಡಿದ್ದರು. ಅಂತೆಯೇ ರಾಮನೂ ಸಹ ತನ್ನ ವೈಭೋಗವನ್ನು ತೊರೆದು ವನವಾಸಿಯಾಗಿ ನೆಲೆಸಿ, ತನ್ನ ಅವತರಣಿಕೆಯ ಅಂತಿಮ ಅಧ್ಯಾಯವೆಂಬಂತೆ ರಾಕ್ಷಸ ಕುಲಜನಾದ ರಾವಣನ ಸಾರ್ವಭೌಮತ್ವವನ್ನು ನಾಶಪಡಿಸಿ, ಆ ಮೂಲಕ ಬರಲಿರುವ ಆದರ್ಶಯುತ ಸಾತ್ವಿಕ ಸಮಾಜವನ್ನು ರಕ್ಷಿಸುವುದು ಅವನ ಕರ್ತವ್ಯವಾಗಿತ್ತು. ದಿವ್ಯ ಚೇತನದ ಪ್ರೇರಣೆಯ ಮೂಲಕ ಆ ಮಹಾಯಾಗವನ್ನು ಸಂಪನ್ನಗೊಳಿಸಿದ ರಾಮನ ಆದರ್ಶಗಳು ಎರಡು ಸಹಸ್ರಮಾನಗಳಿಗಿಂತಲೂ ಹೆಚ್ಚು ಕಾಲ ಭಾರತೀಯರ ಮನ–ಮನಗಳಲ್ಲಿ ಮುದ್ರೆಯೊತ್ತಿ ನಿಂತಿತ್ತು. ಜರುಗಬೇಕಿರುವ ಒಂದು ಮಹಾಕಾರ್ಯಕ್ಕಾಗಿ ತನ್ನ ಆದರ್ಶಗಳೆಲ್ಲವನ್ನು ಒರೆಗೆ ಹಚ್ಚಿ ನಿಂತ ರಾಮನ ವ್ಯಕ್ತಿತ್ವವು ಇಡೀ ಜಗತ್ತನ್ನು ವ್ಯಾಪಿಸಿತ್ತು. ರಾಮನ ಆ ದಿವ್ಯ ವ್ಯಕ್ತಿತ್ವದ ತಳಹದಿಯ ಮೇಲೆ ಯುಗವು–ಜಗವು ಒಂದೊಮ್ಮೆ ವಿಕಸನದ ಔನ್ನತ್ಯದ ಮೇರು ಶಿಖರವನ್ನು ಆರೋಹಿಸುವುದು. ಇಷ್ಟಾಗಿಯೂ ಸಹ ನೀವು ರಾಮನನ್ನು ಒಬ್ಬ ಅವತಾರಿ ಎಂದು ಪರಿಗಣಿಸದೇ ಇರುವಿರಾ? ನೀವು ಅವನನ್ನು ಅವತಾರಿಯಲ್ಲ ಎಂದರು ಸಹ ಆತನು ಗತಿಸಿಹೋದ ಕಾಲದಲ್ಲಿ ಬದುಕಿದ್ದ ಓರ್ವ ಶ್ರೇಷ್ಠ ವಿಭೂತಿಯೆಂಬುದು ಸರ್ವವಿದಿತ. ನೀವಿಗ ಅವನನ್ನು ಅವನ ಸಿಂಹಾಸನದಿಂದ ಕೆಳದೂಡಲು ಪ್ರಯತ್ನಿಸಿದರೂ ಮರ್ತ್ಯಕ್ಕೆ ಅದರಿಂದ ಯಾವ ಹಾನಿಯೂ ಆಗದು. ಏಕೆಂದರೆ ಮನುಕುಲವು ಸಾತ್ವಿಕ ಗುಣ(ರಾಮ ಯುಗದ ದಿವ್ಯ ವ್ಯಕ್ತಿತ್ವ)ವೊಂದರಿಂದಲೇ

ತೃಪ್ತವಾಗುತ್ತಿಲ್ಲ. ಅದು ಇನ್ನೂ ಹೆಚ್ಚಿನದೇನನ್ನೋ ಶೋಧಿಸುತ್ತಿದೆ. ಆದರೆ ರಾಮನ ಅರ್ಥ(ಪುರುಷಾರ್ಥ) ಮತ್ತು ಕಾರ್ಯಗಳು ಬುವಿಯ ವಿಕಸನದ ಮಾರ್ಗದಲ್ಲಿ ಗತಿಸಿಹೋಗುವ ಜನಾಂಗಗಳ ಹೃದಯಾಂತರಾಳದಲ್ಲಿ ಚಿರಂತನ ಸ್ಥಾನವನ್ನು ಪಡೆದಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/490–92**

## ದ್ವಾಪರ ಯುಗಾವತಾರಿ ಶ್ರೀಕೃಷ್ಣ

ಶ್ರೀಕೃಷ್ಣನು ಮಾನವನ ದೇಹ–ಮನ–ಆತ್ಮಗಳೆಂಬ ಕವಚಗಳನ್ನು ಹೊತ್ತು ಮರ್ತ್ಯಕ್ಕೆ ಬಂದಿಳಿದ ಓರ್ವ ಶ್ರೇಷ್ಠ ಅವತಾರಿ. ಬುವಿಯ ನೆಲೆಯಲ್ಲಿ ಮರ್ತ್ಯದ ನಿಯಮಗಳಿಗೆ ಬದ್ಧನಾದ ಕೃಷ್ಣನು ತನ್ನ ಲೀಲೆಗಳ ರೂಪದಲ್ಲಿ ಜಗನ್ನಾಟಕವನ್ನಾಡಿದ್ದನು. ಅವನ ಈ ಲೀಲೆಯ ಆಟವನ್ನು, ಮತ್ತದರ ಸ್ಪಷ್ಟ ಮತ್ತು ಅತಿ ನಿಗೂಢವಾದ ಅಂತರಾರ್ಥವನ್ನು ಗ್ರಹಿಸಿದ್ದೇ ಆದಲ್ಲಿ, ನಾವು ಈ ಇಡೀ ಪ್ರಪಂಚದ ವೈಶ್ವಿಕ ನೆಲೆಯ ಗುರಿ ಮತ್ತು ವಿಧಾನವನ್ನು ಗ್ರಹಿಸಲು ಶಕ್ಯರಾಗುತ್ತೇವೆ. ಪರಮ ಚೈತನ್ಯ ನೆಲೆಯಿಂದ ಬಂದ ದಿವ್ಯ ಜ್ಞಾನದಿಂದ ನಿರೂಪಿಸಲ್ಪಟ್ಟ ಕ್ರಿಯೆಯೇ ಅವನ ಈ ಲೀಲೆಯ ಮುಖ್ಯ ಲಕ್ಷಣವಾಗಿದೆ. ಜಗನ್ನಾಟಕದ ತಳಹದಿಯಾದ ಆ ದಿವ್ಯ ಜ್ಞಾನವನ್ನು ಗೀತೆಯಲ್ಲಿ ಅನಾವರಣಗೊಳಿಸಲಾಗಿದೆ.

ಮಹಾಭಾರತದ ಶ್ರೀಕೃಷ್ಣನು ಓರ್ವ ಅವತಾರಿಯಷ್ಟೇ ಅಲ್ಲದೆ, ಆತನೊಬ್ಬ ಕ್ರಿಯಾಶೀಲ ನಾಯಕ, ಮಹಾಯೋಗಿ, ಜಗದೋದ್ಧಾರಕ, ಪರಮ ಪುರುಷ, ಸಾಮ್ರಾಜ್ಯವೊಂದರ ಸ್ಥಾಪಕ, ರಾಜನೀತಿಜ್ಞ ಮತ್ತು ಕ್ಷಾತ್ರ ದೇಹದಲ್ಲಿ ಬ್ರಾಹ್ಮವನರಿತಿಹ ಒಬ್ಬ ವೀರಯೋಧ! ಅವನ ಜೀವನ ನಾಟಕದಲ್ಲಿ ಬೇರೆ ಯಾವ ಅತಿಮಾನವ ಶಕ್ತಿಗಳಿಗೂ ಹೋಲಿಸಲಾಗದಂತಹ ವೈಶ್ವೀಕ ಶಕ್ತಿಯ ನಿಗೂಢವಾದ ತತ್ವವೊಂದನ್ನು ಕಾಣುತ್ತೇವೆ. ಆ ನಿಗೂಢ ತತ್ವವನ್ನೆ ಗೀತೆಯಲ್ಲಿ ವರ್ಣಿಸಲಾಗಿದೆ.

ಶ್ರೀಕೃಷ್ಣನು ಜಗದೋದ್ಧಾರಕ, ಪರಮ ಪುರುಷ, ವಿಶ್ವ ವಾಸುದೇವ; ಅದಾಗ್ಯೂ ಅವನು ತನ್ನ ಅತಿ ದೈವಿಕ ಶಕ್ತಿಗಳನ್ನು ಮರೆಮಾಚಿ ಮಾನವರೊಳಗೆ ಮಾನವನಾಗಿ ತನ್ನ ಜೀವನ ನಾಟಕನ್ನಾಡಲೆಂದು ಬಂದವನು. ಮರ್ತ್ಯ ನೆಲೆಯ ಸಹಜ ಸಂಬಂಧಗಳಾದ ತಂದೆ, ಮಗ, ಪತಿ, ಸಹೋದರ ಹಾಗೂ ಶತ್ರುಗಳೊಂದಿಗೆ ಸಹ ಸ್ನೇಹ ಸಂಪಾದಿಸುವ ಓರ್ವ ಮಿತ್ರನ ರೂಪದಲ್ಲಿ ಅವನು ಈ ಜಗನ್ನಾಟಕವನ್ನು

ರೂಪಿಸಿದ್ದನು. ಕೃಷ್ಣನ ಜೀವನವು ಆರ್ಯ ಜ್ಞಾನದ ಪರಮೋಚ್ಚ ರಹಸ್ಯ ಮತ್ತು ಭಕ್ತಿ ಮಾರ್ಗದ ಅತ್ಯುನ್ನತ ಅರ್ಥವನ್ನು ಒಳಗೊಂಡಿದೆ. ಅವನ ಜೀವನಕ್ಕೆ ಬುನಾದಿಯಾದ ಮೂಲಭೂತವಾದ ಆ ತತ್ತ್ವಗಳೇ ಗೀತೆಯ ಬೋಧನೆಗಳಾಗಿವೆ.

ಶ್ರೀಕೃಷ್ಣನ ಅವತಾರವು ದ್ವಾಪರ ಮತ್ತು ಕಲಿ ಯುಗದ ಸಂಧಿ ಕಾಲದಲ್ಲಿ ಸಂಭವಿಸಿತ್ತು. ಪ್ರತಿಯೊಂದು ಕಲ್ಪದ ವಿಕಸನದ ಚಕ್ರ ಪ್ರವರ್ತನದ ಸಂಧಿ ಕಾಲದಲ್ಲಿ ಪರಮ ಪುರುಷನು ತನ್ನ ಪೂರ್ಣಾವತಾರವನ್ನು ಮರ್ತ್ಯಕ್ಕೆ ಇಳಿಸುತ್ತಾನೆ. ಕಲಿ ಯುಗವೆಂಬುದು ಚತುರ್ಯುಗಗಳಲ್ಲೇ ಅತಿ ಒಳ್ಳೆಯದ್ದೂ, ಅತಿ ಕೆಟ್ಟದ್ದೂ ಆಗಿ ಎರಡೂ ತತ್ವಗಳನ್ನು ಧರಿಸಿ ನಿಂತಿದೆ. ಕಲಿ ಯುಗದಲ್ಲಿ ಪಾಪ ಕಾರ್ಯವನ್ನು ಪ್ರಚೋದಿಸುತ್ತ ಆ ಮೂಲಕ ಮಾನವ ಪ್ರಗತಿಯನ್ನು ಕುಂಠಿತಗೊಳಿಸುವ ಕಲಿಯ ಆಳ್ವಿಕೆಯಿರುವುದು. ಈ ಕಲಿ ಯುಗದಲ್ಲಿ ಮಾನವೀಯತೆಯ ಅಧಃಪತನವೂ–ಅವನತಿಯೂ ಸಂಭವಿಸುವುದು. ಆದರೆ ಪ್ರಗತಿಯನ್ನು ಕುಂಠಿತಗೊಳಿಸಲು ಪ್ರಯತ್ನಿಸುತ್ತಿರುವ ದುಷ್ಟ ಶಕ್ತಿಗಳ ವಿರುದ್ಧ ಹೋರಾಡುವದರ ಮೂಲಕ ಹಳೆಯದನ್ನು ನಾಶಪಡಿಸಿ ಹೊಸ ಸಿದ್ಧಾಂತಗಳನ್ನು ಸೃಷ್ಟಿಸಬಹುದು. ಈ ಬೆಳವಣಿಗೆಯ ಮಾರ್ಗದಲ್ಲಿ ಒಂದೆಡೆ ಅನೀತಿಯ ಅಂಶಗಳು ಕಾಲ–ದೇಶಗಳಿಂದ ಹೊರದೂಡಲ್ಪಟ್ಟಂತೆ ಹೊಸ ಸೃಷ್ಟಿಯ ಬೀಜಗಳು ಇನ್ನೊಂದೆಡೆ ಬಿತ್ತಿ–ಮೊಳಕೆಯೊಡೆಯಲಾರಂಭಿಸುತ್ತವೆ. ಈ ಪ್ರಕ್ರಿಯೆ ಮುಂದುವರಿದಂತೆ ಆ ಬೀಜಗಳು ಮೊಳೆತು ಬರಲಿರುವ ಸತ್ಯ ಯುಗದಲ್ಲಿ ಬೃಹದ್ವೃಕ್ಷಗಳಾಗಿ ನೆಲೆಸುತ್ತವೆ.

**ಬಂಗಾಳಿ ಬರಹಗಳು: 94–95**

**ಕೃಷ್ಣನ ಐತಿಹಾಸಿಕತೆ**

ಕೃಷ್ಣನ ಐತಿಹಾಸಿಕ ಕಥಾನಕದಲ್ಲಿ ಅವನ ಆಧ್ಯಾತ್ಮಿಕ ತತ್ವಗಳಿಗೆ ಅತ್ಯಲ್ಪ ಪ್ರಮಾಣದ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಅವನ ಚರಿತ್ರೆಯಲ್ಲಿ ಅದರ ಅವಶ್ಯಕತೆಯೂ ಇಲ್ಲವಷ್ಟೇ! ಕೃಷ್ಣನು ಒಬ್ಬ ದಂತ ಕಥೆಯೋ, ಕಾಲ್ಪನಿಕ ಪುರಾಣ ಪುರುಷನೋ ಅಲ್ಲ. ಗತಿಸಿಹೋದ ಕಾಲದಲ್ಲಿ ಭಾರತದ ನೆಲೆಯಲ್ಲಿ ಬದುಕಿದ್ದ ಓರ್ವ ಮಹಾಪುರುಷನೆಂಬುದು ಸರ್ವವಿದಿತ. ಮತ್ತು ಆ ಒಂದು ಯುಗ ಸಂಧಿಯ ಕಾಲದಲ್ಲಿ ಜರುಗಿದ ಒಂದು ಚಕ್ರ ಪ್ರವರ್ತನದ ಮಹಾಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ನಾಯಕ. ಇದೆಲ್ಲವನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿದಾಗ ನಮ್ಮ

ಮುಂದೆ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. ಒಂದು, ಕೃಷ್ಣನನ್ನು ಒಬ್ಬ ಆಧ್ಯಾತ್ಮಿಕ ಗುರುವೆಂದು ಪರಿಗಣಿಸಲಾಗಿದೆ. ಅದಕ್ಕೆ ಪೂರಕವೆಂಬಂತೆ ಅವನ ಆಧ್ಯಾತ್ಮಿಕ ಪ್ರಕಾಶವನ್ನು ಉಪನಿಷತ್‌ಗಳಲ್ಲಿ ಉಲ್ಲೇಖಿಸಲಾಗಿದೆ. ಎರಡನೆಯದಾಗಿ ಅವನನ್ನು ಓರ್ವ ದೈವೀ ಪುರುಷನೆಂದು ಪರಿಗಣಿಸಿ ಅವನ ಮರಣಾನಂತರ ಜನರು ಅವನನ್ನು ಆರಾಧಿಸಲಾರಂಭಿಸಿದರು. ಮಹಾಭಾರತ ಮತ್ತು ಪುರಾಣಗಳಲ್ಲಿನ ಕೃಷ್ಣನ ಕಥೆಗಳನ್ನು ಹೊರತುಪಡಿಸಿದಂತೆ ಮುಂದೆ ಪ್ರವರ್ಧಮಾನಕ್ಕೆ ಬಂದ ಭಾಗವತ ಧರ್ಮದ ಬೆಳವಣಿಗೆಯೊಂದಿಗೆ ಕೃಷ್ಣನ ಹೆಸರೂ ಸಹ ದೈವೀಕ ಮತ್ತು ಆಧ್ಯಾತ್ಮಿಕ ಸ್ಥಾನವನ್ನು ಪಡೆದುಕೊಳ್ಳುತ್ತಾ ಸಾಗಿತು. ಹಾಗೆಂದ ಮಾತ್ರಕ್ಕೆ ಕೃಷ್ಣನನ್ನು ಓರ್ವ ಕಾಲ್ಪನಿಕ ಕಥಾನಾಯಕನೆಂದು ಪರಿಭಾವಿಸುವಂತಿಲ್ಲ. ಮಹಾಭಾರತವು ಕೇವಲ ಒಂದು ಕಾವ್ಯವಾಗಿರದೇ ಬುವಿಯ ನೆಲೆಯಲ್ಲಿ ಜರುಗಿದ ಒಂದು ಮಹಾವಿಕಸನದ ಚಕ್ರ ಪ್ರವರ್ತನದ ಘಟನೆಯನ್ನು ವಿವರಿಸಿದ ಒಂದು ಐತಿಹಾಸಿಕ ಗ್ರಂಥವಾಗಿದೆ. ಹಾಗಾಗಿಯೇ ಅದನ್ನು ಒಂದು ಸಾಂಪ್ರದಾಯಿಕ ನೆಲೆಯಲ್ಲಿ ಜೋಪಾನವಾಗಿ ಸಂರಕ್ಷಿಸಿಕೊಂಡು ಬರಲಾಗಿದೆ. ಮಹಾಭಾರತದಲ್ಲಿ ಉಲ್ಲೇಖಿತರಾದ ಧೃತರಾಷ್ಟ್ರ, ಪರೀಕ್ಷಿತರಾದಿಯಾದ ಅಸಂಖ್ಯ ಪಾತ್ರಗಳು ಕೇವಲ ಕಲ್ಪನೆಯ ಮೂಸೆಯಲ್ಲಿ ರೂಪಿತರಾದವರಲ್ಲ. ಅಂತೆಯೇ ಇವರೆಲ್ಲರಿಗೂ ನಾಯಕ ಸ್ಥಾನದಲ್ಲಿರುವ ಓರ್ವಯೋಧನೂ, ರಾಜನೀತಿಜ್ಞನೂ ಆದ ಶ್ರೀಕೃಷ್ಣನು ಆ ಯುಗಮಾನದಲ್ಲಿ ಘಟಿಸಿದ ಮಹಾಕಾರ್ಯದಲ್ಲಿ ತನ್ನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿ ಬುವಿಯ ಪ್ರಜ್ಞಾ ವಿಕಸನಕ್ಕೆ ಸಹಕರಿಸಿದ್ದಾನೆ. ಆ ಮಹಾಕಾವ್ಯದಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವವನ್ನು ಧನಾತ್ಮಕವಾಗಿ ನಿರೂಪಿಸಲಾಗಿದೆಯೆಂಬುದಷ್ಟೇ ಅಲ್ಲದೆ, ಅಲ್ಲಿ ನಾವರಿಯದಿಹ ಹೆಚ್ಚಿನದೇನನ್ನೋ ಆ ಕಾವ್ಯವು ಹೊತ್ತು ನಿಂತಂತೆ ಇದೆ. ನಾನು ಹೇಗೆ ಕ್ರಿಸ್ತನನ್ನು ಓರ್ವ ಐತಿಹಾಸಿಕ ಪುರುಷನೆಂದು ಒಪ್ಪಿಕೊಂಡಿರುವೆನೋ, ಹಾಗೆಯೇ ಕೃಷ್ಣನನ್ನೂ ಸಹ ಓರ್ವ ಐತಿಹಾಸಿಕ ಪುರುಷನೆಂದೇ ಒಪ್ಪಿಕೊಂಡಿದ್ದೇನೆ.

ಇನ್ನು ಬೃಂದಾವನದ ವಿಷಯಕ್ಕೆ ಬಂದರೆ, ಇದು ಮಹಾಭಾರತದ ಮುಖ್ಯ ಕಥಾನಕವನ್ನು ಪ್ರವೇಶಿಸುವದಿಲ್ಲ. ಇದು ಪೌರಾಣಿಕ ನೆಲೆಯನ್ನು ಮಾತ್ರ ಹೊಂದಿದ್ದು, ಪಾತ್ರಗಳನ್ನು ಸಾಂಕೇತಿಕ ರೂಪದಲ್ಲಿ ನಿರೂಪಿಸುವ ಉದ್ದೇಶವನ್ನು ಹೊಂದಿತ್ತು. ಒಂದು ಕಾಲಕ್ಕೆ ನಾನೂ ಸಹ ಈ ವಿವರಣೆಯನ್ನೇ ಒಪ್ಪಿಕೊಂಡಿದ್ದೆ. ಆದರೆ ನಂತರ ನನ್ನ ಆ ನಿರ್ಧಾರವನ್ನು ಕೈಬಿಡಬೇಕಾಯಿತು. ಏಕೆಂದರೆ ಪುರಾಣದಲ್ಲಿ ವಾಸ್ತವೀಕತೆಯನ್ನು ತೊರೆದು ಸಾಂಕೇತಿಕತೆಯನ್ನು ತೋರ್ಪಡಿಸುವ ಯಾವ

ಅಂಶವನ್ನೂ ನಾನು ಕಾಣಲಿಲ್ಲ. ಪುರಾಣಗಳು ಬೃಂದಾವನದ ಕಥೆಯನ್ನು ಎಲ್ಲೋ ಒಂದೆಡೆ ಸಂಭವಿಸಿದ ಸತ್ಯಘಟನೆಯೆಂಬಂತೆಯೇ ಚಿತ್ರಿಸಿವೆ. ಪೌರಾಣಿಕರ ಪ್ರಕಾರ ಗೋಪಿಯರು ವಾಸ್ತವದ ಕನ್ಯೆಯರೇ ಹೊರತು ಸಾಂಕೇತಿಕ ಪ್ರತಿಮೆಗಳಲ್ಲ. ಅವರಿಗದು ಒಂದು ಅತೀಂದ್ರಿಯ ಸತ್ಯವಾಗಿತ್ತೇ ಹೊರತು ಸಾಂಕೇತಿಕ ಸತ್ಯವಾಗಿರಲಿಲ್ಲ. ಇಲ್ಲಿ ಅತೀಂದ್ರಿಯಕ್ಕೂ–ಸಾಂಕೇತಿಕತೆಗೂ ವ್ಯತ್ಯಾಸವಿದೆ. ಸಾಂಕೇತಿಕತೆಯೆಂಬುದು ಕೇವಲ ಒಂದು ಅದ್ಭುತವಾದ ಮನೋರಚನೆಯಾಗಿರಬಹುದು ಅಥವಾ ಒಂದು ಕಾಲ್ಪನಿಕ ಚಿತ್ರ ನಿರ್ಮಾಣವಾಗಿರಬಹುದು. ಆದರೆ ಅತೀಂದ್ರಿಯತೆಯೆಂಬುದು ಯಾವುದೋ ಒಂದು ಕಾಲ–ದೇಶದಲ್ಲಿ ಸಂಭವಿಸಿದ ವಾಸ್ತವಿಕತೆಯಾಗಿದ್ದು, ನಾವು ಕಾಣುವ ಭೌತಿಕ ದರ್ಶನಗಳಾಚೆ ನಿಂತ ಆ ಋತಂಭರ ಪ್ರಜ್ಞೆಯು ಮರ್ತ್ಯ ಜೀವನದ ಮೇಲೆ ತನ್ನ ಪ್ರಭಾವವನ್ನು ಬೀರಿ ಸಾಕಾರಗೊಳಿಸಿದ ತನ್ನ ರೂಪಕವಾಗಿರಬಹುದು. ಗೋಪಿಯರೊಂದಿಗಿನ ಕೃಷ್ಣನ ಲೀಲೆಗಳು ಪ್ರಕಾಶದ ಮೂಲನೆಲೆಯಾದ ಗೋಕುಲಧಾಮದಲ್ಲಿ ಚಿರಂತನವಾಗಿ ಜರುಗುತ್ತಿರುವ ನಿಗೂಢವಾದ ವೈಶ್ವಿಕ ಪ್ರಕ್ರಿಯೆಯಾಗಿದ್ದು, ಅದರ ಪ್ರತಿಬಿಂಬವೆಂಬಂತೆ ಭೌತಿಕ ಯಮುನಾ ದಡದ ಬೃಂದಾವನದಲ್ಲೂ ಆ ಲೀಲೆ ತನ್ನನ್ನು ತಾನು ಪ್ರಕ್ಷೇಪಿಸಿಕೊಳ್ಳುತ್ತಿರಬಹುದು. ಸ್ಥೂಲನೆಲೆಯಲ್ಲಿ ಸಂಭವಿಸಿದ ಈ ಕೃಷ್ಣನ ಲೀಲೆಯ ಸಾಂಕೇತಿಕಾರ್ಥವನ್ನು ನಮ್ಮ ಆತ್ಮ ಮಂಡಲವು ಸದಾ ಅರಿತಿರುತ್ತದೆ. ಪೌರಾಣಿಕರು ಸಾಕ್ಷೀಕರಿಸಿದ ಕಥಾನಕದ ಪ್ರಕಾರ ದಿವ್ಯ ಪುರುಷನು ಕೃಷ್ಣಾವತಾರಿಯಾಗಿ ಮರ್ತ್ಯದಲ್ಲಿ ತನ್ನ ಅವತರಣಿಕೆಯನ್ನು ಸಮರ್ಥವಾಗಿ ಪೂರೈಸಿದ್ದು, ಅದನ್ನು ಯಾವಾಗಲೂ ಭಾರತೀಯ ಧಾರ್ಮಿಕ ಮನೋಭೂಮಿಕೆಯಲ್ಲಿಯೇ ಸ್ವೀಕರಿಸಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/482–84**

## ಕೃಷ್ಣ

ಕೊನೆಗೂ ಕರುಣ–ದಾರುಣವಿಹ ಮರ್ತ್ಯದಲಿ
    ಆತ್ಮದ ಅವರೋಹಣಕಿಹ ಸತ್ಯವು ಪ್ರಕಟಗೊಂಡಿತ್ತು,
ತೃಷಿತ ಭುವಿಯ ಹೃದಯವನು ತಣಿಸಲೆಂದು, ಸ್ವರ್ಗವನೇ ಇಳೆಗಿಳಿಸಲೆಂದು
    ಕೃಷ್ಣಚರಣದಲಿ ನನ್ನಾತ್ಮವು ತಹತಹಿಸಿತ್ತು,
ಮುರಳಿಮೋಹನ ಗಾನವು ಆನಂದತೀರದೆಡೆಗೆಂದು ಸೆಳೆದಿರಲು
    ಚಿರಂತನದ ಅನಿಮೇಷರ ನೇತ್ರಗಳೆನ್ನ ಅಕ್ಷಿಯನು ಸಂಧಿಸಿತ್ತು,

ಕಾಲಕುಟಿಲತನವಿರದಿಹ, ಜರಾಮೃತ್ಯುವನೇ ಅರಿಯದಿಹ ಸುವರ್ಣಧಾಮವದು
ಹೃತ್ಕಮಲದಲಿ ಪ್ರಶಾಂತಿಯ ಹೊನಲನ್ನೇ ಹರಿಸಿತ್ತು.

ಪರಿಭ್ರಮಿತ ಆತ್ಮಗಹ್ವರದಂಚಿನಲಿ ಮಧುರ ನಿನಾದವು ಸಮೀಪಿಸಿರಲು
ಅವ್ಯಕ್ತದ ಆನಂದಾನುಭವವೊಂದರಲಿ ಪ್ರಜ್ಞೆಯಿದು ಕಂಪಿಸಿತ್ತು:
ಚತುರ್–ಸಮುದ್ರಗಳು–ಸಪ್ತಸಾಗರಗಳು ಸಂಗಮಿಸುವ ಕ್ಷೀರಾಬ್ಧಿಯಲಿ, ಸೋಮಮಂಡಲದಲಿ,
ಅಂತಿಮ ಆನಂದ ಧಾಮದಲಿ ಪರಮಪುರುಷನ ಪಾದಸ್ಪರ್ಶಕಾಗಿ ತನುವು ಹಂಬಲಿಸಿತ್ತು.


ಯುಗಮಾನ ಕಳೆದಿಹವು, ಭವಮಾನ ಅಳಿದಿಹವು, ಆ ಒಂದು ಅನುಭವಕೆಂದು;
ಚ್ಯುತಿಯಿರದ ಹಗಲಿನಲಿ ಮರ್ತ್ಯಸಂಕುಲದ ಪ್ರತಿನಿಧಿಯ ಅಭೀಪ್ಸೆಯಿಂದು ಫಲಕಂಡಿತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/601**

(ಭವಮಾನ–ಜನ್ಮಾಂತರ, ಚ್ಯುತಿಯಿರದ ಹಗಲು–ಶಾಶ್ವತದ ಬೆಳಕು)

ಬುವಿಗೆ ಓರ್ವ ಅವತಾರಿಯು ಬಂದಿಳಿದಾಗ, ಆತ ಕೇವಲ ಒಬ್ಬ ಧಾರ್ಮಿಕ ಮಾರ್ಗದರ್ಶಕನಾಗಿರುವದಿಲ್ಲ, ಬದಲಾಗಿ ಅವನೊಳಗೆ ಓರ್ವ ಕವಿ, ವಿದ್ವಾಂಸ, ಕಲಾವಿದ, ರಾಜಕೀಯ ನಾಯಕ, ಶ್ರೇಷ್ಠ ಶಿಕ್ಷಣ ತಜ್ಞ, ಸಮಾಜದ ಪುನರುಜ್ಜೀವನದ ಚಕ್ರ ಪ್ರವರ್ತಕನೆಂಬ ಹಲವಾರು ವ್ಯಕ್ತಿತ್ವಗಳಿರುತ್ತವೆ. ಅವನು ಬಂದಾಗ ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಪ್ರವರ್ಧಿಸಿಕೊಳ್ಳುವ ಭವಿಷ್ಯದ ಭಾರತವು ತನ್ನ ದಿವ್ಯ ಜ್ಞಾನದ ಮೂಲಕ ಜಗತ್ತನ್ನು ಬೇರೊಂದು ನೆಲೆಗೆ ಕೊಂಡೊಯ್ಯುವ ಮಹಾಘಟನೆಯನ್ನು ಅತ್ಯಲ್ಪದಲ್ಲೇ ವಿವರಿಸುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 8/249 – ಶ್ರೀ ಅರವಿಂದರು**



# ಭವಿಷ್ಯದ ಅವತಾರ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

*ಪ್ರ: ಪ್ರೀತಿಯ ಮಾತೆಯವರೆ, ಕುರುಕ್ಷೇತ್ರ ಮಹಾಯುದ್ಧವಾಗಿ ಐದು ಸಾವಿರ ವರ್ಷಗಳು ಕಳೆದು ಹೋಗಿವೆ ಎಂದು ಶ್ರೀ ಅರವಿಂದರು ಹೇಳುತ್ತಾರೆ. ಆದರೆ ಶ್ರೀಕೃಷ್ಣನ ರಾಜಕೀಯ ಮೇಧಾವಿತನದ ಉದಾರ ಪ್ರಭಾವವು ರಾಣಿ ಲಕ್ಷ್ಮೀಬಾಯಿಯೊಂದಿಗೆ ನಿನ್ನೆ ಕೊನೆಗೊಂಡಿತು. ತದನಂತರ, ಭಾರತ ಮತ್ತು ಪ್ರಪಂಚವನ್ನು ಪುನಃ ರಕ್ಷಿಸಲು ಪೂರ್ಣ ಅವತಾರವು ಬರಬೇಕಾಯಿತು. ಈ ಅವತಾರವು, ಸುಪ್ತವಾದ ಬ್ರಹ್ಮ ತೇಜವನ್ನು ಜಾಗೃತಗೊಳಿಸುತ್ತದೆ. ಕಲಿ ಯುಗದಲ್ಲಿ ಮಾತ್ರ ದೈವಿಕವು ಪೂರ್ಣವಾಗಿ ಪ್ರಕಟಗೊಳ್ಳುತ್ತದೆ ಎನ್ನುವುದನ್ನೂ ಸಹ ಶ್ರೀ ಅರವಿಂದರು ಹೇಳುತ್ತಾರೆ. ಏಕೆಂದರೆ ಈ ಯುಗದಲ್ಲಿ ಮಾನವನು ದೊಡ್ಡ ಗಂಡಾಂತರದಲ್ಲಿದ್ದಾನೆ, ಮತ್ತು ಅವನಿಲ್ಲಿ ಅತ್ಯುನ್ನತ ಸತ್ಯವನ್ನು ಬಹಿರಂಗಪಡಿಸುತ್ತಾನೆ: ಭಾರತ ದೇಶದಲ್ಲಿ ದೈವಿಕವು ಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. ಆದರೆ ಈ ಅಭಿವ್ಯಕ್ತಿಯು ತಾನೇ ಎಂದು ಹೇಳದ ಗಾಂಭೀರ್ಯವನ್ನು ಹೊಂದಿದ್ದಾನೆ!*

ತಮ್ಮ ಕಾರ್ಯವನ್ನು ಸಾಧಿಸುವವರಿಗೆ ಬಡಾಯಿ ಕೊಚ್ಚಿಕೊಳ್ಳುವ ಅಭ್ಯಾಸವಿರುವುದಿಲ್ಲ. ಅವರು ತಮ್ಮ ಶಕ್ತಿಯನ್ನು ಮಾಡುವ ಕಾರ್ಯಕ್ಕಾಗಿ ಮೀಸಲಿಡುತ್ತಾರೆ ಮತ್ತು ಫಲಿತಾಂಶದ ಯಶಸ್ಸನ್ನು ಚಿರಂತನನಾದ ಆ ಭಗವಂತನಿಗೆ ಬಿಟ್ಟುಬಿಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/270**

## ಸನಾತನ ಧರ್ಮದ ಮರುಸ್ಥಾಪನೆ

ಸಾಧಾರಣವಾಗಿ, ಆಗಸ್ಟ 15ನೇ ತಾರೀಖು ನನಗೆ ವೈಯಕ್ತಿಕವಾಗಿ ಸಾಧನೆಯಲ್ಲಿ ಅಥವಾ ಜೀವನದಲ್ಲಿ ಒಂದು ಪರಿವರ್ತನೆಯ ಅಥವಾ ಗಮನಾರ್ಹ ದಿನ – ಇತರರಿಗಾಗಿ ಮಾತ್ರ ಪರೋಕ್ಷ. ಈ ಸಲ ಅದು ನನಗೆ ಅತ್ಯಂತ ಮಹತ್ವದ್ದಾಗಿತ್ತು. ನನ್ನ ವ್ಯಕ್ತಿನಿಷ್ಠ ಸಾಧನೆಯು ತನ್ನ ಅಂತಿಮ ಮುದ್ರೆಯನ್ನು ಮತ್ತು ದೀರ್ಘ ಕಾಲದ ಸಾಕ್ಷಾತ್ಕಾರದಿಂದ ಹಾಗೂ ಅನೇಕ ಗಂಟೆಗಳ ಕಾಲ ಪರಬ್ರಹ್ಮನಲ್ಲಿನ ವಾಸದಿಂದ ತನ್ನ ಇಷ್ಟಾರ್ಥವನ್ನು ಪಡೆದುಕೊಂಡಿದೆ ಎಂದು ಹೇಳಬಹುದು. ಅಂದಿನಿಂದ, ಅನ್ನಮಯ ಆತ್ಮವನ್ನು ಹೊರತುಪಡಿಸಿ ನನ್ನಲ್ಲಿಯ ಎಲ್ಲದರ ಅಹಂಭಾವವು ಸತ್ತುಹೋಗಿದೆ, – ಹಳೆಯ ಅಸ್ತಿತ್ವದ ಸಾಂದರ್ಭಿಕ ಭೇಟಿಗಳಿಂದ ಅಥವಾ ಬಾಹ್ಯ ಸ್ಪರ್ಶಗಳಿಂದ ಸಂಪೂರ್ಣವಾಗಿ ಬಿಡುಗಡೆಗೊಳ್ಳುವ ಮೊದಲು ಆನಂತರದ ಸಾಕ್ಷಾತ್ಕಾರವನ್ನು ಎದುರು ನೋಡುವ ಭೌತಿಕ ವ್ಯಕ್ತಿತ್ವ (ಆತ್ಮ).

ನನ್ನ ಮುಂದಿನ ಸಾಧನೆಯು ಜೀವನಕ್ಕಾಗಿ, ವ್ಯಾವಹಾರಿಕ ಜ್ಞಾನಕ್ಕಾಗಿ ಹಾಗೂ ಶಕ್ತಿಗಾಗಿ, – ನಾನು ಈಗಾಗಲೆ ಹೊಂದಿರುವಂಥ ಅಗತ್ಯವಾದ ಜ್ಞಾನಕ್ಕಾಗಿ ಅಥವಾ ಶಕ್ತಿಗಾಗಿ ಅಲ್ಲ – ಆದರೆ ಒಂದೇ ಭೌತಿಕ ವ್ಯಕ್ತಿತ್ವದಲ್ಲಿ ಸ್ಥಾಪಿತವಾದ ಮತ್ತು ಜೀವನದಲ್ಲಿ ನನ್ನ ಕಾರ್ಯಕ್ಕಾಗಿ ನಿರ್ದೇಶಿಸಲ್ಪಟ್ಟ ಜ್ಞಾನ ಹಾಗೂ ಶಕ್ತಿ. ಈಗ ನಾನು ಆ ಕಾರ್ಯದ ಸ್ಪಷ್ಟ ಕಲ್ಪನೆಯನ್ನು ಪಡೆದುಕೊಂಡಿದ್ದೇನೆ ಹಾಗೂ ಆ ಕಲ್ಪನೆಯ ಕೊಂಚ ಭಾಗವನ್ನು ನಿನಗೆ ಕೊಡಬಲ್ಲೆನು; ಏಕೆಂದರೆ ನೀನು ನನ್ನನ್ನು ಮುಖ್ಯವೆಂದು /ಕೇಂದ್ರವೆಂದು ಪರಿಗಣಿಸುತ್ತಿ, ಆ ಕೆಂದ್ರದಿಂದ ಏನು ಹೊರಸೂಸಬಹುದೆಂದು (ಫಲಿತಾಂಶಗಳನ್ನು) ನೀನು ತಿಳಿದುಕೊಂಡಿರಬೇಕು.

1. ಸನಾತನ ಧರ್ಮವನ್ನು ಸವಿವರವಾಗಿ, ಒಂದು ಹೊಸ ದೃಷ್ಟಿಕೋನದಿಂದ ಮಾನವ ಪ್ರಜ್ಞೆಗೆ ಪುನಃ ವಿವರಿಸುವುದು. ಈ ಕೆಲಸ ಈಗಾಗಲೇ ಪ್ರಾರಂಭವಾಗಿದ್ದು, ಅದರ ಮೂರು ಭಾಗಗಳನ್ನು ಸ್ಪಷ್ಟವಾಗಿ ರೂಪಿಸಲಾಗುತ್ತಿದೆ. ಶ್ರೀಕೃಷ್ಣನು ವೇದಗಳ ನಿಜವಾದ ಅರ್ಥವನ್ನು ನನಗೆ ತೋರಿಸಿದ್ದಾನೆ, ಅಷ್ಟೇ ಅಲ್ಲ, ಮಾನವನ ಮಾತಿನ ಪ್ರಕ್ರಿಯೆ ಮತ್ತು ಮೂಲವನ್ನು ತೋರಿಸುವ ಹೊಸ ಭಾಷಾ ವಿಜ್ಞಾನವನ್ನೂ ನನಗೆ ತೋರಿಸಿದ್ದಾನೆ, ಇದರಿಂದ ಹೊಸ ನಿರುಕ್ತವನ್ನು ರಚಿಸಬಹುದು ಮತ್ತು ಇದರ ಮೇಲೆ ಆಧರಿಸಿದ ವೇದದ ಹೊಸ ವ್ಯಾಖ್ಯಾನವನ್ನೂ ರಚಿಸಬಹುದು. ಭಾರತೀಯರಿಗೆ ಅಥವಾ ಯುರೋಪಿಯನ್ನರಿಗೆ ಅರ್ಥವಾಗದ ಉಪನಿಷತ್ತುಗಳಲ್ಲಿರುವ ಎಲ್ಲದರ ಅರ್ಥವನ್ನೂ ಅವನು ನನಗೆ ತೋರಿಸಿದ್ದಾನೆ. ಆದ್ದರಿಂದ ನಾನು ವೇದಾಂತ

ಹಾಗೂ ವೇದಗಳನ್ನು ಹೇಗೆ ಪುನಃ ವಿವರಿಸಬೇಕಾಗಿದೆ ಎಂದರೆ, ಎಲ್ಲ ಧರ್ಮಗಳು ಹೇಗೆ ವೇದಾಂತ ಹಾಗೂ ವೇದಗಳಿಂದ ಹುಟ್ಟಿದವು ಮತ್ತು ಅವುಗಳು ಎಲ್ಲೆಡೆಯೂ ಒಂದೇ ಎಂದು ನೋಡುವ ರೀತಿಯಲ್ಲಿ (ವಿವರಿಸಬೇಕಾಗಿದೆ). ಈ ಮೂಲಕ ಭಾರತವು ವಿಶ್ವದ ಧಾರ್ಮಿಕ ಜೀವನದ ಕೇಂದ್ರವಾಗಿದೆ ಮತ್ತು ಅದರ ವಿಧಿ ನಿಯಮಿತ ಉದ್ಧಾರಕ ಎಂದು ಸಾಬೀತು ಪಡಿಸಲಾಗುವುದು.

2. ವೇದ–ಜ್ಞಾನದ ಮೇಲೆ ಆಧರಿಸಿದ, ಆತ್ಮವನ್ನು ಮುಕ್ತಗೊಳಿಸುವುದಕ್ಕಷ್ಟೇ ಅಲ್ಲದೆ, ಒಂದು ಪರಿಪೂರ್ಣ ಮಾನವ ಕುಲವನ್ನು ಸಿದ್ಧಗೊಳಿಸುವ ಮತ್ತು ಸತ್ಯ ಯುಗವನ್ನು ಮರುಸ್ಥಾಪಿಸಲು ಸಹಾಯವಾಗುವ ಯೋಗ ಸಾಧನೆಯನ್ನು ಪ್ರಾರಂಭಿಸುವುದು.

ಈಗ ಆ ಕಾರ್ಯ ಪ್ರಾರಂಭವಾಗಬೇಕಿದೆ, ಆದರೆ ಕಲಿಯುಗ ಅಂತ್ಯವಾಗುವವರೆಗೆ ಅದು ಮುಗಿಯುವುದಿಲ್ಲ.

3. ಭಾರತವು ಪ್ರಮುಖ ಕೇಂದ್ರವಾಗಿದ್ದರಿಂದ, ಜಗತ್ತಿನಲ್ಲಿ ಅವಳ ಯೋಗ್ಯ ಸ್ಥಾನವನ್ನು ಮರುಸ್ಥಾಪಿಸುವ ಸಲುವಾಗಿ ಕಾರ್ಯ ಮಾಡುವುದು; ಆದರೆ ಈ ಪುನರ್ ಸ್ಥಾಪನೆಯು ಮೇಲೆ ಹೇಳಿದ ಕಾರ್ಯದ ಒಂದು ಭಾಗವಾಗಿ ಮತ್ತು ಮಾನವ ವಿಧಾನ ಹಾಗೂ ಉಪಕರಣಕಗಳಿಗೆ ಸಂಬಂಧಿಸಿದಂತೆ ಯೋಗ ಸಾಧನದ ಪರಿಣಾಮವಾಗಿ ಆಗಬೇಕೆ ಹೊರತು ಬೇರೆಯ ಕಾರ್ಯದಿಂದಲ್ಲ.

4. ಪರಿಪೂರ್ಣ ಮಾನವೀಯತೆಯ ಉದ್ದೇಶಿತ ಸಮಾಜವು ಆ ಪರಿಪೂರ್ಣತೆಯನ್ನು ಹೊಂದಲು ಯೋಗ್ಯವಾಗುವಂತೆ ಮರುರೂಪಿಸಬೇಕಾಗಿದೆ.

**CWM (ಶ್ರೀಮಾತೆಯುವರ ಸಮಗ್ರ ಸಂಪುಟ) 36/177–178**

*ಎಲ್ಲೆಡೆ, ಜನರು ತಮ್ಮ ಗುರುವನ್ನು ಅವತಾರವೆಂದು ನಿರೂಪಿಸಲು, ಅವರಲ್ಲಿ ಹಲವು ಗುಣಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ; ಇಲ್ಲಿ (ಆಶ್ರಮದಲ್ಲಿ) ಕೆಲವರು ಆ ಸಾಧ್ಯತೆಯನ್ನೂ (ಅವತಾರದ ಸಾಧ್ಯತೆ) ಸಹ ನಿರಾಕರಿಸಲು ಪ್ರಯತ್ನಿಸುತ್ತಾರೆ.*

ಇದು ಆಧುನಿಕ ಆಶ್ರಮ, ಆದ್ದರಿಂದ ಹಾಗೆ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/400**

## ಮನುಕುಲದ ಹೊರೆಯನ್ನು ಸೈರಿಸಲು

ಈ ಮಾರ್ಗವು ನಿಮಗೆ ಅಥವಾ ನಿಮ್ಮಂತಹವರಿಗೆ ತುಂಬಾ ಕಷ್ಟಕರವಾಗಿದೆ ಮತ್ತು ನನ್ನಂತೆ ಅಥವಾ ಶ್ರೀಮಾತೆಯವರಂತೆ "ಅವತಾರಗಳು" ಮಾತ್ರ ಇದನ್ನು ಮಾಡಬಹುದು ಎಂದು ನೀವು ಹೇಳುತ್ತೀರಿ. ಅದೊಂದು ವಿಚಿತ್ರವಾದ ತಪ್ಪು ಕಲ್ಪನೆ, ಇದಕ್ಕೆ ವ್ಯತಿರಿಕ್ತವಾಗಿ ಇದು ಸುಲಭವಾದ, ಸರಳವಾದ ಮತ್ತು ಅತ್ಯಂತ ನೇರವಾದ ಮಾರ್ಗವಾಗಿದೆ ಮತ್ತು ತಮ್ಮ ಮನಸ್ಸು ಮತ್ತು ಪ್ರಾಣವನ್ನು ಶಾಂತಗೊಳಿಸಿದ ಯಾರು ಬೇಕಾದರೂ ಅದನ್ನು ಮಾಡಬಹುದು, ನಿಮ್ಮ ಸಾಮರ್ಥ್ಯದ ಹತ್ತನೇ ಒಂದು ಭಾಗವನ್ನು ಹೊಂದಿರುವವರೂ ಸಹ ಅದನ್ನು ಮಾಡಬಹುದು. ಇದು ಕಷ್ಟಕರವಾದ ಮತ್ತು ತಪಸ್ಸಿನ ದೊಡ್ಡ ಶಕ್ತಿಯ ಅಗತ್ಯವಿರುವ ಬಿಗಿತ, ಒತ್ತಡ ಮತ್ತು ಕಠಿಣ ಪ್ರಯತ್ನದ ಇನ್ನೊಂದು ಮಾರ್ಗವಾಗಿದೆ. ಶ್ರೀಮಾತೆಯವರ ಮತ್ತು ನನ್ನ ವಿಷಯದಲ್ಲಿ ಹೇಳಬೇಕೆಂದರೆ, ಕಷ್ಟಗಳ ಸರಮಾಲೆಯನ್ನು ಜಯಿಸಲು, ನಿನಗಿಂತಲೂ ಅಥವಾ ಈ ಆಶ್ರಮದಲ್ಲಿರುವವರಿಗಿಂತಲೂ ಅಥವಾ ಹೊರಗಿರುವವರಿಗಿಂತಲೂ ಭಾರವಾದ ಹೊರೆಯನ್ನು ಹೊರಲು, ಹೆಚ್ಚು ಕಷ್ಟಕರವಾದ ಪರಿಸ್ಥಿತಿಗಳನ್ನು ಸಹಿಸಿಕೊಳ್ಳಲು, ಹೋರಾಡಲು ಯುದ್ಧಗಳನ್ನು, ಸಹಿಸಿಕೊಳ್ಳಲು ಗಾಯಗಳನ್ನು, ತೂರಲಾಗದ ತೊಡಕು, ಮರುಭೂಮಿ ಮತ್ತು ಅರಣ್ಯವನ್ನು ಸೀಳುವ ಮಾರ್ಗಗಳನ್ನು, ಪ್ರತಿಕೂಲವಾದ ಜನ ಸಮೂಹವನ್ನು ಜಯಿಸಲು, ನಾವು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಬೇಕಾಯಿತು, ನಾವು ಎಲ್ಲಾ ವಿಧಾನಗಳನ್ನು ಅನುಸರಿಸಬೇಕಾಯಿತು, ಇಂಥದೊಂದು ಕಾರ್ಯವನ್ನು ನಮಗಿಂತ ಮುಂಚೆ ಬೇರೆ ಯಾರೂ ಮಾಡಬೇಕಾಗಿ ಬಂದಿಲ್ಲವೆಂದು ನನಗೆ ಖಚಿತವಾಗಿದೆ. ನಮ್ಮಂಥಹ ಕಾರ್ಯದಲ್ಲಿನ ಮಾರ್ಗ ಮುಂದಾಳುವಿಗೆ ದೈವೀಕತೆಯನ್ನು ಕೆಳತರುವುದು ಮತ್ತು ಸಾಕಾರಗೊಳಿಸುವುದು ಮಾತ್ರವಲ್ಲದೆ, ಮಾನವತೆಯಲ್ಲಿನ ಅರೋಹಣ ಅಂಶವನ್ನು ಪ್ರತಿನಿಧಿಸಬೇಕು ಮತ್ತು ಮಾನವತೆಯ ಭಾರವನ್ನು ಪೂರ್ಣವಾಗಿ ಹೊರಬೇಕು, ಅದನ್ನು ಬರೀ ವಿನೋದದಲ್ಲಿ ಅನುಭವಿಸುವುದು ಮಾತ್ರವಲ್ಲದೆ ಎಲ್ಲ ಅಡೆತಡೆಯ, ಕಷ್ಟದ, ವಿರೋಧದ, ದಿಗ್ಭ್ರಮೆಗೊಂಡ, ಅಡ್ಡಿಪಡಿಸಿದ ಮತ್ತು ಪಥದಲ್ಲಿ ಸಾಧ್ಯವಿರುವ (ನಿಧಾನವಾದ) ಜಯಶಾಲಿ ಶ್ರಮದಲ್ಲಿ ಮಾತ್ರ ಅನುಭವಿಸಬೇಕು. ಆದರೆ ಅವೆಲ್ಲವೂ ಇತರರ ಅನುಭವದಲ್ಲಿ ಪೂರ್ಣವಾಗಿ ಪುನರಾವರ್ತನೆಯಾಗುವುದು ಅನಿವಾರ್ಯವೂ ಅಲ್ಲ ಅಥವಾ ಸಹನೀಯವೂ ಅಲ್ಲ. ನಾವು ಸಂಪೂರ್ಣ ಅನುಭವವನ್ನು ಹೊಂದಿರುವುದರಿಂದ ನಾವು ಇತರರಿಗೆ ನೇರವಾದ ಮತ್ತು

ಸುಲಭವಾದ ಮಾರ್ಗವನ್ನು ತೋರಿಸಬಹುದು – ಅವರು ಅದನ್ನು ಸ್ವೀಕರಿಸಲು ಒಪ್ಪಿದರೆ ಮಾತ್ರ. ಅಪಾರ ಬೆಲೆಗೆ ಗೆದ್ದ ನಮ್ಮ ಅನುಭವದ ಕಾರಣದಿಂದಾಗಿ ನಾವು ನಿಮ್ಮನ್ನು ಮತ್ತು ಇತರರನ್ನು ಒತ್ತಾಯಿಸಬಹುದು, "ಚೈತ್ಯ ಮನೋಭಾವವನ್ನು ಸ್ವೀಕರಿಸಿ; ದೈವಿಕತೆಯು ನಿಮ್ಮನ್ನು ಬಹಿರಂಗವಾಗಿ ಅಥವಾ ರಹಸ್ಯವಾಗಿ ಮೇಲಕ್ಕೆತ್ತಿದ ನೇರವಾದ, ಸೂರ್ಯನಿಂದ ಪ್ರಕಾಶಿತವಾದ ಮಾರ್ಗವನ್ನು ಅನುಸರಿಸಿ – ರಹಸ್ಯವಾಗಿ ಇದ್ದರೆ, ಅವನು ಸುಸಮಯದಲ್ಲಿ ತನ್ನನ್ನು ತಾನು ತೋರಿಸಿಕೊಳ್ಳುತ್ತಾನೆ – ಕಠಿಣವಾದ, ಅಡ್ಡಿಪಡಿಸುವ, ಸುತ್ತುಬಳಸಿದ ಮತ್ತು ಕಷ್ಟಕರವಾದ ಪ್ರಯಾಣಕ್ಕಾಗಿ ಒತ್ತಾಯಿಸಬೇಡಿ."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/94–95**

**ಭಗವತ್ಸಮರ್ಪಣೆ**

ಖಂಡಿತವಾಗಿಯೂ. ನಾವು ಮೊದಲಿನಿಂದಲೂ ಅತಿಮಾನಸದಲ್ಲಿ ಭೌತಿಕವಾಗಿ ಬದುಕಿದ್ದರೆ, ಯಾರೂ ನಮ್ಮನ್ನು ಸಂಪರ್ಕಿಸಲು ಸಾಧ್ಯವಾಗುತ್ತಿರಲಿಲ್ಲ ಅಥವಾ ಸಾಧನೆಯನ್ನು ಮಾಡಲಾಗುತ್ತಿರಲಿಲ್ಲ. ನಮ್ಮ ಮತ್ತು ಭೂಮಿ ಮತ್ತು ಮನುಷ್ಯರ ನಡುವೆ ಸಂಪರ್ಕದ ಭರವಸೆ ಇರುತ್ತಿರಲಿಲ್ಲ. ಅದು ಹೀಗಿದ್ದರೂ, ಶ್ರೀಮಾತೆಯವರು ಯಾವಾಗಲೂ ತಮ್ಮಷ್ಟಕ್ಕೆ ತಾವು ಇರುವುದಕ್ಕಿಂತ ಸಾಧಕರ ನಿಮ್ನ ಪ್ರಜ್ಞೆಯ ಕಡೆಗೆ ಬರಬೇಕಾಯಿತು, ಇಲ್ಲದಿದ್ದರೆ "ನೀವು ಎಷ್ಟು ದೂರದಲ್ಲಿರಿ, ಎಷ್ಟು ಕಠೋರವಾಗಿದ್ದೀರಿ; ನೀವು ನನ್ನನ್ನು ಪ್ರೀತಿಸುವುದಿಲ್ಲ, ನಿಮ್ಮಿಂದ ನನಗೆ ಸಹಾಯ ಸಿಗುವುದಿಲ್ಲ ಇತ್ಯಾದಿ ಇತ್ಯಾದಿ ಎಂದು ಅವರು ಹೇಳಲು ಪ್ರಾರಂಭಿಸುತ್ತಾರೆ." ಮಾನವನನ್ನು ಭೇಟಿಯಾಗಲು ದೈವವು ತನ್ನನ್ನು ತಾನು ಮರೆಮಾಡಿಕೊಳ್ಳಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/93**

**ಸ್ವಾತಂತ್ರ್ಯಕ್ಕೆ ಬಾಗಿಲುಗಳನ್ನು ತೆರೆಯುವುದು**

ಶ್ರೀ ಅರವಿಂದರ ರಾಜಕೀಯ ವಿಚಾರಗಳಿಗೆ ಮತ್ತು ಚಟುವಟಿಕೆಗಳಿಗೆ ಮೂರು ಮುಖಗಳಿದ್ದವು. ಸಶಸ್ತ್ರ ದಂಗೆಯನ್ನು ಸಿದ್ಧಪಡಿಸುವ ಪ್ರಮುಖ ಉದ್ದೇಶ ಹೊಂದಿದ್ದ ರಹಸ್ಯ ಕ್ರಾಂತಿಕಾರಿ ಪ್ರಚಾರದೊಂದಿಗೆ ಮತ್ತು ಸಂಘಟನೆಯೊಂದಿಗೆ

ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಅವರು ರಾಜಕೀಯವನ್ನು ಪ್ರವೇಶಿಸಿದ ಸಮಯದಲ್ಲಿ, ಇಡೀ ರಾಷ್ಟ್ರವನ್ನು ಸ್ವಾತಂತ್ರ್ಯದ ಆದರ್ಶಕ್ಕೆ ಪರಿವರ್ತಿಸುವ ಉದ್ದೇಶದ ಸಾರ್ವಜನಿಕ ಸಮಾಚಾರವನ್ನು, ಬಹುಪಾಲು ಭಾರತೀಯರು ಪ್ರಾಯೋಗಶೀಲವಲ್ಲದ ಮತ್ತು ಅಸಾಧ್ಯವೆಂದು, ಒಂದು ಹುಚ್ಚು ಪರಡಂಭೂತವೆಂದು ಪರಿಗಣಿಸಿದ್ದರು. ಬ್ರಿಟಿಷ್ ಸಾಮ್ರಾಜ್ಯವು ತುಂಬಾ ಶಕ್ತಿಯುತವಾಗಿದೆ ಮತ್ತು ಭಾರತವು ತುಂಬಾ ದುರ್ಬಲವಾಗಿದೆ, ಪರಿಣಾಮವಾಗಿ ಅಂತಹ ಪ್ರಯತ್ನದ ಯಶಸ್ಸಿನ ಕನಸು ಕಾಣಲು ಸಹ ನಿಶ್ಯಸ್ತ್ರವಾಗಿದೆ ಮತ್ತು ಶಕ್ತಿಹೀನವಾಗಿದೆ ಎಂದು ಭಾವಿಸಲಾಗಿತ್ತು. ಮೂರನೆಯದಾಗಿ, ಹೆಚ್ಚಿನ ಅಸಹಕಾರ ಮತ್ತು ನಿಷ್ಕ್ರಿಯ ಪ್ರತಿರೋಧದ ಮೂಲಕ ಸಾರ್ವಜನಿಕ ಮತ್ತು ಏಕೀಕೃತ ವಿರೋಧವನ್ನು ಮುಂದುವರೆಸಲು ಮತ್ತು ವಿದೇಶಿ ಆಡಳಿತವನ್ನು ದುರ್ಬಲಗೊಳಿಸಲು ಜನರ ಸಂಘಟನೆ ಇತ್ತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/47**

**ಸ್ವಾತಂತ್ರ್ಯದ ಮಂತ್ರ**

ಶ್ರೀ ಅರವಿಂದೋ ಅವರು ತಮ್ಮ ಕ್ರಾಂತಿಕಾರಿ ಕಾರ್ಯದ ವ್ಯಾಪ್ತಿಯಲ್ಲಿ ಒಂದು ರೀತಿಯ ಚಟುವಟಿಕೆಯನ್ನು ಸೇರಿಸಿಕೊಂಡರು, ನಂತರ ಅದು ರಾಷ್ಟ್ರವಾದಿ ಪಕ್ಷದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪ್ರಮುಖ ಅಂಶವಾಯಿತು. ಆ ಸಮಯದಲ್ಲಿ ಕೇವಲ ಶೈಶಾವವಸ್ಥೆಯಲ್ಲಿದ್ದ ಮತ್ತು ಕೆಲವರ ಗೀಳಾಗಿದ್ದ ಸ್ವದೇಶಿ ಕಲ್ಪನೆಯನ್ನು ಪ್ರಚಾರ ಮಾಡಲು ಅವರು ಕಾರ್ಯ ಕೇಂದ್ರಗಳಲ್ಲಿ ಯುವಕರನ್ನು ಪ್ರೋತ್ಸಾಹಿಸಿದರು....

ಶ್ರೀ ಅರವಿಂದೋ ಅವರ ಮೊದಲ ತನ್ಮಯತೆಯು ಭಾರತದಲ್ಲಿ ರಾಜಕೀಯ ಕಾರ್ಯದ ಉದ್ದೇಶವಾಗಿ ಸ್ಪಷ್ಟ ಹಾಗೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಬಹಿರಂಗವಾಗಿ ಘೋಷಿಸುವುದು ಮತ್ತು ಇದೇ ವಿಷಯವಾಗಿ ನಿಯತಕಾಲಿಕೆಗಳ ಪುಟಗಳಲ್ಲಿ ನಿರಂತರವಾಗಿ ಅಗ್ರಹಿಸುವುದು; ಇದನ್ನು ಮೊದಲಿಗೆ ಬಹಿರಂಗವಾಗಿ ಮಾಡಿದವರಲ್ಲಿ ಶ್ರೀ ಅರವಿಂದರು ಮತ್ತು ಅವರು ಅದರಲ್ಲಿ ಯಶಸ್ವಿ ಕೂಡ ಆದರು. ಪಕ್ಷವು ಸ್ವರಾಜ್ಯ ಎಂಬ ಶಬ್ದವನ್ನು ಸ್ವಾತಂತ್ರ್ಯದ ಧ್ಯೇಯವನ್ನಾಗಿ ವ್ಯಕ್ತಪಡಿಸಲು ಬಳಸತೊಡಗಿತು; ಬಹಳ ಸಮಯದ ನಂತರ, ರಾಷ್ಟ್ರವಾದದ ನಾಯಕತ್ವದಡಿಯಲ್ಲಿ ಕಾಂಗ್ರೆಸ್

ಸಂಸ್ಥೆಯನ್ನು ಪುನರ್ ರಚನೆ ಮತ್ತು ಜೀರ್ಣೋದ್ಧಾರ ಮಾಡಿದಾಗ, ಲಾಹೋರ್ ಅಧಿವೇಶನದಲ್ಲಿ ಸ್ವರಾಜ್ಯ ಶಬ್ದವನ್ನು ಕಾಂಗ್ರೆಸ್‌ನ ಉದ್ದೇಶವನ್ನಾಗಿ ಬಳಸಲಾಯಿತು. ದೇಶಕ್ಕಾಗಿ, ಪತ್ರಿಕೆಯು ರಾಷ್ಟ್ರವಾದಿ ಪಕ್ಷದ, ಅಸಹಕಾರದ, ಸಹನಶೀಲ ಪ್ರತಿರೋಧದ, ಸ್ವದೇಶಿಯ, ಬಹಿಷ್ಕಾರದ, ರಾಷ್ಟ್ರೀಯ ಶಿಕ್ಷಣದ, ಕಾನೂನಿನಲ್ಲಿರುವ ವ್ಯಾಜ್ಯಗಳನ್ನು ಜನಪ್ರಿಯ ಮಧ್ಯಸ್ಥಿಕೆಯಿಂದ ಇತ್ಯರ್ಥಗೊಳಿಸುವ ಮತ್ತು ಶ್ರೀ ಅರವಿಂದರ ಯೋಜನೆಗಳ ಉಳಿದ ಅಂಶಗಳ ಕಾರ್ಯಸೂಚಿಯಾಗಿ ಒಂದು ಹೊಸ ರಾಜಕೀಯ ಕಾರ್ಯಕ್ರಮವನ್ನು ಘೋಷಣೆ ಮಾಡಿತು ಮತ್ತು ಅಭಿವೃದ್ಧಿ ಪಡಿಸಿತು. ಶ್ರೀ ಅರವಿಂದರು, ನಿಷ್ಕ್ರೀಯ ಪ್ರತಿರೋಧದ ಕುರಿತು ಸರಣಿ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು, ಕ್ರಾಂತಿಯ ರಾಜಕಾರಣ ತತ್ವವನ್ನು ಅಭಿವೃದ್ಧಿಪಡಿಸುವ ಇನ್ನೊಂದು ಲೇಖನವನ್ನು ಪ್ರಕಟಿಸಿದರು, ಮತ್ತು ಬಹಳಷ್ಟು ನಾಯಕರು ಮಂದಗಾಮಿ ಪಕ್ಷದ ಕುರುಹುಗಳನ್ನು ಹಾಳುಮಾಡುವ ಗುರಿ ಹೊಂದಿರುವ ಬಗ್ಗೆ ಮತ್ತು ಅಂಥ ಶ್ರದ್ಧೆಗಳ ಬಗ್ಗೆ, ಉದಾಹರಣೆಗೆ, ಬ್ರಿಟಿಷರ ನ್ಯಾಯದಲ್ಲಿ, ಮತ್ತು ಭಾರತದಲ್ಲಿ ಪರಕೀಯ ಸರಕಾರದಿಂದ ಕೊಡಮಾಡುವ ಲಾಭಗಳ ನಂಬಿಕೆಯಲ್ಲಿ, ಬ್ರಿಟಿಷರ ನ್ಯಾಯ ವ್ಯವಸ್ಥೆಯಲ್ಲಿ ಮತ್ತು ಭಾರತದ ಶಾಲೆಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕೊಡುವ ಶಿಕ್ಷಣದ ಪರ್ಯಾಪ್ತತೆಯಲ್ಲಿ ವಿಶ್ವಾಸ, ನಿರ್ವೀರ್ಯಗೊಳಿಸುವುದಕ್ಕಿಂತ ಹೆಚ್ಚು ಬಲವಾಗಿ ಮತ್ತು ನಿರಂತರವಾಗಿ ಒತ್ತಡ ಹೇರುವುದು, ಅಭಿವೃದ್ಧಿಯನ್ನು ನಿಲ್ಲಿಸುವುದು ಅಥವಾ ಕುಂಠಿತಗೊಳಿಸುವುದು, ಬಡತನ, ಆರ್ಥಿಕ ಅವಲಂಬನೆ, ಶ್ರೀಮಂತ ಉದ್ಯಮಗಳ ಇಲ್ಲದಿರುವಿಕೆ ಮತ್ತು ಪರಕೀಯ ಸರಕಾರದ ಉಳಿದ ಎಲ್ಲ ಕೆಟ್ಟ ಪರಿಣಾಮಗಳ ಬಗ್ಗೆ ಬರೆದರು; ಪರಕೀಯ ಆಡಳಿತವು ಪರೋಪಕಾರಿ ಮತ್ತು ಪ್ರಯೋಜನಕಾರಿಯಾಗಿದ್ದರೂ, ಅದು ಉಚಿತ ಮತ್ತು ಆರೋಗ್ಯಕರ ರಾಷ್ಟ್ರೀಯ ಜೀವನಕ್ಕೆ ಪರ್ಯಾಯವಲ್ಲ ಎಂದು ಅವರು ವಿಶೇಷವಾಗಿ ಆಗ್ರಹಿಸಿದರು. ಈ ಪ್ರಚಾರದ ನೆರವಿನಿಂದ ರಾಷ್ಟ್ರವಾದಿಗಳ ವಿಚಾರಗಳು ಎಲ್ಲೆಡೆ, ವಿಶೇಷವಾಗಿ ಪಂಜಾಬನಲ್ಲಿ – ಪ್ರಧಾನವಾಗಿ ಮೊದಲು ಮಂದಗಾಮಿಯಾಗಿದ್ದ ಪಂಜಾಬನಲ್ಲಿ. ವಂದೇ ಮಾತರಂ ಪತ್ರಿಕೆಯು ಪತ್ರಿಕೋದ್ಯಮ ಇತಿಹಾಸದಲ್ಲಿ ಬಹುಮಟ್ಟಿಗೆ ವಿಶಿಷ್ಟವಾದದ್ದು, ಅದು ಜನರ ಮನಸ್ಸನ್ನು ಪರಿವರ್ತಿಸುವಲ್ಲಿ ಮತ್ತು ಅದನ್ನು ಕ್ರಾಂತಿಗೆ ಸಿದ್ಧಪಡಿಸುವಲ್ಲಿ ಪ್ರಭಾವ ಬೀರಿತು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/51–56**

**ಮಾನವತೆಯ ಮುನ್ನಡೆಯ ನಾಯಕ**

ಆಗ ಅವರಿಗೆ ಪಾಂಡಿಚೇರಿಗೆ ಹೋಗಲು ಕರೆಯೊಂದು ಬಂದಿತು. ಉತ್ತರಪಾಡಾದ ಕೆಲವು ಯುವ ಕ್ರಾಂತಿಕಾರಿಗಳು ನಡೆಸುತ್ತಿದ್ದ ದೋಣಿ ಅವರನ್ನು ಕಲ್ಕತ್ತಾಕ್ಕೆ ಕರೆದೊಯ್ದಿತು; ಅಲ್ಲಿ ಅವರು ಡ್ಯೂಪ್ಲೆಕ್ಸ್ ಎಂಬ ಹಡಗನ್ನು ಹತ್ತಿ ಏಪ್ರಿಲ್ 4, 1910 ರಂದು ಪಾಂಡಿಚೇರಿಯನ್ನು ತಲುಪಿದರು. ಪಾಂಡಿಚೇರಿಯಲ್ಲಿ, ಈ ಸಮಯದಿಂದ ಶ್ರೀ ಅರವಿಂದೋ ಅವರ ಯೋಗಾಭ್ಯಾಸವು ಹೆಚ್ಚು ಹೆಚ್ಚು ಕರಗತವಾಗತೊಡಗಿತು. ಅವರು ಯಾವುದೇ ಸಾರ್ವಜನಿಕ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದನ್ನು ಕೈಬಿಟ್ಟರು, ಪುನಃಶ್ಚೇತನಗೊಂಡ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನಗಳಲ್ಲಿ ಅಧ್ಯಕ್ಷತೆ ವಹಿಸುವ ಅನೇಕ ವಿನಂತಿಗಳನ್ನು ನಿರಾಕರಿಸಿದರು ಮತ್ತು ನಂತರದಲ್ಲಿ ಆರ್ಯ ಪತ್ರಿಕೆಯಲ್ಲಿ ಅವರು ಬರೆದದ್ದನ್ನು ಹೊರತುಪಡಿಸಿ ಅವರ ಆಧ್ಯಾತ್ಮಿಕ ಚಟುವಟಿಕೆಗಳಿಗೆ ಅಥವಾ ಬರಹಗಳ ಅಥವಾ ಲೇಖನಗಳ ಕೊಡುಗೆಗಳಿಗೆ ಯಾವುದೇ ರೀತಿಯ ಸಂಪರ್ಕ ಹೊಂದಿಲ್ಲದ ಯಾವುದೇ ಸಾರ್ವಜನಿಕ ಹೇಳಿಕೆಯಿಂದ ದೂರವಿರುವ ನಿಯಮವನ್ನು ಮಾಡಿಕೊಳ್ಳುತ್ತಾರೆ. ಕೆಲವು ವರ್ಷಗಳ ಕಾಲ ಅವರು ಒಬ್ಬ ಅಥವಾ ಇಬ್ಬರು ವ್ಯಕ್ತಿಗಳ ಮೂಲಕ ಅವರು ನೇತೃತ್ವ ವಹಿಸಿದ ಕ್ರಾಂತಿಕಾರಿ ಶಕ್ತಿಗಳೊಂದಿಗೆ ಕೆಲವು ಗುಪ್ತ ಸಂವಹನವನ್ನು ಇಟ್ಟುಕೊಂಡಿದ್ದರು, ಆದರೆ ಸ್ವಲ್ಪ ಸಮಯದ ನಂತರ ಅವರು ಅದನ್ನೂ ಕೈಬಿಟ್ಟರು ಮತ್ತು ರಾಜಕೀಯ ಚಟುವಟಿಕೆಯಲ್ಲಿ ಯಾವುದೇ ರೀತಿಯ ಭಾಗವಹಿಸುವಿಕೆಯು ಪೂರ್ಣಗೊಂಡಿತು. ಅವರ ಭವಿಷ್ಯದ ದೂರದೃಷ್ಟಿಯು ಸ್ಪಷ್ಟವಾಗುತ್ತಿದ್ದಂತೆ, ಮುನ್ನಡೆವ ಶಕ್ತಿಗಳಿಂದ ಸ್ವಾತಂತ್ರ್ಯವು ನಿಶ್ಚಿತವೆನ್ನುವುದನ್ನು ಕಂಡುಕೊಂಡರು, ಭಾರತೀಯರ ಪ್ರತಿರೋಧದ ಒತ್ತಡದಿಂದ ಮತ್ತು ಅಂತರಾಷ್ಟ್ರೀಯ ವಿದ್ಯಮಾನಗಳಿಂದ ಬ್ರಿಟಿಷರು ಸ್ವಾತಂತ್ರ್ಯವನ್ನು ಬಿಟ್ಟುಕೊಡಲು ಒತ್ತಾಯಿಸುವುದನ್ನು ಕಂಡುಕೊಂಡರು. ಯಾವುದೇ ವಿರೋಧ ಮತ್ತು ಹಿಂಜರಿಕೆ ಇದ್ದರೂ ಆ ಸಂಭವನೀಯ ಘಟನೆಯ ಕಡೆಗೆ ಭಾರತ ಮಾತೆಯು ಪ್ರಯಾಣ ಬೆಳೆಸಿದ್ದನ್ನೂ ಕಂಡುಕೊಂಡರು. ಸಶಸ್ತ್ರ ದಂಗೆಯ ಅಗತ್ಯವಿಲ್ಲವೆಂದು ಅವರು ಭಾವಿಸಿದರು ಮತ್ತು ಅದಕ್ಕಾಗಿ ರಹಸ್ಯ ಸಿದ್ಧತೆಯನ್ನು ರಾಷ್ಟ್ರವಾದ ನಿಮಿತ್ಯಕ್ಕೆ ಹಾನಿಯಾಗದಂತೆ ಕೈಬಿಡಬಹುದು ಎಂದು ಭಾವಿಸಿದರು, ಅದಾಗ್ಯೂ ಕ್ರಾಂತಿಕಾರಿ ಮನೋಭಾವವನ್ನು ಅಖಂಡವಾಗಿ ಮುಂದುವರೆಸಿಕೊಂಡು ಹೋಗಬೇಕಾಗಿತ್ತು. ಆದ್ದರಿಂದ ರಾಜಕೀಯದಲ್ಲಿ ಅವರ ಸ್ವಂತ ವೈಯಕ್ತಿಕ

ಹಸ್ತಕ್ಷೇಪವು ಇನ್ನು ಮುಂದೆ ಅನಿವಾರ್ಯವಾಗಿರಲಿಲ್ಲ. ಇದೆಲ್ಲದರ ಹೊರತಾಗಿ, ಅವರ ಮುಂದಿರುವ ಆಧ್ಯಾತ್ಮಿಕ ಕಾರ್ಯದ ಪ್ರಮಾಣವು ಅವರಿಗೆ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿತು ಮತ್ತು ಅದರ ಮೇಲೆ ತಮ್ಮೆಲ್ಲ ಶಕ್ತಿಗಳ ಏಕಾಗ್ರತೆಯ ಅಗತ್ಯತೆಯನ್ನು ಅವರು ಕಂಡುಕೊಂಡರು....

ಆದರೆ ಹೆಚ್ಚಿನ ಜನರು ಭಾವಿಸಿದಂತೆ, ಅವರು ಪ್ರಪಂಚದ ಬಗ್ಗೆ ಅಥವಾ ಭಾರತದ ಭವಿಷ್ಯದಲ್ಲಿ ಯಾವುದೇ ಹೆಚ್ಚಿನ ಆಸಕ್ತಿಯಿಲ್ಲದೆ ಆಧ್ಯಾತ್ಮಿಕ ಅನುಭವದ ಶೃಂಗಕ್ಕೆ ನಿರ್ಗಮಿಸಿದರು ಎಂದು ಇದರ ಅರ್ಥವಲ್ಲ. ಅವರ ಯೋಗದ ತತ್ವವು ದೈವಿಕತೆಯನ್ನು ಅರಿತು ಸಂಪೂರ್ಣ ಆಧ್ಯಾತ್ಮಿಕ ಪ್ರಜ್ಞೆಯನ್ನು ಪಡೆಯುವುದು ಮಾತ್ರವಲ್ಲದೆ, ಎಲ್ಲ ಜೀವನದ ಮತ್ತು ಎಲ್ಲ ಪ್ರಪಂಚದ ಚಟುವಟಿಕೆಗಳನ್ನು ಈ ಆಧ್ಯಾತ್ಮಿಕ ಪ್ರಜ್ಞೆ ಮತ್ತು ಕ್ರಿಯೆಯ ವ್ಯಾಪ್ತಿಗೆ ತೆಗೆದುಕೊಂಡು ಹೋಗುವುದು ಮತ್ತು ಜೀವನವನ್ನು ಆತ್ಮದ ತಳಹದಿಯನ್ನಾಗಿಸುವುದು ಮತ್ತು ಅದಕ್ಕೆ ಆಧ್ಯಾತ್ಮಿಕ ಅರ್ಥವನ್ನು ನೀಡುವುದು ಎಂದು ಅರ್ಥ ಕೊಡಬಾರದು. ತಮ್ಮ ನಿರ್ಗಮನದಲ್ಲಿ ಶ್ರೀ ಅರವಿಂದರು ಪ್ರಪಂಚದಲ್ಲಿ ಮತ್ತು ಭಾರತದಲ್ಲಿ ನಡೆಯುತ್ತಿರುವ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಮತ್ತು ಅಗತ್ಯವಿದ್ದಾಗ ಸಕ್ರಿಯವಾಗಿ ಮಧ್ಯ ಪ್ರವೇಶಿಸುತ್ತದ್ದರು, ಆದರೆ ಕೇವಲ ಆಧ್ಯಾತ್ಮಿಕ ಶಕ್ತಿ ಮತ್ತು ಮೌನ ಆಧ್ಯಾತ್ಮಿಕ ಕ್ರಿಯೆಯೊಂದಿಗೆ; ಯಾಕೆಂದರೆ ಇದು ಯೋಗದಲ್ಲಿ ಬಹಳ ಮುಂದುವರಿದವರ ಅನುಭವದ ಭಾಗವಾಗಿದೆ, ಅದರ ಹೊರತಾಗಿ ಭೌತ ವಸ್ತುವಿನಲ್ಲಿನ ಸಾಮಾನ್ಯ ಶಕ್ತಿಗಳ ಮತ್ತು ಮನಸ್ಸಿನ, ಜೀವನ ಮತ್ತು ದೇಹದ ಚಟುವಟಿಕೆಗಳ ಅನುಭವದ ಭಾಗವಾಗಿದೆ, ಹಿಂದುಗಡೆಯಿಂದ ಮತ್ತು ಮೇಲಿನಿಂದ ಕಾರ್ಯ ನಿರ್ವಹಿಸಬಹುದಾದ ಮತ್ತು ಕಾರ್ಯ ನಿರ್ವಹಿಸುವ ಇತರ ಶಕ್ತಿಗಳು ಮತ್ತು ಪ್ರಭಾವಗಳು ಅಲ್ಲಿವೆ; ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಮುಂದುವರಿದವರು ಹೊಂದಬಹುದಾದ ಆಧ್ಯಾತ್ಮಿಕ ಕ್ರಿಯಾತ್ಮಕ ಪ್ರಭಾವವು ಅಲ್ಲಿದೆ, ಆದರೂ ಎಲ್ಲರೂ ಅದನ್ನು ಹೊಂದಲು ಅಥವಾ ಬಳಸಲು ಕಾಳಜಿ ವಹಿಸುವುದಿಲ್ಲ, ಮತ್ತು ಈ ಪ್ರಭಾವವು ಬೇರೆಯದಕ್ಕಿಂತಲೂ ಶ್ರೇಷ್ಠವಾಗಿದೆ ಮತ್ತು ಹೆಚ್ಚು ಪರಿಣಾಮಕಾರಿಯಾಗಿದೆ. ಅವರು ಈ ಬಲವನ್ನು ಪಡೆದುಕೊಂಡ ತಕ್ಷಣ, ಅದನ್ನು ಮೊದಲು ಸೀಮಿತ ವೈಯಕ್ತಿಕ ಕೆಲಸದ ಕ್ಷೇತ್ರದಲ್ಲಿ ಮಾತ್ರ ಬಳಸಿದನು, ನಂತರ ವಿಶ್ವ ಶಕ್ತಿಗಳ ಮೇಲೆ ನಿರಂತರ ಕ್ರಿಯೆಯಲ್ಲಿ ಅದನ್ನು ಬಳಸಿದರು. ಅವರು ಈ ಫಲಿತಾಂಶಗಳಿಂದ ಅತೃಪ್ತರಾಗಲು ಅಥವಾ ಯಾವುದೇ ರೀತಿಯ ಕ್ರಿಯೆಯ ಅಗತ್ಯತೆಯ ಭಾವನೆ ಬರಲು ಅವರಿಗೆ ಯಾವುದೇ

ಕಾರಣವಿರಲಿಲ್ಲ. ಆದಾಗ್ಯೂ ಎರಡು ಬಾರಿ ಅವರು ಸಾರ್ವಜನಿಕ ರೀತಿಯ ಇತರ ಕ್ರಮಗಳನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳುವುದು ಸೂಕ್ತವೆಂದು ಕಂಡುಕೊಂಡರು. ಮೊದಲನೆಯದು ಎರಡನೆಯ ಮಹಾಯುದ್ಧಕ್ಕೆ ಸಂಬಂಧಿಸಿದಂತೆ. ಆರಂಭದಲ್ಲಿ ಅವರು ಅದರ ಬಗ್ಗೆ ಸಕ್ರಿಯವಾಗಿ ಚಿಂತಿಸಲಿಲ್ಲ, ಆದರೆ ಹಿಟ್ಲರ್ ತನ್ನ ವಿರುದ್ಧದ ಎಲ್ಲಾ ಶಕ್ತಿಗಳನ್ನು ಹತ್ತಿಕ್ಕುತ್ತಾನೆ ಮತ್ತು ನಾಜಿ ನೀತಿಯು ಪ್ರಪಂಚದ ಮೇಲೆ ಪ್ರಾಬಲ್ಯ ಸಾಧಿಸುತ್ತದೆ ಎಂದು ತೋರಿದಾಗ, ಅವರು ಮಧ್ಯ ಪ್ರವೇಶಿಸಲು ಪ್ರಾರಂಭಿಸಿದರು. ಅವರು ಮಿತ್ರ ರಾಷ್ಟ್ರಗಳ ಪರವಾಗಿ ಇರುವುದನ್ನು ಸಾರ್ವಜನಿಕವಾಗಿ ಘೋಷಿಸಿಕೊಂಡರು, ನಿಧಿಯ ಮನವಿಗೆ ಉತ್ತರವಾಗಿ ಕೆಲವು ಹಣಕಾಸಿನ ಕೊಡುಗೆಗಳನ್ನು ನೀಡಿದರು ಮತ್ತು ಸೈನ್ಯಕ್ಕೆ ಪ್ರವೇಶಿಸಲು ಅಥವಾ ಯುದ್ಧದ ಪ್ರಯತ್ನದಲ್ಲಿ ಪಾಲ್ಗೊಳ್ಳಲು ಅವರ ಸಲಹೆಯನ್ನು ಕೋರಿದವರನ್ನು ಪ್ರೋತ್ಸಾಹಿಸಿದರು. ಆಂತರಿಕವಾಗಿ, ಡಂಕರ್ಕ್‌ನ ಹಂತದಿಂದ (ಡಂಕರ್ಕ್ ಫ್ರಾನ್ಸನಲ್ಲಿರುವ ಒಂದು ದೊಡ್ಡ ಬಂದರು) ಎಲ್ಲರೂ ಇಂಗ್ಲೆಂಡ್‌ನ ಪತನ ಮತ್ತು ಹಿಟ್ಲರನ ಖಚಿತ ವಿಜಯವನ್ನು ನಿರೀಕ್ಷಿಸುತ್ತಿದ್ದಾಗ ಅವರು ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಮಿತ್ರ ರಾಷ್ಟ್ರಗಳ ಸಲುವಾಗಿ ಬಳಸಿದರು, ಮತ್ತು ಜರ್ಮನ್ ವಿಜಯದ ಧಾವಂತವನ್ನು ತಕ್ಷಣವೇ ತಡೆಹಿಡಿದದ್ದನ್ನು ಮತ್ತು ಯುದ್ಧವು ವಿರುದ್ಧ ದಿಕ್ಕಿನಲ್ಲಿ ತಿರುಗಿದ್ದನ್ನು ನೋಡಿದ ತೃಪ್ತಿಯನ್ನು ಅವರು ಹೊಂದಿದರು. ಅವರು ಇದನ್ನು ಮಾಡಿದ್ದು ಯಾಕೆಂದರೆ, ಹಿಟ್ಲರ್ ಮತ್ತು ನಾಜಿ ನೀತಿಯ ಹಿಂದೆ ಕಡು ಅಸುರಿಕ ಶಕ್ತಿಗಳಿವೆ ಎನ್ನುವುದನ್ನು ಶ್ರೀ ಅರವಿಂದರು ಕಂಡುಕೊಂಡರು ಮತ್ತು ಅವರ ಯಶಸ್ಸು ದುಷ್ಟತನದ ದಬ್ಬಾಳಿಕೆಗೆ ಮಾನವ ಕುಲದ ಗುಲಾಮಗಿರಿ ಮತ್ತು ವಿಕಾಸದ ಪಥಕ್ಕೆ, ವಿಶೇಷವಾಗಿ ಮಾನವ ಕುಲದ ಆಧ್ಯಾತ್ಮಿಕ ವಿಕಾಸಕ್ಕೆ ಹಿನ್ನಡೆಯಾಗುತ್ತದೆ ಎನ್ನುವುದನ್ನು ಕಂಡುಕೊಂಡಿದ್ದರು: ಇದು ಯುರೋಪಿನ ಮಾತ್ರವಲ್ಲದೆ ಏಷ್ಯಾದ ಗುಲಾಮಗಿರಿಗೂ ಕಾರಣವಾಗುತ್ತದೆ, ಮತ್ತು ಅದರಲ್ಲೂ ಭಾರತದಲ್ಲಿ, ಬೇರೆ ಯಾವುದೇ ದೇಶವು ಅನುಭವಿಸಿದ್ದಕ್ಕಿಂತ ಹೆಚ್ಚು ಭಯಾನಕವಾದ ಗುಲಾಮಗಿರಿಯು ಭಾರತದಲ್ಲಿ ಮತ್ತು ಅದರ ವಿಮೋಚನೆಗಾಗಿ ಮಾಡಿದ ಎಲ್ಲಾ ಕೆಲಸಗಳನ್ನು ಹಾಳು ಮಾಡಿದಂತಾಗುತ್ತದೆ. ಕ್ರಿಪ್ಸ್‌ನ ಪ್ರಸ್ತಾಪವನ್ನು ಸಾರ್ವಜನಿಕವಾಗಿ ಬೆಂಬಲಿಸಲು ಮತ್ತು ಅದನ್ನು ಒಪ್ಪಿಕೊಳ್ಳುವಂತೆ ಕಾಂಗ್ರೆಸ್ ನಾಯಕರನ್ನು ಒತ್ತಾಯಿಸಲು ಅವರನ್ನು ಪ್ರೇರೇಪಿಸಲು ಇದುವೇ ಕಾರಣವಾಯಿತು. ಜಪಾನ್ ಭಾರತದ ಮೇಲೆ ಆಕ್ರಮಣ ಮಾಡಲು ಮತ್ತು ಅದನ್ನು ಆಕ್ರಮಿಸಲು ಮತ್ತು ವಶಪಡಿಸಿಕೊಳ್ಳಲು ಉದ್ದೇಶಿಸಿದೆ ಎಂಬುದು ಸ್ಪಷ್ಟವಾಗುವವರೆಗೂ ಅವರು ವಿವಿಧ ಕಾರಣಗಳಿಗಾಗಿ,

ಜಪಾನಿನ ಆಕ್ರಮಣದ ವಿರುದ್ಧ ತಮ್ಮ ಆಧ್ಯಾತ್ಮಿಕ ಶಕ್ತಿಯೊಂದಿಗೆ ಮಧ್ಯ ಪ್ರವೇಶಿಸಲಿಲ್ಲ. ಆಸುರಿ ಸ್ವಭಾವ ಮತ್ತು ಹಿಟ್ಲರ್ ನೀತಿಯ ಅನಿವಾರ್ಯ ಫಲಿತಾಂಶದ ಬಗ್ಗೆ ಅವರ ಅಭಿಪ್ರಾಯಗಳನ್ನು ದೃಢೀಕರಿಸುತ್ತ ಯುದ್ಧವನ್ನು ಬೆಂಬಲಿಸಲು ಬರೆದ ಕೆಲವು ಪತ್ರಗಳನ್ನು ಅವರು ಸಾರ್ವಜನಿಕವಾಗಲು ಅನುಮತಿಸಿದರು.

ಅವರು ಕ್ರಿಪ್ಸ್‌ನ ಪ್ರಸ್ತಾಪವನ್ನು ಬೆಂಬಲಿಸಿದರು, ಏಕೆಂದರೆ ಅದರ ಅಂಗೀಕಾರದಿಂದ ಭಾರತ ಮತ್ತು ಬ್ರಿಟನ್ ದೇಶಗಳು ಅಸುರಿ ಪಡೆಗಳ ವಿರುದ್ಧ ಒಂದಾಗಿ ನಿಲ್ಲಬಹುದು ಮತ್ತು ಕ್ರಿಪ್ಸನ ಪರಿಹಾರವನ್ನು ಸ್ವಾತಂತ್ರ್ಯ ಪಡೆಯುವ ನಿಟ್ಟಿನಲ್ಲಿ ಒಂದು ಹೆಜ್ಜೆಯನ್ನಾಗಿ ಬಳಸಬಹುದಾಗಿತ್ತು. ಸಂಧಾನಗಳು ವಿಫಲವಾದಾಗ, ಶ್ರೀ ಅರವಿಂದರು ಆಕ್ರಮಣಕಾರರ ವಿರುದ್ಧ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಮಾತ್ರ ಬಳಸಲು ಅದರೆಡೆಗೆ ಮರಳಿದರು ಮತ್ತು ಅಲ್ಲಿಯವರೆಗೆ ಎಲ್ಲವನ್ನೂ ಗುಡಿಸಿಹಾಕಿದ ಜಪಾನಿನ ವಿಜಯದ ಅಲೆಯು ಬಿರುಸಿನ, ಬಗ್ಗುಬಡಿದ ಮತ್ತು ಅಂತಿಮವಾಗಿ ಅದರ ಅಗಾಧ ಸೋಲಿನ ಅಲೆಯಲ್ಲಿ ತಕ್ಷಣವೇ ಬದಲಾದದ್ದನ್ನು ನೋಡಿದ ತೃಪ್ತಿಯನ್ನು ಹೊಂದಿದರು. ಸ್ವಲ್ಪ ಸಮಯದ ನಂತರ ಅವರ ಪೂರ್ವ ನಿದರ್ಶನಗಳು ಭಾರತದ ಬಗ್ಗೆ ತಮ್ಮಷ್ಟಕ್ಕೆ ತಾವು ಸಮರ್ಥಿಸಿ–ಕೊಳ್ಳವುವುದನ್ನು ನೋಡುತ್ತ ತೃಪ್ತಿಯನ್ನು ಹೊಂದಿದರು, ಇದರಿಂದ ಭಾರತ ಮಾತೆಯು ಯಾವುದೇ ಆಂತರಿಕ ತೊಂದರೆಗಳಿದ್ದರೂ ಸ್ವಂತಂತ್ರವಾಗಿ ನಿಲ್ಲಬಲ್ಲಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/64–66**

## ಭವಿಷ್ಯದ ಧರ್ಮ ಗ್ರಂಥಗಳು

ಆರ್ಯದಲ್ಲಿ ಧರ್ಮಶಾಸ್ತ್ರವಿಲ್ಲವೆಂದು ನಾನು ಒತ್ತಿಹೇಳಲೇಬೇಕು. ಈ ಧರ್ಮಶಾಸ್ತ್ರದಲ್ಲಿ ಯಾವುದೇ ರೀತಿಯ ಧಾರ್ಮಿಕ ನಂಬಿಕೆ ಅಥವಾ ಸಿದ್ಧಾಂತವನ್ನು ಬೆಂಬಲಿಸಲು ಅಥವಾ ಅಭಿವೃದ್ಧಿಪಡಿಸಲು ಅಥವಾ ಯಾವುದೇ ಹಳೆಯ ಅಥವಾ ಹೊಸ ಧರ್ಮದ ಸಿದ್ಧಾಂತವನ್ನು ದೃಢೀಕರಿಸಲು ಅಥವಾ ಪ್ರತಿಪಾದಿಸಲು ಯಾವುದನ್ನೂ ಬರೆಯಲಾಗಿಲ್ಲ. ವಾಕ್ಯ ವೃಂದದ ತಿರುಳನ್ನು/ಭಾವವನ್ನು ಪಾಂಡಿತ್ಯಪೂರ್ಣ ಭಿನ್ನತೆಯಾಗಿ ವಿವರಿಸುವಾಗ ಅವರು ಛಾಪನ್ನು ತಪ್ಪದಂತೆ ನೋಡುತ್ತಾರೆ. ಅಲ್ಲಿರುವ ಬೋಧನೆಯು ಪುಸ್ತಕಗಳಿಂದ ತೆಗೆದುಕೊಳ್ಳಲ್ಪಟ್ಟಿಲ್ಲ, ಅಥವಾ ತಾತ್ವಿಕ ಭಾಷೆಯಲ್ಲಿ ವ್ಯಕ್ತಪಡಿಸಿದ್ದರೂ, ಅದು ಅಮೂರ್ತ ಚಿಂತನೆ ಅಥವಾ ಯಾವುದೇ ಔಪಚಾರಿಕ ತರ್ಕವನ್ನು ಆಧರಿಸಿಲ್ಲ. ಮೂಲಭೂತವಾದ ಇದು


ಆಧ್ಯಾತ್ಮಿಕ ಅನುಭವವನ್ನು ವ್ಯಕ್ತಪಡಿಸುತ್ತದೆ, ಜೀವಿಗಳ ಬೆಳವಣಿಗೆಗೆ ಕ್ರಿಯಾತ್ಮಕವಾಗಿದೆ, ಸುಮಾರು ಮೂವತ್ತು ವರ್ಷಗಳ ನಿರಂತರ ಸಾಧನೆಯ ಮೂಲಕ ದೃಢೀಕರಿಸಲ್ಪಟ್ಟಿದೆ, ವಿಸ್ತರಿಸಲ್ಪಟ್ಟಿದೆ ಮತ್ತು ವಿವರಗಳಿಂದ ತುಂಬಲ್ಪಟ್ಟಿದೆ, ಮತ್ತು, ಇದು ಕೇವಲ ಬೌದ್ಧಿಕ ಪ್ರಶ್ನೆಯಿಂದ ಅಥವಾ ವಾದದಿಂದ ಗಂಭೀರವಾಗಿ ಸವಾಲು ಮಾಡಲು ಅಥವಾ ಅಮಾನ್ಯಗೊಳಿಸಲು ಸಾಧ್ಯವಿಲ್ಲ, ಒಂದು ವೇಳೆ ಮಾಡುವುದಿದ್ದರೆ ಅದನ್ನು ಕೇವಲ ಶ್ರೇಷ್ಠವಾದ ಮತ್ತು ವಿಶಾಲವಾದ ಆಧ್ಯಾತ್ಮಿಕ ಅನುಭವದಿಂದ ಮಾತ್ರ ಮಾಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/88**

**ಭೂಮಿ ಮತ್ತು ಮನುಷ್ಯನಿಗೆ ನೂತನ ಯೋಗ**

ನನ್ನ ಯೋಗವು ಇತರ ಪ್ರಪಂಚಗಳ ಸಂಪೂರ್ಣ ಅನುಭವವನ್ನು, ಪರಮಾತ್ಮನ ಸ್ತರವನ್ನು, ಮತ್ತು ಮಧ್ಯದಲ್ಲಿರುವ ಇತರ ಸ್ತರಗಳು ನಮ್ಮ ಜೀವನ ಮತ್ತು ಭೌತಿಕ ಪ್ರಪಂಚದ ಮೇಲೆ ಅವುಗಳ ಸಂಭವನೀಯ ಪರಿಣಾಮಗಳನ್ನು ಒಳಗೊಂಡಿರುತ್ತದೆ; ಆದರೆ ಪರಮಾತ್ಮನ ಅಥವಾ ಒಂದೇ ಅಂಶದಲ್ಲಿ ಈಶ್ವರನೂ ಸಹ, ಶಿವ, ಜಗತ್ತಿನ ಪ್ರಭುವಾಗಿ ಮತ್ತು ನಮ್ಮಯ ಹಾಗೂ ನಮ್ಮ ಕಾರ್ಯಗಳ ಯಜಮಾನನಾಗಿ ಕೃಷ್ಣನ ಇಲ್ಲವೆ ವಿಶ್ವಾತ್ಮಕ ಸಚ್ಚಿದಾನಂದನ ಸಾಕ್ಷಾತ್ಕಾರಕ್ಕಾಗಿ ಆಗ್ರಹಿಸುವುದು ಸಾಧ್ಯ ಮತ್ತು ಈ ಯೋಗದ ಪ್ರಮುಖವಾದ ಫಲಿತಾಂಶಗಳನ್ನು ಹೊಂದಲು, ನಾವು ದಿವ್ಯ ಜೀವನದ ಆದರ್ಶವನ್ನು ಮತ್ತು ಆತ್ಮದಿಂದ ಜಯಿಸಿದ ಈ ಭೌತಿಕ ಪ್ರಪಂಚವನ್ನು ಒಪ್ಪಿಕೊಂಡಿದ್ದರೆ ಅಲ್ಲಿಂದ ಮುಂದೆ ಸಮಗ್ರ ಫಲಿತಾಂಶಗಳೆಡೆಗೆ ಮುಂದುವರೆವುದು ಸಾಧ್ಯ. ಈ ದೃಷ್ಟಿಕೋನ ಮತ್ತು ಸಂಗತಿಗಳ ಅನುಭವದ ಮತ್ತು ಅಸ್ತಿತ್ವದ ಸತ್ಯವು ನನಗೆ ದಿ ಲೈಫ್ ಡಿವೈನ್ ಮತ್ತು ಸಾವಿತ್ರಿಯನ್ನು ಬರೆಯಲು ಅನುವು ಮಾಡಿಕೊಟ್ಟಿತು. ಪರಮಾತ್ಮನಾದ ಈಶ್ವರನ ಸಾಕ್ಷಾತ್ಕಾರವು ಖಂಡಿತವಾಗಿಯೂ ಅತ್ಯಗತ್ಯವಾಗಿದೆ; ಆದರೆ ಆತನನ್ನು ಪ್ರೀತಿ ಮತ್ತು ಭಕ್ತಿಯಿಂದ ಸಮೀಪಿಸಲು, ನಮ್ಮ ಕಾರ್ಯದಿಂದ ಆತನಿಗೆ ಸೇವೆ ಸಲ್ಲಿಸಲು ಮತ್ತು ಆತನನ್ನು ಅರಿತುಕೊಳ್ಳಲು, ಅಗತ್ಯವಾಗಿ ಬೌದ್ಧಿಕ ಜ್ಞಾನ ಮಾತ್ರದಿಂದ ಅಲ್ಲವಾದರೂ, ಸಮಗ್ರ ಯೋಗದ ಪಥದಲ್ಲಿ ಆಧ್ಯಾತ್ಮಿಕ ಅನುಭವದಲ್ಲಿ ಆತನನ್ನು ತಿಳಿದುಕೊಳ್ಳುವುದು ಅತ್ಯಗತ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/234–35**



*ಮಾ ದುರ್ಗೆಯ ತನುವಿನಲ್ಲಿ ನೀನು ಪರಮಾತ್ಮನ ಅವತಾರವೆಂಬ ಬಲವಾದ ನಂಬಿಕೆ ನನಗಿದೆ. ನಾನು ಸರಿಯೇ?*

ನಿಮ್ಮ ನಂಬಿಕೆಯನ್ನು ಅನುಸರಿಸಿ – ಅದು ನಿಮ್ಮನ್ನು ದಾರಿ ತಪ್ಪಿಸುವ ಸಾಧ್ಯತೆಯಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/433 – ಶ್ರೀ ಅರವಿಂದರು**

ಸಂಭಾವಿತ ಶಾಶ್ವತತೆಯಲ್ಲಿ, ಪ್ರತಿ ಅವತಾರವು ಕೇವಲ ನಿವೇದಕ, ಪರಿಪೂರ್ಣವಾದ ಸಾಕ್ಷಾತ್ಕಾರದ ಹರಿಕಾರ.

ಆದರೂ ಜನರು ಯಾವಾಗಲೂ ಭವಿಷ್ಯದ ಅವತಾರಕ್ಕೆ ವಿರುದ್ಧವಾಗಿ ಹಿಂದಿನ ಅವತಾರವನ್ನು ಆರಾಧಿಸುವ ಪ್ರವೃತ್ತಿಯನ್ನು ಹೊಂದಿರುತ್ತಾರೆ.

ಈಗ ಶ್ರೀ ಅರವಿಂದೋ ಅವರು ನಾಳೆಯ ಸಾಕ್ಷಾತ್ಕಾರವನ್ನು ಜಗತ್ತಿಗೆ ಘೋಷಿಸುತ್ತಾ ಮತ್ತೆ ಬಂದಿದ್ದಾರೆ; ಮತ್ತು ಅವರ ಸಂದೇಶವು, ಅವರ ಹಿಂದೆ ಆಗಿಹೋದ ಎಲ್ಲ ಮಹನೀಯರ ಸಂದೇಶವು ಎದುರಿಸಿದ ಅದೇ ವಿರೋಧವನ್ನು ಎದುರಿಸುತ್ತದೆ.

ಆದರೆ ಅವರು ಬಹಿರಂಗಪಡಿಸಿದ ಸತ್ಯವನ್ನು ಮುಂದಿನ ದಿನಗಳು ಸಾಬೀತು ಪಡಿಸುತ್ತವೆ ಮತ್ತು ಅವರ ಕಾರ್ಯವನ್ನು ಮಾಡಲಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/22 – ಶ್ರೀಮಾತೆ**

**ಉದ್ಧಾರಕ**

ಏನೇ ಆಗಲಿ, ಅದೆಲ್ಲವೂ (ವಿವಿಧ ಪ್ರಶ್ನೆಗಳಿಗೆ ಉತ್ತರಗಳು) ಪ್ರಸ್ತುತ ಮಾನವ ನಾಗರಿಕತೆಯ ಪ್ರಶ್ನೆಗಿಂತ ಭಿನ್ನವಾದ ವಿಷಯವಾಗಿದೆ. ಕಾಪಾಡಬೇಕಾಗಿದ್ದು ಇದನ್ನಲ್ಲ; ಉಳಿಸಬೇಕಾಗಿದ್ದು ಜಗತ್ತನ್ನು, ಮತ್ತು ಅದು ಖಂಡಿತವಾಗಿಯೂ ಮಾಡಲ್ಪಡುತ್ತದೆ, ತುಂಬಾ ಸುಲಭವಾಗಿ ಅಥವಾ ಕೆಲವರು ಬಯಸಿದ ಅಥವಾ ಊಹಿಸಿದ ರೀತಿಯಲ್ಲಿ ಅಥವಾ ಅವರು ಊಹಿಸುವ ರೀತಿಯಲ್ಲಿ ಅದನ್ನು ಮಾಡಲಾಗುವುದಿಲ್ಲ. ಪ್ರಸ್ತುತ ನಾಗರೀಕತೆಯು ನಿಶ್ಚಯವಾಗಿ ಬದಲಾಗಬೇಕು, ಆದರೆ ಅದು ವಿನಾಶದಿಂದಾಗಬೇಕೋ ಅಥವಾ ಶ್ರೇಷ್ಠ ಸತ್ಯದ ಮೇಲೆ ಆಧರಿಸಿದ ಹೊಸ ನಿರ್ಮಾಣದಿಂದ ಆಗಬೇಕೊ ಎನ್ನವುದು ಸಮಸ್ಯೆ. ಶ್ರೀಮಾತೆಯವರು ಈ ಪ್ರಶ್ನೆಯನ್ನು ಅತಂತ್ರ ಸ್ಥಿತಿಯಲ್ಲಿ ಬಿಟ್ಟಿದ್ದಾರೆ ಮತ್ತು ನಾನು ಮಾತ್ರ ಅದನ್ನೇ ಮಾಡಬಲ್ಲೆ.

*

ಇದು ನಿಮಗೆ ಹಾಗೂ ಎಲ್ಲರಿಗೂ ಸಂಕಟದ ಸಮಯವೆಂದು ನನಗೆ ಗೊತ್ತು. ಅಂತೆಯೆ ಇಡೀ ಜಗತ್ತಿಗೆ ಕೂಡ; ಎಲ್ಲೆಡೆಯು ಗೊಂದಲ, ತೊಂದರೆ, ಅವ್ಯವಸ್ಥೆ ಮತ್ತು ಅಸಮಾಧಾನವು ಸಂಗತಿಗಳ ಸಾಮಾನ್ಯ ಸ್ಥಿತಿಯಾಗಿದೆ. ಬರಲಿರುವ ಉತ್ತಮ ವಿಷಯಗಳು ಸಿದ್ಧವಾಗುತ್ತಿವೆ ಅಥವಾ ಮುಸುಕಿನ ಅಡಿಯಲ್ಲಿ ಬೆಳೆಯುತ್ತಿವೆ ಮತ್ತು ಕೆಟ್ಟ ಸಂಗತಿಗಳು ಎಲ್ಲೆಡೆಯು ಪ್ರಮುಖವಾಗಿವೆ. ಬೆಳಕು ಬರುವ ಸಮಯದವರೆಗೆ ಎಲ್ಲ ಪರಿಸ್ಥಿತಿಗಳಲ್ಲಿ ತಾಳಿಕೊಳ್ಳುವುದು ನಾವು ಮಾಡಬೇಕಾದ ಸಂಗತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/221–22**

**ವಿಕಸನವನ್ನು ಮುಂದುವರೆಸಿಕೊಂಡು ಹೋಗುವುದು**

*ನೀವು ಹಾಗೂ ಶ್ರೀಮಾತೆಯವರು ಈ ಭೂಮಿಯ ಮೇಲೆ ಅದರ ಸೃಷ್ಟಿಯಾದಾಗಿನಿಂದ ಇದ್ದೀರೆಂದು ಹೇಳಲಾಗುತ್ತಿದೆ. ಆದರೆ ಮಿಲಿಯ ವರ್ಷಗಟ್ಟಲೆ ಮರೆಯ ಹಿಂದೆ ನೀವೇನು ಮಾಡುತ್ತಲಿದ್ದಿರಿ? ನಾನು "ಮರೆಯ ಹಿಂದೆ" ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದೇನೆ, ಯಾಕೆಂದರೆ, ಈಗಷ್ಟೆ ನೀವು ನಿಮ್ಮ ನೈಜ ಸ್ವರೂಪದಲ್ಲಿ ಜಗತ್ತಿಗೆ ತೋರ್ಪಡಿಸಿಕೊಳ್ಳುತ್ತಿದ್ದೀರಿ.*

ವಿಕಸನವನ್ನು ಮೂಂದುವರೆಸಿಕೊಂಡು ಹೋಗುವುದು.

*

*"ವಿಕಸನವನ್ನು ಮುಂದುವರೆಸಿಕೊಂಡು ಹೋಗುವುದು" ಎನ್ನುವುದನ್ನು ಯಾವ ರೀತಿ ಅರ್ಥೈಸಿಕೊಂಡಿದ್ದೀರಿ ಎಂಬುದನ್ನು ಅರ್ಥಮಾಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ನೀವು ಇದನ್ನು ಸಂಪೂರ್ಣವಾಗಿ ವಿವರಿಸಬಹುದೇ?*

ಇದರರ್ಥ ಇಡೀ ಮಾನವ ಇತಿಹಾಸವನ್ನು ಬರೆಯುವುದು. ವಿಕಾಸವನ್ನು ದೂರದ ಹಂತಕ್ಕೆ ಕೊಂಡೊಯ್ಯಲು ವಿಶೇಷ ಅವರೋಹಣಗಳಿವೆ ಎಂದು ನಾನು ಹೇಳಬಲ್ಲೆ, ಹಾಗೆಯೇ ಪ್ರತಿಯೊಂದು ಹಂತದಲ್ಲೂ ಒಂದಲ್ಲ ಒಂದು ನಿಟ್ಟಿನಲ್ಲಿ ಸಹಾಯ ಮಾಡಲು ದೈವೀ ಸ್ವರೂಪವಾದದ್ದು ಯಾವಾಗಲೂ ಇರುತ್ತದೆ.

*

*ನೀವು ಮತ್ತು ಶ್ರೀಮಾತೆಯವರು ಮೊದಲಿನಿಂದಲೂ ನಿರಂತರವಾಗಿ ಭೂಮಿಯ ಮೇಲೆ ಇದ್ದುದರಿಂದ, ಅವತಾರಗಳು ಒಂದಾದ ಮೇಲೊಂದು ಇಲ್ಲಿಗೆ ಬರುವ ಅಗತ್ಯವೇನಿತ್ತು?*

ನಾವು ಭೂಮಿಯ ಮೇಲೆ ಅವತಾರಗಳಾಗಿ ಇರಲಿಲ್ಲ.

*

*ನೀವಿಬ್ಬರೂ ಭೂಮಿಯ ಮೇಲೆ ಅವತಾರಗಳಾಗಿ ಇರಲಿಲ್ಲ, ಆದಾಗ್ಯೂ ನೀವು ವಿಕಾಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ ಎಂದು ನೀವು ಹೇಳುತ್ತೀರಿ. ಪರಮಾತ್ಮನೇ ಭೂಮಿಯ ಮೇಲೆ ವಿಕಾಸವನ್ನು ನಡೆಸುತ್ತಿರುವುದರಿಂದ, ಅವನದೇ ಭಾಗವಾಗಿರುವ ಅವತಾರಗಳು ಕೆಳಗಿಳಿದು ಬರು ಅವಶ್ಯಕತೆ ಏನಿತ್ತು?*

ವಿಶೇಷವಾದ ಕಾರ್ಯವನ್ನು ಮಾಡಬೇಕಾದಾಗ ಮತ್ತು ವಿಕಸನದ ಬಿಕ್ಕಟ್ಟಿನ ಸಂದರ್ಭದಲ್ಲಿ ಅವತಾರವು ಅವಶ್ಯಕವಾಗಿದೆ. ಅವತಾರವು ಒಂದು ವಿಶೇಷ ಅಭಿವ್ಯಕ್ತಿಯಾಗಿದೆ, ಆದರೆ ಉಳಿದ ಸಮಯದಲ್ಲಿ ಅದು ವಿಭೂತಿಯಾಗಿ ಸಾಮಾನ್ಯ ಮಾನವ ಮಿತಿಯಲ್ಲಿ ಕೆಲಸ ಮಾಡುವ ದೈವವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/88–91**

## ಕೊನೆಯ ಅವತಾರ

ಕಲ್ಕಿಯ ಕುರಿತ ವಿವರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗಿಲ್ಲ – ಮುಂದಿನ ಇತಿಹಾಸದ ವಿವರಗಳ ಭವಿಷ್ಯ ನುಡಿಯುವ ಪ್ರಯತ್ನಕ್ಕಿಂತ ಅವು ಸಾಂಕೇತಿಕವಾಗಿವೆ. ಏನು ವ್ಯಕ್ತವಾಗಿದೆಯೊ ಅದರಿಂದ ಏನಾದರೂ ಬರಲೇಬೇಕು, ಆದರೆ ಅದನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ, ಮತ್ತೇನೂ ಇಲ್ಲ. ಹಾಗೆಯೇ, ಪುರಾಣದಲ್ಲಿನ ಯುಗಗಳ ಬಗ್ಗೆ ನಿಖರವಾದ ಅಂಕಿ ಅಂಶಗಳಗೆ ಅತಿಯಾದ ಮಹತ್ವವನ್ನು ಕೊಡಬೇಕಾಗಿಲ್ಲ. ಇಲ್ಲಿ ಮತ್ತೊಮ್ಮೆ ಕಾಲ ಮತ್ತು ಯುಗಗಳು ವಿಕಸನದ ಆವರ್ತಕ ಚಕ್ರದಲ್ಲಿ ಅನುಕ್ರಮದ ಅವಧಿಗಳನ್ನು, ಪರಿಪೂರ್ಣ ಸ್ಥಿತಿಯನ್ನು, ಒಂದು ಹೊಸ ಜನ್ಮದ ನಂತರದ ಮಾನವತೆಯ ಅನುಕ್ರಮ ಯುಗಗಳ ಅವನತಿ ಮತ್ತು ವಿಘಟನೆಯನ್ನು ಸೂಚಿಸುತ್ತವೆ, – ಗಣಿತದ ಲೆಕ್ಕಾಚಾರಗಳು ಮಹತ್ವದ ಅಂಶವಲ್ಲ. ಕಲಿ ಯುಗದ ಅಂತ್ಯವು ಅದಾಗಲೇ ಬಂದಿದೆ ಅಥವಾ ಬರಲಿದೆ ಮತ್ತು ಹೊಸ ಸತ್ಯ ಯುಗವು ಬರಲಿದೆ ಎಂಬ ವಾದವು ಬಹಳ ಪರಿಚಿತವಾದ ವಾದವಾಗಿದೆ ಮತ್ತು ಅದನ್ನು ಎತ್ತಿಹಿಡಿದವರು ಅನೇಕರಿದ್ದಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/489 – ಶ್ರೀ ಅರವಿಂದರು**

ಶ್ರೀ ಅರವಿಂದೋ ಅವರ ಅವತಾರವು "ಕೊನೆಯ ಅವತಾರ" ಎಂದು ನಾನು ಬಹಳಷ್ಟು ಸಲ ಕೇಳಿದ್ದೆ; ಆದರೆ ಅವರದು ಬಹುಶಃ ಮಾನವ ದೇಹದಲ್ಲಿನ ಕೊನೆಯ ಅವತಾರ – ನಂತರ, ನಮಗೆ ಗೊತ್ತಿಲ್ಲ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/253**

## ಎರಡು ಸಾದೃಶ್ಯ ಸತ್ಯಗಳು

ಅನಂತ ಮತ್ತು ಸರ್ವೋಚ್ಚ ದೃಷ್ಟಿಕೋನದಿಂದ ಒಂದೇ ಪ್ರಾಮುಖ್ಯತೆಯನ್ನು ಹೊಂದಿದ ಎರಡು ಸಾದೃಶ್ಯ ಸಂಗತಿಗಳಿವೆ, ಅದರಲ್ಲಿ ಸಾಕ್ಷಾತ್ಕಾರವು ನಿಜವಾದ ಸಾಕ್ಷಾತ್ಕಾರವಾಗಲು ಎರಡೂ ಸಮಾನವಾಗಿ ಅವಶ್ಯಕವಾಗಿದೆ. ಒಂದೆಡೆ, ಶ್ರೀ ಅರವಿಂದರು – ಅವತಾರವಾಗಿ, ಭೂಮಿಯ ಮೇಲಿನ ಅತ್ಯುನ್ನತ ಪ್ರಜ್ಞೆ ಮತ್ತು

ಇಚ್ಛೆಯನ್ನು ಪ್ರತಿನಿಧಿಸುತ್ತಾರೆ – ನನ್ನನ್ನು ಪರಮಶಕ್ತ ವಿಶ್ವಾತ್ಮಕ ಮಾತೆ ಎಂದು ಘೋಷಿಸಿದರು; ಮತ್ತೊಂದೆಡೆ, ಸಮಗ್ರ ಸಾಧನೆಯ ಮೂಲಕ ನಾನು ನನ್ನ ದೇಹದಲ್ಲಿ ಏನನ್ನು ಅರಿತುಕೊಳ್ಳುತ್ತಿದ್ದೇನೆಯೊ ಅದೂ ಇದೆ. ನಾನು ಪರಮಶಕ್ತ ಮಾತೆಯಾಗಿರಬಹುದು ಮತ್ತು ಯಾವುದೇ ಸಾಧನೆಯನ್ನು ಮಾಡುವುದಿಲ್ಲ, ಮತ್ತು ವಾಸ್ತವವಾಗಿ, ಶ್ರೀ ಅರವಿಂದರು ಅವರ ದೇಹದಲ್ಲಿ ಇರುವವರೆಗೂ ಸಾಧನೆಯನ್ನು ಮಾಡಿದವರು, ನಾನು ಪರಿಣಾಮಗಳನ್ನು ಸ್ವೀಕರಿಸಿದ್ದೇನೆ. ಈ ಪರಿಣಾಮಗಳು ತಾವಾಗಿಯೆ ಬಾಹ್ಯ ಪುರುಷನಲ್ಲಿ ಸ್ಥಾಪಿಸಲ್ಪಟ್ಟಿದ್ದವು, ಆದರೆ ಅದನ್ನು ಮಾಡುತ್ತಿದ್ದವರು ಶ್ರೀ ಅರವಿಂದರು, ನಾನಲ್ಲ – ನಾನು ಅವರ ಸಾಧನೆಯ ಮತ್ತು ಪ್ರಪಂಚದ ನಡುವಿನ ಬರೀ ಸೇತುವೆಯಾಗಿದ್ದೆ. ಅವರು ತಮ್ಮ ದೇಹವನ್ನು ತೊರೆದಾಗ ಮಾತ್ರ ನಾನು ಸಾಧನೆಯನ್ನು ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಲಾಯಿತು; ಅವರ ಸಾಧನೆಯ ಮತ್ತು ಪ್ರಪಂಚದ ನಡುವಿನ ಬರೀ ಸೇತುವೆಯಾಗಿದ್ದ ನಾನು ಮೊದಲು ಏನು ಮಾಡುತ್ತಿದ್ದೆನೋ ಅದನ್ನು ಮಾಡವುದಲ್ಲದೆ – ಸಾಧನೆಯನ್ನು ನನ್ನಷ್ಟಕ್ಕೆ ನಾನು ಮುಂದುವರೆಸಿಕೊಂಡು ಹೋಗಬೇಕಾಗಿತ್ತು. ಅವರು ತಮ್ಮ ದೇಹದಲ್ಲಿ ಏನು ಮಾಡುತ್ತಲಿದ್ದರೊ, ಆ ಜವಾಬ್ದಾರಿಯನ್ನು ಬಿಟ್ಟಮೇಲೆ, ಆ ಜವಾಬ್ದಾರಿಯನ್ನು ಅವರು ನನ್ನ ಮೇಲೆ ಹಾಕಿದರು ಮತ್ತು ನಾನು ಅದನ್ನು ಮಾಡಬೇಕಾಯಿತು. ಆದ್ದರಿಂದ ಈ ಎರಡೂ ಸಂಗತಿಗಳು ಅಲ್ಲಿದ್ದವು. ಕೆಲವೊಮ್ಮೆ ಒಂದು ಮೇಲುಗೈ ಸಾಧಿಸುತ್ತದೆ, ಕೆಲವೊಮ್ಮೆ ಇನ್ನೊಂದು (ಸಮಯಕ್ಕನುಕ್ರಮವಾಗಿ ಎಂದು ನಾನು ಅರ್ಥೈಸುವುದಿಲ್ಲ, ಆದರೆ ... ಇದು ಆ ಕ್ಷಣದ ಮೇಲೆ ಅವಲಂಬಿಸಿರುತ್ತದೆ), ಮತ್ತು ಅವುಗಳು ಒಂದು ಸಮಗ್ರವಾದ ಹಾಗೂ ಪರಿಪೂರ್ಣವಾದ ಸಾಕ್ಷಾತ್ಕಾರದಲ್ಲಿ ಸಂಯೋಜಿಸಲು ಪ್ರಯತ್ನಿಸುತ್ತಿವೆ: ಪರಮಾತ್ಮನ ಆಡಳಿತಾಧಿಕಾರಿಯ ಶಾಶ್ವತ, ಅನಿರ್ವಚನೀಯ ಹಾಗೂ ಬದಲಾಗದ ಪ್ರಜ್ಞೆ ಮತ್ತು ನಿರಂತರವಾಗಿ ಹೆಚ್ಚುತ್ತಿರುವ ಪ್ರಗತಿಯತ್ತ ಏರಿಕೆಯ ಪ್ರಯತ್ನದಲ್ಲಿ ಹೋರಾಡುವ ಸಮಗ್ರ ಯೋಗದ ಸಾಧಕನ ಪ್ರಜ್ಞೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 10, 1958**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**17**

### ಅಧ್ಯಾಯ – 16
### ಅವತಾರದ ಪ್ರಕ್ರಿಯೆ

ಮಾನವನ ರೂಪದಲ್ಲಿ ಭಗವಂತನೇ ಅವತರಿಸಿ ಬರುವುದು ಅಥವಾ ಈಶ್ವರನೇ ಸ್ವತಃ ಮಾನವನ ಧರ್ಮವನ್ನು, ಅವನ ಪ್ರಕೃತಿಯನ್ನು ಧಾರಣ ಮಾಡಿಕೊಂಡು ಬರುವುದು ನಮಗೆ ನಿಜವಾಗಿ ಬಹುದೊಡ್ಡ ರಹಸ್ಯವೇ; ಆದರೆ ಗೀತೆಯ ದೃಷ್ಟಿಯಲ್ಲಿ ಇದು ಮಾನವನ ಜನ್ಮದ ಶಾಶ್ವತವಾದ ರಹಸ್ಯದ ಒಂದು ಪಾರ್ಶ್ವ ಮಾತ್ರ. ಬಾಹ್ಯ ನೋಟಕ್ಕೆ ಇದೊಂದು ಅದ್ಭುತ ಪವಾಡವೆಂಬಂತೆ ತೋರಿದರೂ ಸಹ, ಜನನವೆಂಬ ಶಾಶ್ವತ ರಹಸ್ಯದ ಒಂದು ದಂಡೆ ಮಾತ್ರ. ಪ್ರತಿಯೊಬ್ಬ ಮಾನವನ ವೈಯಕ್ತಿಕ ಮತ್ತು ವಿಶ್ವಾತ್ಮಕ ಸತ್ತೆಯು ಭಗವಂತನೇ. ಮಾನವನ ವೈಯಕ್ತಿಕ ಆತ್ಮ ಕೂಡ ಭಗವಂತನ ಅಂಶವೇ "ಮಮೈವಾಂಶಃ" ಹಾಗೆಂದಾಕ್ಷಣ ಇದು ಒಂದು ಭಾಗ ಅಥವಾ ಒಂದು ತುಣುಕು ಎಂದರ್ಥವಲ್ಲ, ಭಗವಂತನು ಈ ರೀತಿ ಸಣ್ಣ ಸಣ್ಣ ತುಣುಕುಗಳಾಗಿ ಒಡೆದು ಹೋಗುವಂಥವನಲ್ಲ: ಒಂದು ಮಹಾ ಪ್ರಜ್ಞೆಯ ಅಥವಾ ದಿವ್ಯ ಚಿತ್‌ಶಕ್ತಿಯ ಭಾಗಶಃ ಅಭಿವ್ಯಕ್ತಿ ಎಂದು ತಿಳಿಯುತ್ತೇವೆ, ಮಹಾಶಕ್ತಿಯ ಆಂಶಿಕ ಪ್ರಕಟನೆ ಎಂದು ಭಾವಿಸುತ್ತೇವೆ, ಮಹಾ ಅಸ್ತಿತ್ವದ ಆನಂದದ ಭಾಗಶಃ ಅನುಭೋಗ ಎಂದು ತಿಳಿಯುತ್ತೇವೆ. ಒಟ್ಟಾರೆ ಇದರ ಅರ್ಥವೇನೆಂದರೆ ಪ್ರಕೃತಿಯಲ್ಲಿ ಪರಮಾತ್ಮನ ಪ್ರಕಟನೆಯೆಂದರೆ ಅನಂತ ಹಾಗೂ ನಿಸ್ಸೀಮತೆಯು ಸಾಂತ ಮತ್ತು ಸೀಮಿತ ರೂಪದಲ್ಲಿ ಅಭಿವ್ಯಕ್ತವಾಗುವುದು. ಈ ಮಿತಿಯ ಮುದ್ರೆಯು ಅಜ್ಞಾನದಲ್ಲಿ ಮರೆವಾಗಿ ಅಥವಾ ಆತ್ಮ ವಿಸ್ಮೃತಿಯಾಗಿ ತಾನೇ ಭಗವಂತನು, ಪ್ರತಿ ಜೀವಿಯ ಹೃದಯದಲ್ಲಿ ಜ್ವಲಂತ ಜ್ಯೋತಿಯಾಗಿ ತಾನೇ ಇದ್ದೇನೆ ಎಂಬುದನ್ನು ಸಂಪೂರ್ಣವಾಗಿ ಮರೆಸಿ ಬಿಡುತ್ತದೆ. ಮಾನವನ ಪ್ರಜ್ಞೆಯ ದೇಗುಲದ ಗರ್ಭಗುಡಿಯಲ್ಲಿ ರಹಸ್ಯ ರೂಪದಿಂದ ತಾನೇ ಇರುವುದರ ಮರೆವು ಅವನಿಗೆ ಸಂಭವಿಸುತ್ತದೆ.

ಅವನಿಗೆ ಅಜ್ಞಾನ ಬರಲು ಏನು ಕಾರಣ? ಉತ್ತರ ಇಷ್ಟೇ, ಅವನ ಆತ್ಮದ ಕಂಗಳ ಮೇಲೆ ನಿಸರ್ಗ, ಪ್ರಕೃತಿ ಅಥವಾ ಮಾಯೆಯ ಪರದೆ ಇದೆ; ಶಾಶ್ವತನಾದ

ಭಗವಂತನು ಪ್ರಕಟವಾಗಬೇಕಾದರೆ ಈ ರೀತಿಯ ಗೌಪ್ಯತೆ ಅಗತ್ಯವಿದೆ. ಸರಕಾರೀ ಟಂಕಸಾಲೆಯಲ್ಲಿ ನಾಣ್ಯ ತಯಾರು ಮಾಡುವಂತೆ ಪ್ರಕೃತಿಯು ಅತಿ ಮೌಲಿಕವಾದ ದಿವ್ಯ ದ್ರವ್ಯವನ್ನು ತೆಗೆದುಕೊಂಡು, ಅನೇಕ ಅಜ್ಞ ಜೀವಿಗಳನ್ನು ಸೃಷ್ಟಿಸುತ್ತದೆ. ಅದರ ಮೇಲೆ ಅತಿ ದಪ್ಪನಾದ ದೃಶ್ಯ ಪ್ರಪಂಚದ ಗುಣ ಧರ್ಮಗಳ ಗಿಲೀಟು ಕೊಡುತ್ತದೆ; ಮೇಲೆ ಪುನಃ ಜೀವಂತ ಮಾನವತೆಯ ಮುದ್ರೆಯನ್ನು ಒತ್ತುತ್ತದೆ. ಅಂತರಂಗದಲ್ಲಿ ಗೌಪ್ಯವಾಗಿ ದೇವತಾತ್ಮ ಹೃದಯವೇ ಇದ್ದರೂ ಆರಂಭದಲ್ಲಿ ಅದನ್ನು ಗುರುತಿಸಲು ಸಾಧ್ಯವಾಗುವುದಿಲ್ಲ; ಹಾಗೆ ನೋಡಿದರೆ ಆರಂಭದಲ್ಲಿ ಮಾತ್ರ ಅಲ್ಲ ಅದನ್ನು ಗುರುತಿಸುವುದು ಯಾವಾಗಲೂ ಕಠಿಣವೇ. ನಮ್ಮ ಅಸ್ತಿತ್ವದ ರಹಸ್ಯದೊಳಗೆ ಹೋಗಿ ಪರೀಕ್ಷಿಸದ ಹೊರತು ಆತ್ಮ ಸಂಶೋಧನೆ ಸಾಧ್ಯವೇ ಇಲ್ಲ. ಆ ಗೌಪ್ಯ ಸ್ತರದಲ್ಲಿ ಮಾತ್ರ ಭೌಮ ಸತ್ವವನ್ನು ಪರಮಾತ್ಮಮುಖಿ ಸತ್ವದಿಂದ ಬಿಡಿಸಿ ತಿಳಿಯಬಹುದು. ಆದರೆ ಅವತಾರದಲ್ಲಿ ಮೇಲಿನ ಗಿಲೀಟನ್ನು ಮೀರಿ ಮೂಲ ನಿಜ ದ್ರವ್ಯ ಹೊಳೆದು ತೋರುತ್ತದೆ. ಮಾನವೀಯ ಅಜ್ಞಾನದ ಮುದ್ರೆಯೇನೋ ಇರುತ್ತದಾದರೂ ಅದು ಮೇಲಿನ ಆಕಾರಕ್ಕೆ ಮಾತ್ರ ಸೀಮಿತವಾಗಿರುತ್ತದೆ; ನೋಟವೋ ಅಂತರಂಗದಲ್ಲಿ ರಹಸ್ಯವಾಗಿರುವ ಭಗವಂತನದು, ಪ್ರಾಣದ ಶಕ್ತಿಯೋ ರಹಸ್ಯವಾಗಿ ಅಡಗಿರುವ ಭಗವಂತನದು, ಮತ್ತು ಇದು ಮಾನವೀಯ ಮುದ್ರೆಯನ್ನು ಒಡೆದು ಹೊರ ಕಾಣಿಸುವುದು. ಈಶ್ವರನ ಚಿಹ್ನೆ ಅಥವಾ ಒಳಗಿರುವ ಆತ್ಮದ ಇರುವಿಕೆಯ ಲಕ್ಷಣ ಎಲ್ಲರಿಗೂ ಕಾಣುವಂತೆ ಎದ್ದು ತೋರುವುದು. ಎಲ್ಲರಿಗೂ ಅಂದರೆ ಎಲ್ಲರಿಗೂ ಅಂತಲ್ಲ, ಯಾರಿಗೆ ನೋಡಬೇಕೆಂಬ ಇಚ್ಛೆ ಇದೆಯೋ ಮತ್ತು ಯಾರಿಗೆ ನೋಡುವ ಸಾಮರ್ಥ್ಯ ಇದೆಯೋ ಅವರಿಗೆ ಎಂದು ಅರ್ಥ. ಆಸುರಿಕ ಸ್ವಭಾವವು ಇಂಥ ದೈವೀ ಸಂಗತಿಗಳಿಗೆ ಕುರುಡಾಗಿರುತ್ತದೆ, ಅದಕ್ಕೆ ಕಾಣುವುದು ಮೇಲಿನ ನಶ್ವರ ರೂಪ ಆಕಾರ ಮಾತ್ರ, ಆತ್ಮ ಕಾಣಿಸುವುದೇ ಇಲ್ಲ. ಮೇಲಿನ ಮುಸುಗು ಕಾಣುವುದೇ ವಿನಃ ಒಳಗಿನ ನಿಜವಾದ ಪುರುಷ ಕಾಣುವುದಿಲ್ಲ. ಸಾಮಾನ್ಯ ಮಾನವನ ಜನ್ಮದಲ್ಲಿ ವಿಶ್ವಾತ್ಮಕ ಈಶ್ವರನ ಪ್ರಕೃತಿಯ ಭಾವವು ಅಧಿಕವಾಗಿ ಕಂಡುಬಂದರೆ ಅವತಾರದಲ್ಲಿ ಅದೇ ಭಾವದ ದೈವೀ ಅಂಶ ಒಡೆದು ಎದ್ದು ಕಾಣುತ್ತದೆ. ಒಂದರಲ್ಲಿ ಭಗವಂತನು ಮಾನವೀಯ ಪ್ರಕೃತಿಗೆ ಹೆಚ್ಚು ಸ್ವಾತಂತ್ರ್ಯ ನೀಡಿದ್ದರೆ ಇನ್ನೊಂದರಲ್ಲಿ ದೈವೀ ಅಂಶ ಅಧಿಕವಾಗಿದ್ದು ಅದೇ ಪ್ರಮುಖ ಆಳುಗನಾಗಿರುತ್ತದೆ. ಸಾಮಾನ್ಯ ಮಾನವನ ರೀತಿ ಇದು ವಿಕಾಸದ ಮೂಲಕ ಇದು ಸಾಧ್ಯವಾದುದಲ್ಲ, ಅಥವಾ ದಿವ್ಯ ಜನ್ಮಕ್ಕೆ ಯೋಗ್ಯತೆ ಪಡೆದು

ಬಂದ ವಿಧದಲ್ಲೂ ಅಲ್ಲ, ಗೀತೆಯು ಹೇಳುವಂತೆ, ಅದರ ಬದಲಾಗಿ ದೈವೀ ವ್ಯಕ್ತಿತ್ವವೇ ಮಾನವತೆಯ ದ್ರವ್ಯದಲ್ಲಿ (ಮನಃ ಪ್ರಾಣ ಶರೀಗಳ ಸತ್ವದಲ್ಲಿ) ನೇರವಾಗಿ ಇಳಿದುಬಂದು ಅದನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುವುದು.

ಆದರೆ ಇದರ ಮುಖ್ಯ ಉದ್ದೇಶ ಇರುವುದು ವಿಕಾಸಕ್ಕೆ ಸಹಾಯಮಾಡುವುದು. ಇದನ್ನು ಗೀತೆ ಬಹಳ ಸ್ಪಷ್ಟವಾಗಿ ಹೇಳುತ್ತದೆ. ಸಾಮಾನ್ಯ ಮಾನವನ ಸ್ತರದಲ್ಲಿ ದೈವಿಕ ಸತ್ವವು ಇಳಿದು ಬರುವುದರ ಸಾಧ್ಯತೆಯನ್ನು ಹಾಗೂ ಇಂಥ ಸಾಧ್ಯತೆಯನ್ನು ಪ್ರದರ್ಶಿಸುವುದರ ಮೂಲಕ ಭಗವಂತನು ಜನರಲ್ಲಿ ಅಂಥ ಅಭೀಪ್ಸೆಯನ್ನು ಹಾಗೂ ಆ ದಿಶೆಯಲ್ಲಿ ಪ್ರಯತ್ನ ಮಾಡುವ ಧೈರ್ಯವನ್ನು ತುಂಬುತ್ತಾನೆ. ಆ ದೈವೀ ಪ್ರಕಟನೆಯ ಪ್ರಭಾವವು ಭೂ–ಪ್ರಕೃತಿಯಲ್ಲಿ ನಿರಂತರ ಸ್ಪಂದಿತವಾಗುತ್ತಿರುವಂತೆ ವ್ಯವಸ್ಥೆಮಾಡಿ ತನ್ನ ಅಧೀಕ್ಷಣದ ಅಡಿಯಲ್ಲಿ ಭೂಮಿಯ ವಿಕಾಸದ ಪ್ರಯತ್ನವನ್ನು ಸಬಲಗೊಳಿಸುತ್ತಾನೆ. ಈ ರೀತಿ ನಿರಂತರ ಪ್ರಯತ್ನ ಮಾಡುವ ಮಾನವ ವ್ಯಕ್ತಿಗೆ ತನ್ನನ್ನು ಪುನರ್–ರೂಪಿಸಿಕೊಳ್ಳಲು ದೈವೀ ಪ್ರಕಟನೆಯ ಅಚ್ಚೊಂದನ್ನು ನಿರ್ಮಿಸಿಕೊಡುವ ಉದ್ದೇಶ ಅದರಲ್ಲಿದೆ. ಒಂದು ಕರ್ಮಠ ಜಾತಿ, ಮತ, ಪಂಥವನ್ನಲ್ಲ ಬದಲಾಗಿ ಆಂತರಿಕ ಹಾಗೂ ಬಾಹ್ಯದಲ್ಲಿ ಆಧ್ಯಾತ್ಮಿಕ ಜೀವನವನ್ನು ನಡೆಸಲು ಅನುಕೂಲವಾಗುವ ಒಂದು ಪದ್ಧತಿಯನ್ನು, ಒಂದು ಸಮರ್ಥ ಧರ್ಮವನ್ನು ನೀಡುವ ಉದ್ದೇಶ ಅಲ್ಲಿದೆ. ಮಾನವನು ತನ್ನನ್ನು ತಾನು ದೈವತ್ವದೆಡೆಗೆ ಕೊಂಡೊಯ್ಯಲು ಯೋಗ್ಯವಾದ ಸೂತ್ರವನ್ನು ನಿಯಮವನ್ನು ನಿರೂಪಿಸಿಕೊಡುವ ಮಹಾ ಉದ್ದೇಶ ಅಲ್ಲಿದೆ. ಈ ಬೆಳವಣಿಗೆ ಅಥವಾ ಆರೋಹಣವು ಪ್ರತ್ಯೇಕಿತವಾದುದಲ್ಲ ಮತ್ತು ವ್ಯಕ್ತಿಗತ ಸಾಧನೆಯಿಂದ ಸಾಧ್ಯವಾಗುವಂಥದಲ್ಲ; ಎಲ್ಲ ದೈವಿಕ ಚಟುವಟಿಕೆಗಳಂತೆ ಇದು ಸಾಮೂಹಿಕ ಕಾರ್ಯವಾಗಿದೆ, ಸಂಪೂರ್ಣ ಮಾನವ ಜನಾಂಗಕ್ಕೇನೇ ಸಂಬಂಧಿಸಿದ್ದಾಗಿದೆ. ಸಮಸ್ತ ಮಾನವ ಕುಲದ ವಿಕಾಸಕ್ಕೆ ಸಹಾಯಮಾಡುವುದು, ಬಹು ಸಂಕಷ್ಟಕರ ಪರಿಸ್ಥಿತಿಗಳಲ್ಲಿ ಒಗ್ಗಟ್ಟಿನಿಂದ ಎದ್ದು ನಿಲ್ಲುವಂತೆ ಮಾಡುವುದು, ಕೆಳಕ್ಕೆ ಸೆಳೆಯುವ ಗುರುತ್ವಾಕರ್ಷಣದ ಶಕ್ತಿಗಳು ಪ್ರಬಲವಾದಾಗ ಅವುಗಳ ಬಲ ಕುಗ್ಗಿಸುವುದು, ಮಾನವನ ಪ್ರಕೃತಿಯಲ್ಲಿ ಶ್ರೇಷ್ಠವಾದ ದೈವೀ ತತ್ವದ ಧರ್ಮವನ್ನು ಪುನಃ ಪ್ರತಿಷ್ಠಾಪನೆ ಮಾಡುವುದು, ರಾಮ ರಾಜ್ಯವನ್ನು ಸ್ಥಾಪಿಸುವುದು, ಸಾಧು ಸಜ್ಜನರ ರಕ್ಷಣೆ ಮಾಡುವುದು ಹಾಗೂ ಆಸುರೀ–ರಾಕ್ಷಸೀ ಶಕ್ತಿಗಳ ನಿರ್ನಾಮ ಮಾಡುವುದು ಇಂಥವೇ ಮಹೋನ್ನತ ಉದ್ದೇಶಗಳು

ಅವತಾರ ತತ್ವದ ಬೆನ್ನೆಲುಬಾಗಿವೆ. ಇವೇ ಅವತಾರ ಪುರುಷನ ಉದ್ದೇಶಗಳು ಎಂದು ಲೋಕ ಗುರುತಿಸುತ್ತದೆ ಮತ್ತು ಇದೇ ಕಾರಣಕ್ಕೆ ಅವತಾರ ಪುರುಷನು ಸರ್ವೇಷಾಂ ಭಿನ್ನನೆಂದು ಗುರುತಿಸಿ ಆರಾಧಿಸುತ್ತದೆ. ಆಧ್ಯಾತ್ಮಿಕ ದೃಷ್ಟಿಕೋನದ ಪ್ರಕಾರ ಅವತಾರವೆನ್ನುವುದೊಂದು ಚಿಹ್ನೆ, ಮಾನವನ ಬದುಕಿನಲ್ಲಿ ಅದೊಂದು ಸಂಕೇತ, ಅಂತರಂಗದ ಶ್ರೀರಂಗನು ಬಾಹ್ಯದಲ್ಲಿ ಅದೇ ಮಾನವನ ರೂಪದಲ್ಲಿ ಪ್ರಕಟವಾಗುವುದು ಹಾಗೂ ತನ್ಮೂಲಕ ಎಲ್ಲರೂ ಅವತಾರ ಪುರುಷನ ಜೊತೆಗೆ ಒಂದಾಗಲು ಸಾಧ್ಯವೆಂಬುದನ್ನು ತೋರಿಸಿಕೊಡುವ ಸಮರ್ಥ ದೃಷ್ಟಾಂತ. ಮಾನವನ ಬಾಹ್ಯ ಜೀವನದಲ್ಲಿ ಕ್ರಿಸ್ತ, ಕೃಷ್ಣ, ಬುದ್ಧ ಇವರ ದೈವೀ ಪ್ರಕಟನೆಯು ಅಂತರಂಗದಲ್ಲಿನ ಸತ್ಯದ ಪ್ರಕಾರ ಪರಮ ಶಾಶ್ವತ ಪುರುಷನ ಶಾಶ್ವತ ಅವತರಣವೇ ಆಗಿದೆ. ಭೂಮಿಯ ಮೇಲಿನ ಮಾನವನ ಬಾಹ್ಯ ಜೀವನದಲ್ಲಿ ಯಾವ ಪರಿವರ್ತನೆಯು ಎಲ್ಲ ಮಾನವ ಜೀವಿಗಳ ಬದುಕಿನಲ್ಲಿ ಪುನರಪಿ ಪುನರಪಿ ಘಟಿಸಬೇಕಾಗಿದೆಯೋ ಅದನ್ನು ಜೀವಂತ ಉದಾಹರಣೆಯ ಮೂಲಕ ತೋರಿಸುವುದೇ ಅವತಾರದ ಉದ್ದೇಶವಾಗಿದೆ.

ಇದು ಅವತಾರದ ತತ್ವ ಮತ್ತು ಉದ್ದೇಶ. ಇದರ ಪ್ರಕ್ರಿಯೆ ಹೇಗೆ? ಮೊದಲನೆಯದಾಗಿ, ಅವತಾರದ ಪ್ರಕ್ರಿಯೆಯ ವಿಷಯವಾಗಿ ಒಂದು ತಾರ್ಕಿಕ ಅಥವಾ ಸೀಮಿತ ಪರಿಕಲ್ಪನೆ ಇದೆ; ಅದರ ಪ್ರಕಾರ ದೈವೀ (ಸಂಪತ್ತು ಅಥವಾ) ಗುಣಗಳಾದ ನೈತಿಕತೆ, ಬೌದ್ಧಿಕತೆ ಮತ್ತು ಕ್ರಿಯಾತ್ಮಕತೆ ಮುಂತಾದವು ಮಾನವನ ಕಲ್ಪನೆಯ ಮಟ್ಟವನ್ನು ಮೀರಿ ಯಾರಲ್ಲಿ ವಿಶೇಷವಾಗಿ ವ್ಯಕ್ತವಾಗುವುವೋ ಅವರನ್ನು ಅವತಾರ ಎಂದು ಹೇಳಲಾಗುವುದು. ಅಂದರೆ ಅವತಾರ ಪುರುಷನು ಸಾಮಾನ್ಯ ಮನುಷ್ಯನ ಮಟ್ಟಕ್ಕಿಂತ ನೈತಿಕವಾಗಿ, ಬೌದ್ಧಿಕವಾಗಿ ಮತ್ತು ಕ್ರಿಯಾತ್ಮಕವಾಗಿ ಬಹಳ ಹೆಚ್ಚು ಎತ್ತರದಲ್ಲಿರುತ್ತಾನೆ. ಈ ಪರಿಕಲ್ಪನೆಯು ಬಹು ಮಟ್ಟಿಗೆ ಸರಿಯಾಗಿದೆ. ಎರಡನೆಯದಾಗಿ, ಅವತಾರ ಪುರುಷನು ಏಕ ಕಾಲಕ್ಕೆ ವಿಭೂತಿ ಪುರುಷನೂ ಆಗಿರುತ್ತಾನೆ. ಕೃಷ್ಣನು ತನ್ನ ದೈವೀ ಆಂತರಿಕ ಸತ್ತೆಯಲ್ಲಿ ಮಾನವನ ರೂಪ ತಾಳಿದ ಈಶ್ವರನಾಗಿರುವಂತೆ ಬಾಹ್ಯದಲ್ಲಿ ತನ್ನ ಯುಗದ ಜನರ ನಾಯಕನೂ ಆಗಿದ್ದಾನೆ, ವೃಷ್ಣಿ ಕುಲದ ಶ್ರೇಷ್ಠ ಹಿರಿಯ ವ್ಯಕ್ತಿ ಅವನು. ಇದು ಪ್ರಕೃತಿಯ ದೃಷ್ಟಿಯಿಂದ ಕಾಣುವ ಸತ್ಯ ಆದರೆ, ಆತ್ಮ ದೃಷ್ಟಿಯಿಂದ ಸ್ವಲ್ಪ ಬೇರೆ. ತನ್ನ ಪ್ರಕೃತಿಯ ಅನಂತ ಗುಣಗಳ ಮೂಲಕ ಭಗವಂತ ಪ್ರಕಟವಾಗುತ್ತಾನೆ; ಈ

ಪ್ರಕಟನೆಯನ್ನು ಅವುಗಳ ತೀವ್ರತೆಯ ಮೂಲಕ, ಶಕ್ತಿಯ ಮೂಲಕ ಹಾಗೂ ಅದು ಸಾಧಿಸುವ ಕಾರ್ಯದ ಪರಿಣಾಮದ ಮೂಲಕ ಅಳೆಯಬಹುದು. ವಿಭೂತಿ ಪುರುಷನೆಂದರೆ ಪರಮಾತ್ಮನ ಗುಣಗಳ ನಿರ್ವೈಯಕ್ತಿಕ ಪ್ರಕಟನೆ, ದಿವ್ಯ ಜ್ಞಾನ, ದಿವ್ಯ ಶಕ್ತಿ, ದೈವೀ ಪ್ರೇಮ ಇತ್ಯಾದಿಗಳು ವಿಭೂತಿ ಪುರುಷನ ಮೂಲಕ ಯಾವುದಾದರೂ ರೂಪದಲ್ಲಿ ಉಕ್ಕಿ ಹರಿಯುತ್ತವೆ. ಜೀವಂತ ವ್ಯಕ್ತಿಯ ಮೂಲಕ ಮಾನಸಿಕ ರೂಪದಲ್ಲಿ ಹರಿದು ಬಂದ ಆ ಶಕ್ತಿಯು ಮಹತ್ಕಾರ್ಯಗಳನ್ನು ಸಾಧಿಸುತ್ತದೆ. ಈ ವಿಧವಾಗಿ ಆಂತರಿಕ ಹಾಗೂ ಬಾಹ್ಯ ಸಾಧನೆಗಳಲ್ಲಿ ಆತನ ಶ್ರೇಷ್ಠತೆಯು ಮೊದಲೇ ಪ್ರಕಾಶಮಾನವಾಗಿ ಎದ್ದು ಕಾಣಿಸುವುದು, ಸಮೃದ್ಧ ದೈವೀ ಗುಣವಂತಿಕೆಯ ಮಹಾಶಕ್ತಿ ಹಾಗೂ ಪರಿಣಾಮಕಾರಕ ಶಕ್ತಿ ಇವು ಅವತಾರದ ಪ್ರಮುಖ ಲಕ್ಷಣಗಳು. ಭಗವಂತನೆಡೆಗೆ ಸಾಗುವ ಮಾನವ ಜನಾಂಗದ ಸಾಮೂಹಿಕ ಕಷ್ಟಕರ ಸಾಹಸದಲ್ಲಿ ಮಾನವ ವಿಭೂತಿಯು ಯಾವಾಗಲೂ ಮಾರ್ಗದರ್ಶಕನಾಗಿ ಮುಂಚೂಣಿಯಲ್ಲಿ ಇರುತ್ತಾನೆ. ಥಾಮಸ್ ಕಾರ್ಲೈಲ್‌ನು ಹೇಳುವಂತೆ ಅವನು ಜನಾಂಗದ ನಾಯಕ, ಮಾನವನಲ್ಲಿರುವ ದೈವೀ ಶಕ್ತಿಯ ಪ್ರತೀಕ. ಗೀತೆಯಲ್ಲಿ ಸ್ವತಃ ಈಶ್ವರನೇ ಹೇಳುತ್ತಾನೆ – "ವೃಷ್ಣಿ ಕುಲದ ಮಧ್ಯೆ ನಾನು ವಾಸುದೇವ ಕೃಷ್ಣನು, ಪಾಂಡವರಲ್ಲಿ ನಾನು ಧನಂಜಯನು, ಋಷಿಗಳ ನಡುವೆ ನಾನು ವ್ಯಾಸ ಮಹರ್ಷಿ, ಆರ್ಷ ಕವಿಗಳಲ್ಲಿ ನಾನು ಉಶನಸನು" ಪ್ರತಿ ಗುಂಪಿನಲ್ಲಿ ಪ್ರಥಮನು, ಶ್ರೇಷ್ಠನು; ಆತ್ಮ–ಶಕ್ತಿಯ ಯಾವ ಅಂಶವನ್ನು ಹಾಗೂ ಕಾರ್ಯಗಳನ್ನು ಅವತಾರವು ಪ್ರತಿನಿಧಿಸುವುದೋ ಅದರ ಅತ್ಯಂತ ಬಲಿಷ್ಠ ರಾಯಭಾರಿ ಅವನು. ಮಾನವೀಯ ಸತ್ತೆಯ ಶಕ್ತಿಯನ್ನು ಉನ್ನತೀಕರಣಗೊಳಿಸುವುದು ಅವತಾರದ ಉದ್ದೇಶ ಮತ್ತು ದೈವೀ ಪ್ರಕಟನೆಯ ವಿಕಾಸದಲ್ಲಿ ಇದು ಅತಿ ಅವಶ್ಯಕವಾದ ಹೆಜ್ಜೆ. ಸಾಮಾನ್ಯ ಮಾನವೀಯ ಸ್ತರವನ್ನು ಮೀರಿ ಬೆಳೆದ ಪ್ರತಿ ವ್ಯಕ್ತಿಯು ತನ್ನ ಬಲದಿಂದ ಸಾಮಾನ್ಯ ಮಾನವತೆಯನ್ನು ಕೂಡ ಉನ್ನತೀಕರಿಸುತ್ತಾನೆ. ಅವನು ದೈವೀ ಸಾಧ್ಯತೆಗಳ ಜೀವಂತ ಅಭಿವಚನ, ಆ ಭಗವಂತನ ಪ್ರಮಾಣ, ದಿವ್ಯ ಬೆಳಕಿನ ಕಾಂತಿ, ದಿವ್ಯ ಶಕ್ತಿಯ ಉಸಿರು ಅವನು.

ಯಾರಲ್ಲಿ ಶ್ರೇಷ್ಠ ಮನಸ್ಸು ಮತ್ತು ನಾಯಕನ ಗುಣಗಳು ಹೇರಳವಾಗಿ ಇವೆಯೋ ಅವರನ್ನು ಒಮ್ಮೆಲೇ ದೇವರ ಮಟ್ಟಕ್ಕೆ ಒಯ್ದು ಆರಾಧಿಸುವುದು ಮಾನವನ ಸಹಜ ಸ್ವಭಾವವು. ಸಾಮಾನ್ಯವಾಗಿ ಇದು ಎಲ್ಲರಲ್ಲೂ ಕಂಡುಬರುತ್ತದೆ.

ಇದರ ಹಿಂದೆ ಅಡಗಿರುವ ನಿಜವಾದ ಸತ್ಯ ಇದುವೇ. ಅಂತೆಯೇ ಮಹಾ ಮಹಾ ಋಷಿಗಳಲ್ಲಿ, ಗುರುಗಳಲ್ಲಿ, (ಮತ) ಸ್ಥಾಪಕರಲ್ಲಿ ಹೀಗೆ ಅನೇಕರಲ್ಲಿ ಮನುಷ್ಯನ ಮನಸ್ಸು, ವಿಶೇಷವಾಗಿ ಭಾರತದ ಮನಸ್ಸು ಅಂಶಾವತಾರಗಳನ್ನು ಕಲ್ಪಿಸುತ್ತದೆ ಅಥವಾ ಗುರುತಿಸುತ್ತದೆ. ವಿಶೇಷವಾಗಿ ನಾವಿದನ್ನು ದಕ್ಷಿಣ ಭಾರತದ ಶ್ರೀವೈಷ್ಣವರಲ್ಲಿ ಕಾಣುತ್ತೇವೆ; ಅವರ ಪ್ರಕಾರ ಅನೇಕ ಆಳ್ವಾರರು(ಸಂತರು) ವಿಷ್ಣುವಿನ ಶಸ್ತ್ರಗಳಾದ ಚಕ್ರ–ಗದೆ–ಬಿಲ್ಲು ಇತ್ಯಾದಿಗಳ ಸಾಕ್ಷಾತ್ ಅವತಾರರಾಗಿದ್ದಾರೆ. ಮಹಾನ್ ಆತ್ಮಗಳೆಲ್ಲ ಭಗವಂತನ ಜೀವಂತ ಶಕ್ತಿಗಳೋ ಶಸ್ತ್ರಾಸ್ತ್ರಗಳೋ ಆಗಿದ್ದು ಮಾನವನ ಊರ್ಧ್ವಮುಖೀ ಪ್ರಯಾಣದಲ್ಲಿ ಮತ್ತು ಸಂಘರ್ಷದಲ್ಲಿ ಸಹಾಯ ನೀಡುತ್ತಾರೆ ಎಂಬ ದೃಢ ನಂಬಿಕೆ ಅವರಿಗಿದೆ. ಇಂಥ ಪರಿಕಲ್ಪನೆಯು ಭಾರತದ ಯಾವುದೇ ಪ್ರಕಾರದ ಭಕ್ತಿ ಪಂಥದಲ್ಲಿ ಅಥವಾ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಸಹಜವಾಗಿ ಮತ್ತು ಅಗತ್ಯವಾಗಿ ಇರುವುದು ಕಂಡುಬರುವುದರರ್ಥವೇನೆಂದರೆ, ದೈವೀ ಪ್ರಕೃತಿ ಹಾಗೂ ಮಾನವನ ಸ್ವಭಾವಗಳ ನಡುವೆ ಕಠೋರವಾದ ಅಭೇದ್ಯ ಗಡಿರೇಷೆಯನ್ನು ಅದು ಎಳೆಯುವುದಿಲ್ಲ, ಕಲ್ಪಿಸುವುದಿಲ್ಲ. ಇದು ಮಾನವನಲ್ಲಿ ದೈವತ್ವವನ್ನು ಗುರುತಿಸುವ ಪ್ರಯತ್ನದ ದ್ಯೋತಕವಾಗಿದೆ. ಇಷ್ಟಾಗಿಯೂ ವಿಭೂತಿ ಪುರುಷನು ಅವತಾರ ಅಲ್ಲ. ಇಲ್ಲವಾದರೆ ಅರ್ಜುನ, ವ್ಯಾಸ, ಉಶನಸ ಇವರೆಲ್ಲ ಕೃಷ್ಣನಂತೆ ಅವತಾರ ಎನಿಸಿಕೊಳ್ಳುತ್ತಿದ್ದರು. ಶಕ್ತಿ ಸಾಮರ್ಥ್ಯದಲ್ಲಿ ತುಸು ಕಡಿಮೆಯಾದರೂ ಅವತಾರವೆಂದು ಪರಿಗಣಿಸಲು ಅಡ್ಡಿಯಿರಲಿಲ್ಲ. ಕೇವಲ ದೈವೀ ಗುಣ ಇದ್ದರೆ ಮಾತ್ರ ಸಾಲದು, ಪರಮಾತ್ಮನ ಅಂತಃಪ್ರಜ್ಞೆ ಮುಖ್ಯ, ಅವನ ಮಾನವೀಯ ಗುಣಗಳ ಮೇಲೆ ಆತ್ಮದ ಅಧಿಕಾರ, ಆಳ್ವಿಕೆ ಇರಬೇಕಾದುದು ಮುಖ್ಯ. ಗುಣಗಳ ಶಕ್ತಿಯನ್ನು ಉನ್ನತೀಕರಿಸುವುದು ಸಂಭೂತಿಯ becoming ಒಂದು ಭಾಗ, "ಭೂತ ಗ್ರಾಮ" – ಸಾಮಾನ್ಯ ಪ್ರಕಟನೆಯಲ್ಲಿ ಅದು ಆರೋಹಣ. ಆದರೆ, ಅವತಾರದಲ್ಲಿ ವಿಶೇಷ ಪ್ರಕಟನೆ ಇರುತ್ತದೆ. ಅದು ಮೇಲಿನಿಂದ ಪರಮಾತ್ಮನೇ ಜನ್ಮ ತಾಳಿ ಇಳಿದು ಬರುವುದು, ಪರಮ ಶಾಶ್ವತನೂ ವಿಶ್ವಾತ್ಮಕನೂ ಆದ ಈಶ್ವರನು ಸಾಮಾನ್ಯ ಮಾನವ ಜೀವಿಯ ರೂಪದಲ್ಲಿ ಕೆಳಗಿಳಿದು ಬರುವುದು, – "ಆತ್ಮಾನಂ ಸೃಜಾಮಿ"; ಮತ್ತು ಆ ಬಗ್ಗೆ ಸಂಪೂರ್ಣ ಅರಿವು ಇರುವುದು, ಕೇವಲ ಪರದೆಯ ಹಿಂದೆ ಅಲ್ಲ ಬಾಹ್ಯ ಪ್ರಕೃತಿಯಲ್ಲೂ ಅದಿರುವುದು.

ಅವತಾರದ ಪ್ರಕ್ರಿಯೆಯ ಬಗ್ಗೆ ಇನ್ನೊಂದು ಪರಿಕಲ್ಪನೆಯೂ ಇದೆ, ಇದು ಹೆಚ್ಚು ಆಧ್ಯಾತ್ಮಿಕವೂ ಮಧ್ಯವರ್ತಿಯೂ ಆದ ಉಪಕ್ರಮವಾಗಿದೆ; ಮಾನವನ

ಆತ್ಮವು ಭಗವಂತನು ತನ್ನಲ್ಲಿ ಆವಾಹಿತನಾಗಲಿ ಎಂದು ಪ್ರಾರ್ಥಿಸುತ್ತದೆ, ಪರಿಣಾಮ ಸ್ವರೂಪವಾಗಿ ತನ್ನಲ್ಲಿ ಅವತರಣಗೊಂಡ ದೈವೀ ಪ್ರಜ್ಞೆಗೆ ಅಧೀನನಾಗಿಬಿಡುತ್ತಾನೆ, ಅಥವಾ ದೈವೀ ಪ್ರಜ್ಞೆಯ ಯೋಗ್ಯ ಮಾಧ್ಯಮವಾಗಿ ಬದಲಾಗುತ್ತಾನೆ. ಈ ದೃಷ್ಟಿಕೋನವು ಕೆಲ ವಿಶೇಷ ಆಧ್ಯಾತ್ಮಿಕ ಅನುಭವಗಳ ಮೇಲೆ ಆಧಾರಿತವಾಗಿದೆ. ಮನುಷ್ಯನಲ್ಲಿ ಈಶ್ವರನು ಅವತರಿಸುವುದೆಂದರೆ ಆ ವ್ಯಕ್ತಿಯು ಆಧ್ಯಾತ್ಮಿಕವಾಗಿ ಬೆಳೆದು ದೈವೀ ಪ್ರಜ್ಞೆಯನ್ನು ಮೈಗೂಡಿಸಿಕೊಳ್ಳುವುನು ಎಂದು ಅರ್ಥ, ಮತ್ತು ಇದರ ಆತ್ಯಂತಿಕ ಅವಸ್ಥೆಯಲ್ಲಿ ಅವನು ಪ್ರತ್ಯೇಕತೆಯನ್ನೇ ಕಳೆದುಕೊಂಡು ದಿವ್ಯ ಪ್ರಜ್ಞಾಸ್ವರೂಪನಾಗಿ ಬಿಡುತ್ತಾನೆ. ಅವನ ಆತ್ಮವು ಅನಂತತೆಯಲ್ಲಿ ಮತ್ತು ವಿಶ್ವಾತ್ಮಕ ಸತ್ತೆಯಲ್ಲಿ ಒಂದಾಗಿ ಬಿಡುತ್ತದೆ ಅಥವಾ ವಿಶ್ವಾತೀತತೆಯಲ್ಲಿ ಕರಗಿಹೋಗಿ ಬಿಡುತ್ತದೆ. ಇದನ್ನೇ ಅವನು ಬ್ರಹ್ಮನಲ್ಲಿ ಒಂದಾಗುತ್ತಾನೆ ಅಥವಾ ಅದ್ವೈತ ಬ್ರಹ್ಮನೇ ಆಗಿ ಬಿಡುತ್ತಾನೆ ಎಂದು ಹೇಳುತ್ತಾರೆ. ಇದನ್ನು ಗೀತೆಯು "ಬ್ರಹ್ಮ ಭೂತ"ನಾಗುವುನೆಂದೂ, ಅವನು ಕೃಷ್ಣನಲ್ಲಿಯೇ ವಾಸ ಮಾಡುತ್ತಾನೆ ಎಂದು ವಿವರಿಸುತ್ತದೆ. ಆದರೆ, ಅವನು ಸರ್ವೇಶ್ವರನೂ ಪುರುಷೋತ್ತಮನೂ ಆಗುತ್ತಾನೆ ಎಂದು ಹೇಳುವುದಿಲ್ಲ. ಜೀವ ಅಥವಾ ಜೀವಾತ್ಮನು ಈಶ್ವರನ (ಪುರುಷೋತ್ತಮನ) ಆಂಶಿಕ ಸ್ವರೂಪ "ಮಮೈವಾಂಶೋ" ಎಂದು ಒಪ್ಪಿಯೂ ಅವತಾರವನ್ನು ಪುರುಷೋತ್ತಮ ಎಂದು ಹೇಳುವುದಿಲ್ಲ. ಏಕೆಂದರೆ ಈ ರೀತಿಯ ಸರ್ವಶ್ರೇಷ್ಠ ಏಕತೆಯು ಅಥವಾ ಸಂಭೂತಿಯು becoming ಎಷ್ಟೆಂದರೂ ಆರೋಹಣದ ಅಥವಾ ವಿಕಾಸದ ಭಾಗವೇ. ಇದನ್ನು ಪ್ರತಿ ಜೀವನೂ ಪಡೆಯಬಹುದಾದ, ಪಡೆಯಲೇಬೇಕಾದ ದಿವ್ಯ ಜನ್ಮವಾಗಿದೆ. ಇದು ಭಗವಂತನ ಅವತರಣವಲ್ಲ, ಅವನ ಅವತಾರವಲ್ಲ, ಬೌದ್ಧ ಮತದ ಪ್ರಕಾರ ಇದನ್ನು ಬೇಕಾದರೆ "ಬುದ್ಧತ್ವ" ಎಂದು ಕರೆಯಬಹುದು, ಇದು ಅವತಾರದ ಆಂತರಿಕ ಪ್ರಜ್ಞೆಯನ್ನು ಹೊಂದಿದ್ದು ಅವತಾರದ ವಿಶೇಷ ಕಾರ್ಯವನ್ನು ಮಾಡಬಲ್ಲ ಸಾಮರ್ಥ್ಯವನ್ನು ಅವಶ್ಯವಾಗಿ ಹೊಂದಿರುವುದೆಂದು ಹೇಳಲಾಗದು.

(ಸಶೇಷ)

## ಶ್ರೀ ಅರವಿಂದರ 'ಕರ್ಮಯೋಗಿನ್' ಪತ್ರಿಕೆಯ 'ಪುಸ್ತಕ ಪರಿಚಯ'

# "ಸಂಸ್ಕೃತ ಸಂಶೋಧನೆ"

**– ಅನು: ಪುಟ್ಟು ಕುಲಕರ್ಣಿ**

ಈ **'ಅಂಗ್ಲೋ – ಸಂಸ್ಕೃತ ತ್ರೈಮಾಸಿಕ'**ವು ಮೇಲ್ನೋಟಕ್ಕೇ ಕಾಣುತ್ತಿರುವಂತೆ ಸಂಸ್ಕೃತ ಸಂಶೋಧನಾ ಕಾರ್ಯಗಳಿಗಾಗಿ, – ಭಾರತೀಯ ಸಂಸ್ಕೃತಿಯ ಪ್ರಾಚೀನತೆಯ ಎಲ್ಲ ವಿಷಯಗಳಲ್ಲೂ ಸಂಶೋಧನೆಯನ್ನು ಕೈಗೊಳ್ಳುವ ಸಲುವಾಗಿ – ಸಂಪೂರ್ಣ ಸಮರ್ಪಣಾ ಮನೋಭಾವದಲ್ಲಿ ನಿರತವಾಗಿರುವ ಸಂಗತಿಯನ್ನು ಸ್ವಾಗತಿಸಲೇಬೇಕು. ಭಾರತದ ಸುವ್ಯಾಪ್ತ ಸಾಂಸ್ಕೃತಿಕ ಆಯಾಮಗಳನ್ನು ಇದು ಹೊಂದಿದ್ದು, ಮತ್ತು ಇತ್ತೀಚಿನ ಬೆಳವಣಿಗೆಗಳನ್ನು ಅರಿತುಕೊಳ್ಳುವಲ್ಲಿ ಇದೊಂದು ಗುರುತಿಸಲೇಬೇಕಾದ ಸಂಗತಿಯಾಗಿದೆ. ಇಲ್ಲಿ ಹೆಚ್ಚು ನಮನೀಯ(ನಮ್ಯ)ವಾಗಿರುವ ಮತ್ತು ಕಠಿಣ ಪರಿಶ್ರಮದ ಮೂಲಕವೇ ಸಾಧಿಸಿಕೊಂಡಿರುವ ವಿದ್ವತ್ಪೂರ್ಣತೆ, ಇದಕ್ಕಿಂತ ಹೆಚ್ಚು ಪ್ರಮುಖವಾಗಿರುವ **'ಮೂಲ ಚಿಂತನೆ'**ಯ ಮೂಲಕವೇ, ಈ ಭಾರತೀಯ ಮನಸ್ಸನ್ನು, ಈಗ ಅದು ಸಿಲುಕಿಕೊಂಡಿರುವ ಈ ದ್ವಿತೀಯ ದರ್ಜೆಯ ಪ್ರಾದೇಶಿಕತೆಯ ಪ್ರಾಂತಿಯತೆಯ ಅಸ್ಮಿತೆಯಲ್ಲಿ ಮತ್ತು ನಿಷ್ಫಲತೆಯಲ್ಲಿಯೇ ರೂಪುಗೊಳ್ಳುತ್ತಿರುವ ಸಾಮಾನ್ಯ ಸಂಗತಿಗಳ ಪುನರಾವರ್ತನೆಯಲ್ಲಿಯೇ ಇರುವ, ಅದೇ ಬಾಧನಾಯುಕ್ತವಾಗಿರುವ ಪಥದಲ್ಲಿ ಸಿಲುಕಿ ಸಾಗುತ್ತಿರುವ, ಮತ್ತು ದೋಷಪೂರಿತವಾದ ಕಲಿಕೆಯಲ್ಲಿಯೇ ಇರುವ ಶಾಲೆ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣದಿಂದಾಗಿ ಇದು ಈಗಾಗಲೇ ಆಘಾತಗೊಂಡಿರುವದನ್ನು ಗಮನಿಸಬೇಕಾಗಿದೆ. ಹೀಗಾಗಿ ಮೊದಲು ಈ ಆಘಾತಪೂರ್ಣ ಸ್ಥಿತಿಯಿಂದ ಮುಕ್ತವಾಗಬೇಕಾಗಿದೆ. ಈ ದಿಸೆಯಲ್ಲಿ, ಅತಿ ಮಹತ್ವದ ಕೊಡುಗೆಗಳನ್ನು ನೀಡುವ ಸಲುವಾಗಿ, ಈ ಜಗತ್ತನ್ನು ಸುಸಜ್ಜಿತಗೊಳಿಸಿಕೊಂಡು, ಕಾರ್ಯರೂಪಕ್ಕೆ ತೊಡಗಿಸಿದಲ್ಲಿ, ಇದೊಂದು ವಿಶ್ವದ ಜ್ಞಾನ ಭಂಡಾರಕ್ಕೆ ಅಪೂರ್ವ ಕೊಡುಗೆಗಳ ಮೂಲಕ ಅದನ್ನು ವಿಸ್ತಾರಗೊಳಿಸಲು ಸಾಧ್ಯವಾಗುತ್ತದೆ.

ಈ ದೇಶದಲ್ಲಿ ಗಮನಾರ್ಹವಾಗಿರುವ ವಿಸ್ತರಣೆಗಳು – ಇಂಗ್ಲೀಷ ಮತ್ತು ಸ್ಥಳೀಯ ಭಾಷೆಗಳಲ್ಲಿಯೂ ಘಟಿಸಿವೆ. ಅದರಲ್ಲೂ ಆಯಾ ಪ್ರದೇಶದಲ್ಲಿ ನಿರೂಪಿತಗೊಳ್ಳುತ್ತಿರುವ ಸಾಮಾನ್ಯವಾಗಿ ನಿಯತಕಾಲಿಕ ಸಾಹಿತ್ಯವು ಸಮೃದ್ಧವಾಗಿಯೇ ರೂಪುಗೊಂಡಿದೆ. ಇದು ಜನಪ್ರಿಯ ಮನಸ್ಸುಗಳಿಗಾಗಿ

ವಿರಚಿತಗೊಂಡು – ಜ್ಞಾನದ ತುಂಡು–ತುಣುಕುಗಳಾಗಿಸಿ, ಅತ್ಯಂತ ಸುಗಮವೆನ್ನುವಂತೆಯೇ ಇರುವ ಮಾಹಿತಿಗಳನ್ನು ಹೊಂದಿ ಸಿದ್ಧಗೊಂಡು ಸದಾ ಒದಗಿಸಲ್ಪಟ್ಟಿವೆ. ಆದರೆ ಇಲ್ಲಿ ಅತ್ಯಂತ ಮುಖ್ಯವಾಗಿ ಮೌಲ್ಯಪೂರ್ಣವಾಗಿರುವ ಅಭಿಪ್ರಾಯಗಳನ್ನು ಎಲ್ಲ ವಿಷಯಗಳ ಕುರಿತಾಗಿ ಯಾವಾಗಲೂ ಒದಗಿಸುತ್ತಿಲ್ಲ. ಆದರೆ ಯುರೋಪ ದೇಶಗಳಲ್ಲಿ ಅಧ್ಯಯನದ ಮೂಲಕ ಗಂಭೀರ – (ಗಾಢ ಅಧ್ಯಯನದ ಮೂಲಕ) ಸಾಹಿತ್ಯ/ಪ್ರಕಟಣೆಗಳು ಸೃಷ್ಟಿಗೊಳ್ಳುತ್ತಿರುವ ಕುರಿತು, ಇದೊಂದು ಯುರೋಪಿನ ಸಾಮಾನ್ಯ ಸಂಗತಿಯಾಗಿದ್ದರೂ, ಈ ವಿಷಯವು ಇಲ್ಲಿ (ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ) ಯಾವುದೇ ಸ್ಪಂದನವನ್ನೂ ಹೊಂದಿಲ್ಲ. ಯುರೋಪದಲ್ಲಿ ಪ್ರಕಟಗೊಳ್ಳುತ್ತಿರುವ ಈ ರೀತಿಯ ಗಂಭೀರ ಸಾಹಿತ್ಯಕ್ಕೆ ಓದುಗರ ಸಂಖ್ಯೆ ಕಡಿಮೆ ಇದ್ದರೂ ಸಹಿತ, ಈ ಓದುಗರಿಗೆ ಸ್ಪಂದಗೊಳ್ಳುವಂತೆ ಇವೆ. ಆ ಸೀಮಿತ ಹಂತದಲ್ಲಿಯೂ ಈ ರೀತಿಯ ಮೂಲ ಚಿಂತನಾ ವಿಧಾನಗಳ ಆಯಾಮಗಳನ್ನು ಮತ್ತು ಹೆಚ್ಚು ವಿಸ್ತೃತವಾಗಿರುವ ಜ್ಞಾನದ ಮೂಲಕ, ಮಾನವನ ಪ್ರಶ್ನೆಗಳಿಗೆ ಸೂಕ್ತವಾಗುವಂತೆಯೇ, ಪ್ರತಿಯೊಂದು ವಿಭಾಗದಲ್ಲಿಯೂ ಅವುಗಳನ್ನು ಜನಪ್ರಿಯಗೊಳಿಸಲು ಅವರು ಖಂಡಿತವಾಗಿ ಯಶಸ್ಸನ್ನು ಗಳಿಸಿದ್ದಾರೆ.

**ಮತ ಮತ್ತು ತತ್ತ್ವ ಶಾಸ್ತ್ರ**ದ ವಿಷಯಗಳಾಚೆ ಕೆಲವೊಂದು ಪ್ರಯತ್ನಗಳು ನಡೆದಿದ್ದರೂ, ಅವು ಸಾಮಾನ್ಯವಾಗಿಯೇ ಪರ್ಯಾಪ್ತ ಬೆಂಬಲವನ್ನು ಅಪೇಕ್ಷಿಸಿಕೊಂಡೇ ತಮ್ಮ ಮೊದಲ ಹೆಜ್ಜೆಯನ್ನು ಇಟ್ಟು ಪ್ರತಿಷ್ಠಾಪನೆಗೊಂಡಿದ್ದವು. ಈ ವಿಷಯಗಳು ಇಲ್ಲಿ ಸ್ಥಾಪನೆಗೊಳ್ಳಲಿಲ್ಲ, ಆದರೆ ಬೇರೆ ಎಲ್ಲಿಯೋ – ಆಸಕ್ತಿಪೂರ್ಣ ಓದುಗರ ವಲಯದ ಮಧ್ಯದಲ್ಲಿ, – ಇವು ಸ್ಥಾಪಿಸಲ್ಪಟ್ಟವು. ಇದೀಗ, ಇಷ್ಟೆಲ್ಲಾ ಇದ್ದಾಗ್ಯೂ ಸಹಿತ, ಇಲ್ಲಿಯೂ ಸಹಿತ ಆಸಕ್ತಿಯನ್ನು ಹೊಂದಿರುವ, ಸಂಸ್ಕೃತದ ವಿದ್ವತ್ ಹೊಂದಿರುವ, ಅರ್ಹ, ಸುಸಂಸ್ಕೃತ ಮನಸ್ಸುಗಳು ಸಾಕಷ್ಟು ಪ್ರಮಾಣದಲ್ಲಿ ಇವೆ ಮತ್ತು ಭಾರತೀಯ ಪ್ರಾಚೀನತೆಯ ಕುರಿತು ಸಂಶೋಧನೆ ನಡೆಸಲು, ಇದಕ್ಕೆ ಸಂಪೂರ್ಣ ಬೆಂಬಲವನ್ನು ಖಚಿತಗೊಳಿಸುವ ಮತ್ತು ಈ 'ನೂತನ ತ್ರೈಮಾಸಿಕ'ದ ಉಪಯುಕ್ತತೆಯನ್ನು ಅಧಿಕಗೊಳಿಸುವ ಸಲುವಾಗಿ ಈ ಮನಸ್ಸುಗಳು ಇವೆ ಎನ್ನುವದು ಒಂದು ವಿಶ್ವಾಸವಾಗಿದೆ.

ಇದೀಗ ನನ್ನೆದುರಿಗೆ ಇರುವದು ಈ ತ್ರೈಮಾಸಿಕದ ಎರರಡನೇ ಸಂಚಿಕೆ (ಅಕ್ಟೋಬರ ತಿಂಗಳಲ್ಲಿ ಪ್ರಕಟಗೊಂಡಿದ್ದು). ಇಲ್ಲಿರುವ ಪಕ್ವ ಸಂಪಾದನ ಮತ್ತು

ಅದರ ಮೌಲ್ಯ ಹಾಗು ಇಲ್ಲಿ ಮುದ್ರಿತಗೊಂಡಿರುವ ವಿಷಯಗಳ ಅಂತರಾಳಗಳು, ಬರಲಿರುವ ಭವಿಷ್ಯಕ್ಕೆ ಸೂಕ್ತವಾದ ಭರವಸೆಯನ್ನು ಒದಗಿಸುತ್ತಿವೆ. ಅದರಲ್ಲೂ ಇಲ್ಲಿ ಎರಡು ಮಹತ್ವಪೂರ್ಣವಾಗಿರುವ ವಿದ್ವತ್ಪೂರ್ಣ ಲೇಖನಗಳಿವೆ. ಅವುಗಳಲ್ಲಿ ಒಂದು **ಶ್ರೀ ತಿಳಕ (ಬಾಲ ಗಂಗಾಧರ ತಿಳಕ)ರ ಸಾಂಖ್ಯ ಕಾರಿಕೆಯಲ್ಲಿ ಲುಪ್ತವಾಗಿರುವ ಒಂದು ಶ್ಲೋಕ** (ಎ ಮಿಸ್ಸಿಂಗ್ ವರ್ಸ ಇನ್ ದಿ ಸಾಂಖ್ಯ ಕಾರಿಕಾ), ಇನ್ನೊಂದು ಫರ್ಗ್ಯುಸನ್ ಕಾಲೇಜಿನ **ಪ್ರೊ. ಆರ್.ಡಿ. ರಾನಡೆಯವರ ಗ್ರೀಕ್ ಮತ್ತು ಸಂಸ್ಕೃತ; ಒಂದು ತುಲನಾತ್ಮಕ ಅಧ್ಯಯನ** (ಗ್ರೀಕ್ ಮತ್ತು ಸಂಸ್ಕೃತ; ಎ ಕಂಪ್ಯಾರೇಟಿವ್ ಸ್ಟಡಿ), ಇವುಗಳನ್ನು ಹೊರತುಪಡಿಸಿದರೆ, ಇನ್ನುಳಿದಂತೆ ಇದೇ ಆಸಕ್ತಿಪೂರ್ಣವಾಗಿರುವ ಮತ್ತು ಮೌಲ್ಯವನ್ನು ಒಳಗೊಂಡಿರುವ ಲೇಖನಗಳು ಇಲ್ಲವೆನ್ನಬಹುದು. ಇಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಸಲ್ಲಿಸಿರುವ ಎಲ್ಲ ಲೇಖನಗಳನ್ನೂ ಗಮನಿಸಿದಾಗ, ಒಂದೇ ಒಂದು ಲೇಖನವನ್ನು ಹೊರತು ಪಡಿಸಿ, ಎಲ್ಲವೂ ಮಹಾರಾಷ್ಟ್ರ ಮತ್ತು ಮದ್ರಾಸ ಪ್ರಾಂತಗಳಿಂದಲೇ ಬಂದಿವೆ. ಪ್ರಾಯಃ ಉತ್ತರ ಭಾರತದ ಸಂಸ್ಕೃತ ವಿದ್ವಾಂಸರ ಸಹಕಾರವನ್ನು ಪಡೆದುಕೊಳ್ಳುವದರ ಸಲುವಾಗಿ, ತನ್ಮೂಲಕ ಅಖಿಲ ಭಾರತ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನಾ ರಂಗದ ಅಂಗವಾಗಿಯೇ ಈ ಸಮೀಕ್ಷೆಯು ಇರುವದೆಂದು ಈ ಪತ್ರಿಕೆಯ ಸಂಪಾದಕರ ಆಶಯವಿದ್ದಂತೆ ಕಾಣುತ್ತಿದೆ.

ಶ್ರೀ ತಿಳಕರ ಲೇಖನವು, ಮಹಾನ್ ವಿದ್ವತ್ಪೂರ್ಣತೆಯಿಂದ ಮತ್ತು ಅಷ್ಟೇ ಪ್ರಖರತೆಯಲ್ಲಿ ಸಮರ್ಥನೀಯವಾಗಿಯೇ ಪರಿಪೂರ್ಣತೆಯಿಂದ, ಅದು ಮಹತ್ತಾದ ವಿಷಯವೇ ಆಗಿರಲಿ ಅಥವಾ ಲಘುವಾದ ವಿಷಯವೇ ಆಗಿರಲಿ, ಒಟ್ಟನಲ್ಲಿ ದಟ್ಟೈಸಿಕೊಂಡಿರುವ ಋಗ್ವೇದದ ನಿಗೂಢ ಉಲ್ಲೇಖಗಳ ಸಾಂದ್ರತೆಯಲ್ಲಿಯೇ, **‘ಆರ್ಯರ ಮೂಲತಾಣ’** ಇದೇ ಆಗಿದೆ ಎನ್ನುವ ಅವರ ಅಭಿಲಾಷೆ ಇರುವಂತೆ ಉಲ್ಲೇಖಿಸುತ್ತಾರೆ, ಅಥವಾ ಅವರ ಅಪರೂಪದ ನಿಗಮನ ವಿಧಾನದಲ್ಲಿ ಈಗ ಲುಪ್ತವಾಗಿರುವ **‘ಕಾರಿಕೆ’ಯ ಕೊನೆಯ ಶ್ಲೋಕವನ್ನು ಪುನರ್–ಸ್ಥಾಪಿಸಲು** ಪ್ರಯತ್ನಿಸುತ್ತಿದ್ದಾರೆ. ಅವರು ಪುನರ್–ಸ್ಥಾಪಿಸಲು ಯತ್ನಿಸುತ್ತಿರುವ ವಿಷಯ ಮೇಲ್ನೋಟಕ್ಕೆ ಅತಿ ಸಣ್ಣ ವಿಷಯದಂತೆ ಗೋಚರಿಸುತ್ತಿದ್ದರೂ, ಅದು ನಿಜವಾಗಿಯೂ ಅತ್ಯಂತ ಪ್ರಮುಖವಾಗಿರುವ ಅರ್ಥ ವ್ಯಾಪ್ತಿಯನ್ನು ಹೊಂದಿ, ಪರಿಗಣಿಸಲೇಬೇಕಾದ ಹಂತದಲ್ಲಿದೆ. ಇದಕ್ಕಾಗಿ ಅವರು, ಇಲ್ಲಿಯವರೆಗೂ ವಿಶ್ವಾಸದಿಂದಲೇ ಸಮ್ಮತಿಸಲ್ಪಡುತ್ತಿರುವ ಮತ್ತು ಅಧ್ಯಯನದಲ್ಲಿರುವ **‘ಈಶ್ವರಕೃಷ್ಣ’ನ ಸಾಂಖ್ಯಕಾರಿಕೆ’**ಗಳಲ್ಲಿ 70 ಶ್ಲೋಕಗಳಿವೆ ಎಂದಿದ್ದರೂ, ಅವುಗಳಲ್ಲಿ ಕೊನೆಯ

ಮೂರು ಶ್ಲೋಕಗಳು ಸೈದ್ಧಾಂತಿಕ(ಸಿದ್ಧಾಂತಾತ್ಮಿಕ)ವಾಗಿವೆ ಎಂದು, ಈ ಮೂರೂ ಶ್ಲೋಕಗಳನ್ನು ಬಿಟ್ಟರೂ ಸಹಿತ, ಈಗಲೂ ನಮ್ಮ ದೇಶದಲ್ಲಿ ಮತ್ತು ಚೀನಾದಲ್ಲಿ ಇರುವ ಹಾಗೆ ಈ ಸಾಂಖ್ಯ ಕಾರಿಕೆಯಲ್ಲಿ ಕೇವಲ 69 ಶ್ಲೋಕಗಳಿವೆ. ಇದೇ ಸಮಯಕ್ಕೆ ಅವರು ತೋರುತ್ತಿರುವ ಇನ್ನೊಂದು ಸಂಗತಿ ಎಂದರೆ, **ಗೌಡಪಾದ ಭಾಷ್ಯ**ದಲ್ಲಿ ಮತ್ತು **ಚೀನಾ ಭಾಷೆಯ ಭಾಷ್ಯ**ದಲ್ಲಿ, ಈ ಜಗತ್ತಿಗೆ ಮೂಲ ಕಾರಣಗಳಾಗಿರುವ ನಾಲ್ಕು ಸಂಭವನೀಯ ಸೂಕ್ಷ್ಮ ಕಾರಣಗಳ (ಈಶ್ವರ, ಪುರುಷ, ಕಾಲ ಮತ್ತು ಸ್ವಭಾವ/ಪ್ರಕೃತಿ) ಕುರಿತು 'ನಿರಾಕಣೆಯ ನಿರ್ಣಯ'ವನ್ನೇ ಹೇಳುವ ಸಾಂಖ್ಯ–ಭಾಷ್ಯದ ಸಾಲುಗಳಿವೆ. ಈ ತರ್ಕದ ಹಿನ್ನೆಲೆಯಲ್ಲಿ ಈ ನಿರಾಕರಣೆಯನ್ನು ಒಪ್ಪುವಂತಿದ್ದರೂ ಸಹಿತ, ಮುಖ್ಯವಾಗಿ ಇದು ಮೂಲ ಗ್ರಂಥದಲ್ಲಿ ಲಭ್ಯವಿಲ್ಲ. ಭಾಷ್ಯದ ಸ್ವರೂಪದ ಪಥದಲ್ಲಿ, ಈ ರೀತಿಯಲ್ಲಿ ಲುಪ್ತವಾಗಿರುವ ಶ್ಲೋಕದ ಭಾಷೆಯನ್ನು ಹಾಗು ಅದರ ಅಂತರಾರ್ಥದ ಸಂವೇದನೆಯನ್ನು ಪುನರ್–ಪ್ರತಿಸ್ಥಾಪಿಸಲು ಅಭಿಲಾಷೆ ಹೊಂದಿದ್ದಾರೆ.

ಇಲ್ಲಿ ನನಗೆ ತೋರುತ್ತಿರುವದೇನೆಂದರೆ, ಶ್ರೀ ತಿಳಕರು ಆ ಲುಪ್ತವಾಗಿದ್ದ ಶ್ಲೋಕವನ್ನೂ ತೋರಿಸಿದ್ದಾರೆ ಅಲ್ಲದೇ ಅದರ ಸಾರದ ಕುರಿತೂ – ಎರಡೂ ವಿಷಯಗಳ ಮೂಲಕ ಅದನ್ನು ಪ್ರತಿಸ್ಥಾಪಿಸಿದ್ದಾರೆ. ಆದರೆ ಇಲ್ಲಿ ಆಸಕ್ತಿಪೂರ್ಣವಾಗಿರುವ ಸಂಗತಿ ಎಂದರೆ, ಈ ಶ್ಲೋಕವು ಲುಪ್ತವಾಗಿದ್ದುದರ ಕುರಿತು ಅವರು ರೂಪಿಸಿರುವ "ಕಾರಣದ ವಿವರಗಳು". ಅವರ ಅಭಿಪ್ರಾಯದಲ್ಲಿಯೇ, ಇದೊಂದು ಆಕಸ್ಮಿಕವಾಗಿ ಘಟಿಸಿರುವದಲ್ಲ, **ವಿಜ್ಞಾನ ಭಿಕ್ಷು** ಮತ್ತು ಇತರ ಚಿಂತಕರು(ವಿಶ್ಲೇಷಕರು) ಸಾಂಖ್ಯ ತತ್ತ್ವ ಶಾಸ್ತ್ರವನ್ನು ವೇದಾಂತದ ದೃಷ್ಟಿಕೋನದಲ್ಲಿ(ಆಯಾಮದಲ್ಲಿ) ಪುನರ್–ರೂಪಿಸುವ ಹಂತದಲ್ಲಿ ಉದ್ದೇಶಪೂರ್ವಕವಾಗಿಯೇ ಅದುಮಿಡಲಾಗಿದೆ. ಒಂದು ವೇಳೆ ಹೀಗೆ ನಡೆದಿರುವದೇ ಆಗಿದ್ದಲ್ಲಿ, ಈ ವಿಷಯವಂತೂ ಭಾರತದ ತತ್ತ್ವ ಶಾಸ್ತ್ರೀಯ ಚಿಂತನಗಳ ಇತಿಹಾಸದ ಕುರಿತು ಒಂದು **ಆಸಕ್ತಿಪೂರ್ಣವಾಗಿರುವ ಬೆಳಕನ್ನೇ ಬೀರುತ್ತಿದೆ.**

ಇದೇ ಮಾದರಿಯಲ್ಲಿಯೇ ಸಾಮಾನ್ಯ ಪಥದಲ್ಲಿ, ವಿಕಾಸಪೂರ್ಣ ಪ್ರಗತಿ ಪಥವನ್ನು ಅನುಸರಿಸಿಕೊಂಡು ಬಹುತೇಕವಾಗಿ ಅಪರೋಕ್ಷವಾಗಿಯೇ ಉದಿತವಾದ ಒಂದು ಆಸಕ್ತಿದಾಯಕ ಹಾಗೂ ತುಂಬ ಸಾವಧಾನಪೂರ್ವಕವಾಗಿ ಸುಸಂಬದ್ಧ ತರ್ಕಪೂರ್ಣತೆಯಲ್ಲಿ ಇರುವ ಲೇಖನವೊಂದನ್ನು ಇಲ್ಲಿ ಶ್ರೀ ವೈ. ಸುಬ್ಬಾರಾವ್

ಬರೆದಿದ್ದಾರೆ. ಇಲ್ಲಿ **'ಶಂಕರಾಚಾರ್ಯರ ತತ್ತ್ವ ಜ್ಞಾನದ ಮೂಲವನ್ನೇ" ಶ್ರೀ ಸುಬ್ಬಾರಾವ್ ಪ್ರಶ್ನಿಸುತ್ತಿದ್ದಾರೆ.** ಇಲ್ಲಿ ಅವರು ತಮ್ಮ ಮಂಡನೆಯಲ್ಲಿ ಅಭಿಪ್ರಾಯಪಡುತ್ತಿರುವದೇನೆಂದರೆ, ಶಂಕರರಿಂದಲೇ ಉದಿತಗೊಂಡಿದೆ ಎನ್ನುವ 'ಶ್ರೀ ಶಂಕರರ ತತ್ತ್ವ ಜ್ಞಾನವು', ಭಾರತೀಯ ಚಿಂತನಾ ಪಥದಲ್ಲಿ ನವನವೀನವೇನೂ ಅಲ್ಲ; ಆದರೆ ಇದೊಂದು ಕೇವಲ 'ಪುನರ್–ನಿರೂಪಣೆಗೊಂಡ' ಚಿಂತನಾ ಸ್ವರೂಪವಾಗಿದೆ, ಅಂದರೆ ಪ್ರಾಚೀನ ಕಾಲದಿಂದಲೂ ಇದ್ದ ವೇದಾಂತದ–ಚಿಂತನಾ ಧಾರೆಯೊಂದನ್ನು ಅತ್ಯಂತ ಸುಸಂಬದ್ಧವಾಗಿ, ಸಮರ್ಥಶೀಲವಾಗಿ ಪುನರ್–ಪ್ರತಿಷ್ಠಾಪಿಸಿದ್ದಾರೆ. ಖಚಿತವಾಗಿಯೂ, ಶಂಕರರು ತಮ್ಮದೇ ಅಸ್ಮಿತೆಯ ಚಿಂತನಾಪೂರ್ಣ ಪಥವೊಂದನ್ನು ತಮ್ಮ ಅಪ್ರತಿಮ ಬೌದ್ಧಿಕ ಸ್ವರೂಪದ ಸಹಕಾರದಿಂದ ಒಂದು ನವನವೀನ ತತ್ತ್ವ ಶಾಸ್ತ್ರವೊಂದನ್ನು ಆನ್ವೇಷಿಸಿಲ್ಲ; ಅವರೇ ವಿಶ್ವಾಸಪೂರ್ಣತೆಯನ್ನು ಹೊಂದಿರುವ ಹಾಗೆ, ವೇದಾಂತದ ಮೂಲ ಗ್ರಂಥಗಳ ತತ್ತ್ವ ಶಾಸ್ತ್ರೀಯ ಚಿಂತನಾ ಧಾರೆಗಳ ಧರ್ಮಾನುಶಾಸನಗಳ (ವಿಧಿ–ವಿಧಾನಗಳ) ವಿರುದ್ಧವಾಗಿ ಘಟಿಸುತ್ತಿರುವ ದಾಳಿಗಳನ್ನು ಸಮರ್ಥವಾಗಿ ಎದುರಿಸಲು ಮತ್ತು ಅತ್ಯುತ್ತಮ ಪರಂಪರೆಯೊಂದರ ಮೂಲಕ ರಕ್ಷಿಸುವ ಆಶಯದಲ್ಲಿದೆ. ಯಾವುದೇ ಶ್ರೇಷ್ಠ ಚಿಂತಕನೂ ನಿಜವಾಗಿಯೂ ಒಂದು ನವೀನ ಪಂಥವನ್ನು ತನ್ನದೇ ಸ್ವಯಂ–ಮೇಧಾಶಕ್ತಿಯಿಂದ ಉದಿತಗೊಳಿಸುವದಿಲ್ಲ. ಇಲ್ಲಿ ಅವನು ರೂಪಿಸಬಹುದಾಗಿರುವದೇನೆಂದರೆ, ವಾಸ್ತವದಲ್ಲಿ ತನಗೆ ಲಭ್ಯವಿರುವ ಗತಕಾಲದಲ್ಲಿ ಘಟಿಸಿರುವ ಲೌಕಿಕ–ಭೌತಿಕ ವಸ್ತು–ವಿಷಯಗಳನ್ನು, ಅವುಗಳಿಂದ ರೂಪುಗೊಂಡ ಚಿಂತನಾ ಪಥದ ಇತಿಹಾಸವನ್ನು, ಅವುಗಳಲ್ಲಿ ಆಯ್ಕೆ ಮಾಡಿಕೊಳ್ಳುವದನ್ನು, ಸ್ವೀಕರಿಸುವದನ್ನು, ತಿರಸ್ಕರಿಸುವದನ್ನು, ಮತ್ತು ಜ್ಞಾನದ ಹೊಸ ಹೊಳವುಗಳನ್ನು ಆ ಪ್ರಾಚೀನ ವಿಚಾರಗಳಿಗೆ ರೂಪಿಸಿ ಮಂಡಿಸಲಿಕ್ಕೆ, ಆ ಮೂಲಕ ಇಲ್ಲಿಯವರೆಗೂ ಸುಪ್ತವಾಗಿದ್ದ ಸಲಹೆಗಳನ್ನು ರೂಪಿಸುವ ಮೂಲಕ, ಇಲ್ಲಿಯವರೆಗೂ ಅಷ್ಟೊಂದು ಮಹತ್ವದ ಸ್ಥಾನದಲ್ಲಿ ಇರದೇ ಇದ್ದ ಸಂಗತಿಗಳನ್ನು ಮತ್ತೆ ಮುಂಚೂಣಿಗೆ ತರುವ ಮೂಲಕ, ಅಥವಾ ಪ್ರಖರತೆಯಲ್ಲಿ ಮತ್ತು ನಿಶ್ಚಿತ ಸ್ವರೂಪದಲ್ಲಿ ಪರಿಗಣಿಸುತ್ತ, ಆಯಾ ಚಿಂತನಕ್ಕೆ ಹೊಸ ರೂಪವನ್ನು ಕೊಡುತ್ತ, ಪ್ರಾಚೀನ ಶಬ್ದಾವಳಿಗಳಿಗೆ ಮತ್ತೆ ತೇಜಾಪು ಕೊಡುತ್ತ ಅವುಗಳು ಪ್ರಕಾಶಮಾನವಾಗಿ ಕಾಂತಿಮಯಗೊಳ್ಳುವಂತೆ ಮಾಡುವ, ಮತ್ತು ಈ ಮೊದಲು ಇದ್ದ ಎಲ್ಲವನ್ನೂ ಅಲ್ಲದಿದ್ದರೂ ಅಥವಾ ತಪ್ಪು ಅಭಿಪ್ರಾಯದಲ್ಲಿ ರೂಪಿತಗೊಂಡಿದ್ದವುಗಳನ್ನು ಪರಿಷ್ಕರಿಸುವ ಮೂಲಕ, ನವೀನ–ಸ್ವರೂಪದಲ್ಲಿ

ಇರುವಂತೆ ಪ್ರಸ್ತುತಿಗೊಳಿಸುತ್ತಾನೆ. ಇದೆಲ್ಲವನ್ನೂ ಕೈಗೊಳ್ಳುವ ಪಥವನ್ನು ಅವನೇ ಸೃಷ್ಟಿಸುತ್ತಾನೆ. ಇಲ್ಲಿ ಅವರ ತತ್ತ್ವ ಜ್ಞಾನವು, ಹೊಸದಾಗಿರುವ ಯಾವುದೇ ನವೀನ ಲೌಕಿಕಾಂಶಗಳಲ್ಲಾಗಲಿ/ಭೌತಿಕಾಂಶಗಳಲ್ಲಾಗಲಿ ಹೊಸದೇನೂ ಅಲ್ಲದಿದ್ದರೂ, ಒಟ್ಟಂದದ ಪರಿಣಾಮದಲ್ಲಿ ಮಾತ್ರ ಹುಟ್ಟು ಹಾಕಿದ ಮತ್ತು ಮತ್ತೂ ಕೆಲವೊಂದು ವಿಷಯಗಳಲ್ಲಿ ತೇಜಪೂರ್ಣತ್ವದ ಪ್ರಕಾಶವನ್ನು ಹುಟ್ಟು ಹಾಕುತ್ತಿದೆ. ಆ ಮೂಲಕ ಚಿಂತನಾಶೀಲ ಮನಸ್ಸಿಗೆ ತಿಳಿಸುತ್ತದೆ. ಇಲ್ಲಿರುವ ಮುಖ್ಯ ಪ್ರಶ್ನೆ ಎಂದರೆ, ಹಾಗಾದರೆ ಈ ವಿಚಾರ ಧಾರೆಯಲ್ಲಿ ನೋಡಿದರೆ, ಶಂಕರರ ಪಂಥವು ಹೊಸದೇನೂ ಅಲ್ಲ ಮತ್ತು ಲಭ್ಯವಿರುವ ಈ ಹಿಂದಿನ ವಸ್ತು–ವಿಷಯಗಳೂ ಸಹಿತ ಈಗಲೂ ಈ ಪ್ರಶ್ನೆಯನ್ನು ನಿರ್ಧರಿಸಲು ಅಸಮರ್ಥವಾಗಿಯೇ ಪ್ರಚಲಿತದಲ್ಲಿವೆ. ಹೀಗಾಗಿ, ಇಲ್ಲಿ ನಾನು ಯೋಚಿಸುವದೇನೆಂದರೆ, ಅದೂ ಕಡ್ಡಾಯವಾಗಿ, ಈ ವಿಷಯವನ್ನು ಸಂದರ್ಭೋಚಿತವಾಗಿರುವ ಸಕಾರಾತ್ಮಕವಾಗಿಯೇ ಉತ್ತರಿಸಬೇಕಿದೆ. **ಅದ್ವೈತ–ವಾದಿಗಳು ಮೊದಲೂ ನಿಸ್ಸಂದೇಹವಾಗಿಯೂ ಅಸ್ತಿತ್ವದಲ್ಲಿ ಇದ್ದರು. ಆದರೆ ಇದಕ್ಕೊಂದು ಸುಸಂಬದ್ಧ ಸ್ವರೂಪವನ್ನು ಶಂಕರರು ರೂಪಿಸಿದ್ದಾರೆ ಎನ್ನುವದು ಸುಸ್ಪಷ್ಟವಾಗಿರುವ ವಿಷಯವಾಗಿದೆ.** ಸುಸಂಬದ್ಧವಾಗಿರುವ ಯೋಚನಾ/ಚಿಂತನೆಯಲ್ಲಿ ಮತ್ತು ಪ್ರಖರಾತಿ ಪ್ರಖರ ಶಕ್ತಿ ಸಂಪನ್ನತೆಯಿಂದ ಕೂಡಿದ ತತ್ತ್ವ ಜ್ಞಾನವೊಂದನ್ನು ಒದಗಿಸುವ ಮೂಲಕ ಶಂಕರರು ಭಾರತೀಯ ತತ್ತ್ವ ಜ್ಞಾನಿಗಳಲ್ಲಿ (ತತ್ತ್ವ ಮೀಮಾಂಸಕರಲ್ಲಿಯೇ /ತತ್ತ್ವ ಶಾಸ್ತ್ರಜ್ಞರಲ್ಲಿಯೇ) ಅಗ್ರಗಣ್ಯವಾದ ಸ್ಥಾನದಲ್ಲಿ ಇದ್ದಾರೆ.

ಶ್ರೀ ಸುಬ್ಬಾರಾವ್ ಅವರು ಸಮ್ಮತಿಸುತ್ತಿರುವದೇನೆಂದರೆ, 'ಪರಿಪೂರ್ಣವಾದ ಅದ್ವೈತ'ವನ್ನು ಸ್ಥಾಪಿಸುವದು ಸಾಧ್ಯವೇ ಇಲ್ಲ ಎನ್ನುವದನ್ನು ಒಪ್ಪುತ್ತಾರೆ. ವೇದಗಳ, ಉಪನಿಷತ್ತುಗಳ, ಬ್ರಹ್ಮ ಸೂತ್ರದ ಮತ್ತು ಅತ್ಯಂತ ಅಲ್ಪ ಪ್ರಮಾಣದ ಮಾಯಾವಾದ ಹಾಗೂ ಗೀತೆಯನ್ನು ಹೊರತುಪಡಿಸಿ ಈ ಅದ್ವೈತದ ರೂಪಣೆ ಸಾಧ್ಯವಿಲ್ಲ. ಅದರಲ್ಲೂ ಶ್ರೇಷ್ಠ ಚಿಂತಕರೆಲ್ಲರೂ ನಮಗೆ ಲಭ್ಯಗೊಳಿಸಿರುವ ಈ ಅಭಿವ್ಯಕ್ತಿಗಳು ಕೇವಲ ಆ ತತ್ತ್ವಗಳನ್ನು ಅವರು ತಮ್ಮ ಹೇಳಿಕೆಗಳನ್ನು ಕೇವಲ ಗೊಂದಲದಲ್ಲಿ ಅಥವಾ ಮೂಲ ತತ್ತ್ವಗಳನ್ನು ಸುಸ್ಪಷ್ಟವಾಗಿ ಅರಿತುಕೊಂಡಾಗಲೀ ಗ್ರಹಿಸಿಕೊಂಡಿರುವ ಹಂತದಲ್ಲಿ ಮಾತ್ರವೇ ಒದಗಿಸಿಲ್ಲ. ಏಕೆಂದರೆ ಇಲ್ಲಿ ಸಂಪೂರ್ಣ ಬೇರೆಯದೇ ಆದ ವಿಧಾನವೊಂದನ್ನು ಅವರು ಹೊಂದಿಯೇ ತಮ್ಮ ಅಭಿವ್ಯಕ್ತಿಗಳನ್ನು ರೂಪಿಸಿದ್ದಾರೆ. ಭಾರತವೂ ತನ್ನದೇ ಆದ 'ಅಂತರ್ಬೋಧೆ ಮತ್ತು ಸಮನ್ವಯಪೂರ್ಣ ವಿನ್ಯಾಸದಲ್ಲಿಯೇ ತನ್ನ ಚಿಂತನಾ ಸ್ವರೂಪಗಳನ್ನು' ಹೊಂದಿದ್ದು,

ಅದು ಕೇವಲ ತಾರ್ಕಿಕ ಭೇದದಲ್ಲಾಗಲೀ ಮತ್ತು ಮೌಖಿಕ ವಿರೋಧಗಳಲ್ಲಾಗಲಿ ಅವುಗಳನ್ನು ರೂಪಿಸಿಕೊಂಡಿಲ್ಲ. ಆದರೆ ಅವುಗಳ ರೂಪಣೆಯು ಆಧ್ಯಾತ್ಮಿಕ ಅನುಭ(ಭಾ)ವಗಳ ಮತ್ತು ಕಾಣ್ಕೆಗಳಲ್ಲಿ ಸ್ವರೂಪುಗೊಂಡಿವೆ. ಈ ರೀತಿಯಲ್ಲಿ ಸಮನ್ವಯಗೊಂಡಿರುವ ಮತ್ತು ಅಂತರ್ಬೋಧಾತ್ಮಕವಾಗಿರುವ ತತ್ತ್ವಗಳಲ್ಲಿ ಸತ್ಯದ ಸ್ವರೂಪಗಳನ್ನು ಆಯಾ ವಸ್ತು–ವಿಷಯಗಳ ಸಂದರ್ಭವನ್ನು ಗಮನಿಸಿ, ನಿಗದಿತವಾದ ಸ್ಥಾನವನ್ನೂ ನಿರ್ಧರಿಸಿ, ಸಾಮಾನ್ಯವಾಗಿ ವಿಜ್ಞಾನದ ಅಧ್ಯಯನದಲ್ಲಿ ವಿವಿಧ ನಿಯಮಗಳನ್ನು ಹಾಗೂ ಅವುಗಳ ಸಾಮಾನ್ಯೀಕರಣವನ್ನು ನಿರ್ಧರಿಸಲಾಗುತ್ತಿದೆಯೋ, ಅದೇ ರೀತಿಯಲ್ಲಿ ಇಲ್ಲಿಯೂ ಸುವ್ಯವಸ್ಥಿತ ಸ್ಥಾನವನ್ನು ಹೊಂದುವಂತೆ ಅನುಷ್ಠಾನಿಸಲ್ಪಟ್ಟಿವೆ. ಇಲ್ಲಿ ಪ್ರತಿಯೊಂದೂ ಧನಾತ್ಮಕ ತನ್ನದೇ ಆದ ನೆಲೆಯನ್ನು ಹೊಂದಿದ್ದು ಮತ್ತು ಪ್ರತಿಯೊಂದೂ ಇನ್ನುಳಿದ ಘಟಕಗಳ ಜೊತೆಗೆ ಸೂಕ್ತವಾಗಿರುವ ಸಂಬಂಧವನ್ನು ಹೊಂದಿವೆ. ಈ ವಿನ್ಯಾಸದ ಪರಿಪೂರ್ಣತೆಯನ್ನು ಉಪನಿಷತ್ತುಗಳು ಮತ್ತು ಗೀತೆಯಲ್ಲಿ ಇರುವದನ್ನು ಕಾಣಬಹುದು. ಈ ಕಾರಣಕ್ಕಾಗಿಯೇ, ಈ ಶ್ರೇಷ್ಠ ವಿಚಾರ ಧಾರೆಗಳ ಕುರಿತು ರೂಪಣೆಗೊಳ್ಳುವ ವ್ಯಾಖ್ಯಾನಗಳ ತರ್ಕ ಪ್ರಧಾನತೆಯ ಸಂವಾದ/ವಾದಗಳಲ್ಲಾಗಲಿ ಸರ್ವ ಪ್ರಯತ್ನಗಳೂ ಮತ್ತು ಕಠೋರವಾಗಿಯೇ ತಿರಸ್ಕರಿಸುವ(ಬಹಿಷ್ಕರಿಸುವ)ದನ್ನೇ ಉದ್ದೇಶವನ್ನಾಗಿಸಿಕೊಂಡು ವಿಶ್ಲೇಷಣಾತ್ಮಕವಾಗಿರುವ ಸಂಗತಿಗಳನ್ನೇ ಆದರದಿಂದ ಕಾಣುವ ವಿಶ್ಲೇಷಣಾತ್ಮಕವಾಗಿಯೇ ಚಿಂತನ ನಡೆಸುವ ತತ್ತ್ವ ಮೀಮಾಂಸಕರ ಪ್ರಯತ್ನಗಳು, ವಿದ್ವತ್ಪೂರ್ಣವಾಗಿರುವ ವ್ಯಕ್ತಿಗಳ ಮೂಲಕ ನಡೆದರೂ ಸಹಿತ ವಿಫಲವಾಗುತ್ತವೆ. ಇವರು ಈ ರೀತಿಯ ನವೀನ ಅಭಿವ್ಯಕ್ತಿಗಳ ಕಾರ್ಯಗಳ ಮತ್ತು ಸ್ವರೂಪಗಳ ಸಂವೇದನೆಗಳ(ಭಾವನೆಗಳ) ಕುರಿತೇ ಪ್ರಶ್ನೆ ಎತ್ತುತ್ತಾರೆ. ಆದರೆ ಇಲ್ಲಿ ಮುಖ್ಯವಾಗಿರುವ ವಿಷಯವೆಂದರೆ ಈ ನವೀನ ಅಭಿವ್ಯಕ್ತಿಗಳನ್ನು ನಿರ್ಣಾಯಕ ಹಂತದಲ್ಲಿ ಪರಿಹರಿಸಲು ಸಾಧ್ಯವೇ ಇಲ್ಲ. ಆದರೆ ಇವು ಶಾಶ್ವತವಾಗಿಯೇ ಚರ್ಚೆಗಳನ್ನು ರೂಪಿಸುತ್ತವೆ. ಏಕೆಂದರೆ ಇಲ್ಲಿ ವಿಧಾನವು ತಪ್ಪಿನಿಂದ ಕೂಡಿದ್ದು, ಆದರೆ ಆ ಮೂಲ ಅಭಿವ್ಯಕ್ತಿಗಳು ಮತ್ತು ಕಾರ್ಯಗಳು ಎಂದಿಗೂ ಇಂತಹ ಮುಖಾಮುಖೀ ಸಂವಾದಗಳನ್ನಾಗಲೀ ಅಥವಾ ಕಾರಣವಾಗುವದಾಗಲೀ ಇರುವ ಉದ್ದೇಶವನ್ನು ಹೊಂದಿಲ್ಲ. ಕೇವಲ ಸಮನ್ವಯಪೂರ್ಣ ದೃಷ್ಟಿಕೋನ ಹೊಂದಿರುವ ವಿನ್ಯಾಸ ಮಾತ್ರ "ಸಮನ್ವಯದ ಮತ್ತು ಅಂತರ್ಬೋಧಾತ್ಮಕವಾಗಿರುವ ತತ್ತ್ವ ಜ್ಞಾನದ ವ್ಯಾಖ್ಯೆಗಳ ವಿಧಿ"ಗಳಲ್ಲಿ ಇರುತ್ತವೆ.

ಈ ರೀತಿಯ ವಿಶ್ಲೇಷಣಾತ್ಮಕವಾಗಿರುವ ಪ್ರವೃತ್ತಿಯ ಮೂಲಕ, ಈ ಹಂತ ಹಂತದಲ್ಲಿ ರೂಪಣೆಗೊಂಡ ವಿಚಾರ ಧಾರೆಗಳಿಂದಾಗಿ ವಿಭಾಗಗಳು ಪ್ರಾರಂಭ–ಗೊಂಡು, ಅವುಗಳು ತತ್ತ್ವ ಶಾಸ್ತ್ರೀಯ ಆರು–ಸ್ವರೂಪಗಳಲ್ಲಿ ಸ್ಥಾಪನೆಗೊಳ್ಳುವಲ್ಲಿ ತಮ್ಮ ಸಾರ್ಥಕತೆಯನ್ನು ಕಂಡುಕೊಂಡವು. ಪ್ರತಿಯೊಂದು ವಿಭಾಗವೂ ಸಹಿತ ವೇದಗಳನ್ನು ತಮ್ಮದೇ ದೃಷ್ಟಿಕೋನದಲ್ಲಿ, ಅದೂ ಬಹುತೇಕವಾಗಿ ಸೂಕ್ತವಾಗಿಯೇ ಇರುವಂತೆ ಮಾನ್ಯ ಮಾಡುತ್ತಲೇ, ತಮ್ಮ ತಮ್ಮ ಅಭಿವ್ಯಕ್ತಿಗಳಿಗಾಗಿ, ಅಲ್ಲಿ ಅಂತರ್ಗತವಾಗಿರುವ ಧಾರ್ಮಿಕ ಅಭಿವ್ಯಕ್ತಿಗಳನ್ನು(ವಿಚಾರಗಳನ್ನು) ಆಧಾರ ವಾಕ್ಯಗಳನ್ನಾಗಿಸಿಕೊಂಡಿವೆ. ಅವರು ಎಲ್ಲಿ ಎಲ್ಲಿ ವಿಶಿಷ್ಟವಾಗಿರುವ ನಿಷ್ಕರ್ಷಗಳನ್ನು ರೂಪಿಸುತ್ತಾರೆಯೋ, ಮತ್ತು ಪರಸ್ಪರವಾಗಿರುವಲ್ಲಿಯೂ ನಿರಾಕರಣೆಯನ್ನು ಕಾಣುತ್ತಾ ಹಾಗೂ ತಿರಸ್ಕರಿಸುತ್ತಾ ಸಾಗಿದ್ದರೂ, ಅವರೆಂದಿಗೂ ವೇದಗಳ ಪ್ರಾಮಾಣ್ಯವನ್ನು ಮತ್ತು ಅದರ ಪ್ರಾಧಾನ್ಯತೆಯನ್ನು ಮಾತ್ರ ಕಡೆಗಣಿಸಲು ಸಾಧ್ಯವಾಗಿಲ್ಲ. ಬೌದ್ಧ ಪಂಥದವರೂ ಸಹಿತ, ಅವರು ತಮ್ಮದೇ ಆದ ಪಥವನ್ನು ಆಯ್ಕೆ ಮಾಡಿಕೊಂಡಿದ್ದರೂ, ಅವರಲ್ಲಿಯೇ ಅವರು ಒಂದು ವೇಳೆ ಆತ್ಮವನ್ನು ನಿರಾಕರಿಸುತ್ತಿದ್ದರೂ ಮತ್ತು ಸರ್ವಸ್ವವೂ ಕರ್ಮವನ್ನೇ ಅವಲಂಬಿಸಿದೆ ಎಂದು ಹೇಳುತ್ತಿದ್ದರೂ, ಈ ವೇದಗಳನ್ನೇ ತಮ್ಮ ಪಥಗಳಿಗಾಗಿ ಆಧಾರವಾಗಿಸಿಕೊಂಡಿದ್ದಾರೆ. ಈ ರೀತಿಯ ಪರಿಪಕ್ವವಾಗಿರುವ ವಿಶ್ಲೇಷಣಾ ವಿಧಾನವು ತದನಂತರದಲ್ಲಿ ರೂಪು ತಳೆಯಿತು. ಇದು ಬಹುತೇಕವಾಗಿ ನಿರ್ಬೋಧಾತ್ಮಕವಾಗಿ(ನಿಷ್ಕಪಟವಾಗಿ)ಯೇ ಬೌದ್ಧ ಚಿಂತನಾಕಾರರಿಂದ ಗಾಢ ಪರಿಣಾಮಕಾರಿಯಾಗಿಯೇ ಅನುಷ್ಠಾನಗೊಳಿಸಲ್ಪಟ್ಟಿತು.

ಆದರೆ ಶಂಕರರು ಮಾತ್ರ ಅಂತರ್ಬೋಧಾತ್ಮಕವಾಗಿರುವ ತರ್ಕಪೂರ್ಣತೆ–ಯಿಂದಲೇ, ಪ್ರಖರಪೂರ್ಣವಾಗಿರುವ ಸುಸ್ಪಷ್ಟತೆಯಲ್ಲಿ ಮತ್ತು ಕಟ್ಟುನಿಟ್ಟಾದ ವಿಶ್ಲೇಷಣೆಯಲ್ಲಿ ಈ ತತ್ತ್ವ ಮೀಮಾಂಸೆ(ಆಧ್ಯಾತ್ಮಿಕವಿಜ್ಞಾನ)ಕ್ಕೆ ಸಮರ್ಥಪೂರ್ಣ–ವಾಗಿಯೇ ಅನ್ವಯಿಸಿದ್ದಾರೆ. ಹೀಗಾಗಿ ಭಾರತೀಯ ಚಿಂತನಾ ವಲಯದ ಇತಿಹಾಸದಲ್ಲಿ ಅವರ ಹೆಸರು ಮಹತಿಯಲ್ಲಿಯೇ ಇದೆ. ಶಂಕರರ ಕಾಲದಿಂದ ಇಂದಿನವರೆಗೂ ಈ ತತ್ತ್ವ ಮೀಮಾಂಸೆಯ ಸಂದರ್ಭದಲ್ಲಿ ಸದಾ ಈ ರೀತಿಯ ವಿಶ್ಲೇಷಣಾತ್ಮಕವಾಗಿರುವ ಮತ್ತು ಅಂತರ್ಬೋಧಾತ್ಮಕವಾಗಿರುವ ಮನೋ ಹಂತದಲ್ಲಿಯೇ ಸಾಗುತ್ತಲಿವೆ.

ಈಗಲೂ ಸಹಿತ ಇಲ್ಲಿ ಗಮನಿಸಲೇಬೇಕಾಗಿರುವ ಸಂಗತಿ ಎಂದರೆ, ಯಾವಾಗ ಯಾವಾಗ ಈ ತತ್ತ್ವ ಶಾಸ್ತ್ರಜ್ಞರು ಈ ಪ್ರಾಚೀನ ಸತ್ಯದ(ಋತದ) ಪವಿತ್ರತೆಯನ್ನು(ಔದಾರ್ಯವನ್ನು) ಛಿದ್ರಗೊಳಿಸುತ್ತಾ ಹೋರಾಟದ ಪಂಥಗಳ–ನ್ನಾಗಿಸಿಕೊಳ್ಳುತ್ತಿರುವರೋ, ಅದೇ ಸಮಯದಲ್ಲಿ ಭಾರತೀಯನ ಮನಸ್ಸು ಮಾತ್ರ ಸಮನ್ವಯಪೂರ್ಣವಾಗಿರುವ ಪ್ರವೃತ್ತಿಯಲ್ಲಿಯೆಡೆಗೇ ಅತ್ಯಧಿಕವಾಗಿ ಆಕರ್ಷಣೆಯನ್ನು ಹೊಂದಿದೆ. ಗೀತೆಯನ್ನು ಈ ರೀತಿಯ ಸಮನ್ವಯತೆಯ ಸ್ವರೂಪದಲ್ಲಿಯೇ ಪ್ರತಿಸ್ಪಂದಗೊಳ್ಳುತ್ತಿದೆ ಮತ್ತು ಪುರಾಣಗಳೂ ಸಹಿತ ಚಿರಂತನವಾಗಿ ಇದೇ ರೀತಿಯ ಪ್ರವೃತ್ತಿಯನ್ನೇ ಹೊಂದಿದೆ. ಇದೇ ಮನೋಭಾವದಲ್ಲಿಯೇ ಭಾರತೀಯ ತತ್ತ್ವ ಶಾಸ್ತ್ರೀಯ ಅಧ್ಯಯನದ ಮಾರ್ಗಗಳು ಪ್ರವೇಶವನ್ನು ಒದಗಿಸುತ್ತಿವೆ.

**ಪ್ರೋ. ರಾನಡೆ**ಯವರ ಲೇಖನವು **'ಗ್ರೀಕ್ ಮತ್ತು ಸಂಸ್ಕೃತ'**ದ ವಿಷಯದಿಂದಾಗಿ ನಮ್ಮನ್ನು ಬೇರೊಂದು ಆಯಾಮಕ್ಕೆ, ಅಂದರೆ **'ತುಲನಾತ್ಮಕ ಭಾಷಾ ಶಾಸ್ತ್ರ'**ದ ನೆಲೆಗೆ ಕರೆದೊಯ್ಯುತ್ತಿದೆ. ಇಲ್ಲಿ ಅವರ ಉದ್ದೇಶವೆಂದರೆ ಗ್ರೀಕ್ ಮತ್ತು ಸಂಸ್ಕೃತಗಳೆರಡರ ಮೂಲವು ಸಮಾನವಾಗಿಯೇ ಇದೆ ಎನ್ನುವದನ್ನು ನಿರೂಪಿಸುವ ಅವಕಾಶವನ್ನು ಸಂಕ್ಷಿಪ್ತದಲ್ಲಿ ವಿವರಿಸುವದಾಗಿದೆ. ಇದೊಂದು ಭಾಷಾ ವಿಕಾಸದಲ್ಲಿ, ಇದರ ವ್ಯಾಕರಣ ಸೂತ್ರಗಳ/ಸಂರಚನೆಗಳ ಮತ್ತು ವಾಕ್ಯ–ರಚನಾ–ಸಂಬಂಧೀ ವಿಲಕ್ಷಣ ವಿಶಿಷ್ಟತೆಗಳಿಂದಾಗಿ ಅತ್ಯಂತ ಪ್ರಮುಖವಾಗಿಯೇ ಗುರುತಿಸಬೇಕಾದ ಸಂಗತಿಯಾಗಿದೆ. ಆದರೆ ಇಷ್ಟೊಂದು ಸುವ್ಯಾಪ್ತವಾಗಿರುವ ವಿಷಯಕ್ಕೆ ಅವರು, ತಮ್ಮಷ್ಟಕ್ಕೇ ತಾವೇ ಇಲ್ಲಿ ಅತ್ಯಂತ ಅಲ್ಪ ಪ್ರಮಾಣದ ಅವಕಾಶವನ್ನು ರೂಪಿಸಿಕೊಂಡಿದ್ದಾರೆ. ಆದರೆ ಇದೇ ಚಿಕ್ಕ, ಸೀಮಿತ ವ್ಯಾಪ್ತಿಯಲ್ಲಿಯೇ ತಮ್ಮ ಅಭಿವ್ಯಕ್ತಿಯನ್ನು ಪರಿಪೂರ್ಣತೆಯಲ್ಲಿ ಮಹತಿಯಲ್ಲಿರುವಂತೆ, ಕೆಲವೊಂದು ವಿಷಯಗಳಿಗೆ ಸೂಕ್ಷ್ಮ ಸಂಗತಿಗಳಿಗೆ ತಮ್ಮದೇ ಅಭಿಪ್ರಾಯವನ್ನು ಹೊಂದಿದಂತೆ ಕಂಡರೂ, ಎಲ್ಲವನ್ನೂ ಸೂಕ್ಷ್ಮಾತಿ ಸೂಕ್ಷ್ಮವಾಗಿಯೇ ನಿಖರತೆಯಲ್ಲಿ ಮಂಡಿಸಿದ್ದಾರೆ. ಇಲ್ಲಿ ವಿಷಾದಪೂರ್ಣ ಸಂಗತಿ ಎಂದರೆ, ಅವರು ಗ್ರೀಕ್ ಶಬ್ದಗಳನ್ನು – ರೋಮನ್ ವಿಧಾನದಲ್ಲಿ ಕೊಡುವದರ ಬದಲು ಅವುಗಳದೇ ಸೂಕ್ತ ವಿನ್ಯಾಸದಲ್ಲಿ ಮುದ್ರಣಗೊಳಿಸಿರುವ ಶ್ರೀ ರಾನಡೆಯವರು ಇಲ್ಲಿ ಒಂದು **ಆಸಕ್ತಿಪೂರ್ಣವಾಗಿರುವ ಪ್ರಬಂಧವೊಂದನ್ನು** ಮಂಡಿಸಿದ್ದಾರೆ. ಇದು ಬಹುತೇಕರಿಗೆ ಸುಲಭಗ್ರಾಹ್ಯವಾಗಿರುವದಿಲ್ಲ. ಆದರೆ ಕೆಲವು ಭಾರತೀಯರಿಗಾದರೂ ಒಂದು ಅಚ್ಚರಿಯ ವಿಷಯ ಒದಗಿಸಿದ್ದಾರೆ. ಇಲ್ಲಿ ಅವರ ಯಾವುದೇ ಭಾಷೆಯ ಶಬ್ದಗಳನ್ನು ಅವುಗಳದೇ ಆದ ವಿನ್ಯಾಸದಲ್ಲಿಯೇ ಮುದ್ರಿಸಬೇಕು ಎನ್ನುವ ತತ್ವವನ್ನು ನೀಡಿದ್ದಾರೆ

ಮತ್ತು ಯಾರು ಈ ರೀತಿಯ ತುಲನಾತ್ಮಕ ಭಾಷೆಯನ್ನು ಅಧ್ಯಯನ ಮಾಡಲು ಇಚ್ಛಿಸುತ್ತಾರೆಯೋ, ಅವರು ಈ ರೀತಿಯ ತೊಂದರೆಗಳ(ಸವಾಲುಗಳ)ನ್ನು ಎದುರಿಸುವ, ಕುರಿತು ಅವನಲ್ಲಿಯೇ ಅವನು ಆಯಾ ಭಾಷೆಯ ಮೂಲಾಕ್ಷರಗಳ ಕುರಿತು ಹೆಚ್ಚಿನ ಜ್ಞಾನವನ್ನು ಹೊಂದಬೇಕಾಗಿದೆ. ಇದೊಂದು ಪರಿಪೂರ್ಣತೆಗಾಗಿ ಇರುವ ಸಲಹೆಯಾಗಿದ್ದರೂ, ಭಾರತದಲ್ಲಿ ಮಾತ್ರ ಇದು ಅನ್ವಯಿಸುವಂತೆ ಇಲ್ಲ, ಅಲ್ಲದೇ ಬಹುತೇಕವಾಗಿ ಯುರೋಪಿನ ಅನೇಕ ಭಾಗಗಳಲ್ಲೂ ಸಹಿತ, ಇದು ಹೆಚ್ಚಿನ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಉದಾಹರಣೆಗೆ ಒಂದು ಸಂಗತಿಯನ್ನು ಗಮನಿಸುವದಾದರೆ. ಓರ್ವ ವಿದ್ವಾಂಸನು ಆರ್ಯ ಭಾಷೆಯ ಭಾಷಾ ಶಾಸ್ತ್ರದ ವಿಷಯದಲ್ಲಿ ತನ್ನ ಅಭಿವ್ಯಕ್ತಿಗಳ ಮೂಲಕ ಯಾನ ನಡೆಸಿದ್ದರೆ ಮತ್ತು ಆಯಾ ಭಾಷಾ ವ್ಯವಸ್ಥೆಯಲ್ಲಿ ಆ ಶಬ್ದಗಳ ಮೌಖಿಕ ಸ್ವರೂಪವನ್ನು ಯುರೋಪಿಯನ್ನ ಉಚ್ಚಾರದಲ್ಲಿ ಮತ್ತು ಸಂಸ್ಕೃತದ ಉಚ್ಚಾರದಲ್ಲಿ ಇರುವದರ ಕುರಿತು ಅರಿತುಕೊಂಡಿದ್ದಲ್ಲಿ, ಜೊತೆಗೆ ಇವುಗಳ ಬಗೆಗೆ ಭಾರತೀಯ ಭಾಷೆಗಳಲ್ಲಿ ಇರುವ ಸ್ವರೂಪಗಳ ಬಗೆಗೆ ಅರಿತುಕೊಂಡಿದ್ದಲ್ಲಿ, ಇದೇ ತತ್ವದಲ್ಲಿಯೇ ಒತ್ತಾಯಪೂರ್ವಕವಾಗಿಯೇ ಅಂಟಿಕೊಂಡಲ್ಲಿ, ಆಗ ಇವರು ಲಿಖಿಸಿರುವ ವಿಷಯವನ್ನು ಮುದ್ರಣಗೊಳಿಸುವಲ್ಲಿ, ಕನಿಷ್ಠ ಒಂಬತ್ತು ವಿಧದ ವಿನ್ಯಾಸಗಳನ್ನು ಮುದ್ರಣ ವ್ಯವಸ್ಥೆ ಹೊಂದಬೇಕಾಗುತ್ತದೆ. ಆದರೆ ಯಾವುದೇ ಮುದ್ರಣಾಲಯವೂ ಈ ರೀತಿಯ ಬೇಡಿಕೆಯನ್ನು ಈಡೇರಿಸಲು ಸಶಕ್ತವಾಗಿಲ್ಲ. ಅದೂ ಅಲ್ಲದೇ ಅವರದೇ ಕೆಲವೇ ಕೆಲವು ವಿದ್ವತ್ ವಲಯದ ಸದಸ್ಯರು ಸ್ಪಂದಿಸಿದರೂ ಸಹಿತ, ಅವರೂ ಈ ವೈವಿಧ್ಯತೆಯಿಂದಾಗಿ ದಿಗ್ಭ್ರಮೆಗೊಳ್ಳುವ ಸಂಭವವಿದೆ. ಶ್ರೀ ರಾನಡೆಯವರು ಇಲ್ಲಿ ಕೆಲವು ಜರ್ಮನ್ ಶಬ್ದಗಳನ್ನು ಮತ್ತು ಒಂದು ಜರ್ಮನ್ ವಾಕ್ಯವನ್ನು ನೀಡಿದ್ದಾರೆ. ಆದರೆ ಅಲ್ಲಿರುವ ಮೂಲಾಕ್ಷರಗಳು ಬಯಸುವ ಶುದ್ಧತೆಯ ಸ್ವರೂಪದಲ್ಲಿ ಅಂದರೆ ಅದರ **ಗಾಥಿಕ್ ಸ್ವರೂಪ**ದಲ್ಲಿ ನೀಡಿಲ್ಲ.

ಇಲ್ಲಿರುವ ಲೇಖನದಲ್ಲಿ ಮೂರು ಅಥವ ನಾಲ್ಕು ಹೇಳಿಕೆಗಳಿವೆ, ಇವುಗಳಲ್ಲಿ ಆಕ್ಷೇಪಣೆಗಳನ್ನು ಪರಿಗಣಿಸಿದರೆ, ಭಾಷಾ ಶಾಸ್ತ್ರದಲ್ಲಿ ಅತ್ಯಂತ ಚಿಕ್ಕ ವಿವರಣೆಗಳೂ ಸಹಿತ ಅತ್ಯಂತ ಪ್ರಾಮುಖ್ಯವಾಗಿರುತ್ತವೆ. ಹೀಗಾಗಿ ವಿದ್ವಾಂಸರಾಗಿರುವ ಈ ಲೇಖಕರು, ಇಲ್ಲಿನ ಕೆಲವು ಪ್ರಮುಖ ವಿಷಯಗಳ ಕುರಿತು ನಾನು ಗುರುತಿಸುತ್ತಿರುವ ಸೂಚನೆಗಳ ವಿಷಯದಲ್ಲಿ ಆಕ್ಷೇಪಣೆಯನ್ನು ಕಡೆಗಣಿಸುವದಿಲ್ಲ ಎಂದು ಆಶಿಸುವೆ. ಇಲ್ಲಿ ಒಂದು ವಿಷಯದಲ್ಲಂತೂ ಗಂಭೀರವಾಗಿರುವ ತಪ್ಪನ್ನು ಎಸಗುವ ಮೂಲಕ ಎಡವಿದ್ದಾರೆ, ಈ ತಪ್ಪನ್ನು ಸರಿಪಡಿಸಿಕೊಳ್ಳುವದರ ಮೂಲಕ ಅವರು ಈ ಎರಡೂ

ಭಾಷೆಗಳ ವ್ಯಾಕರಣದ ಮತ್ತು ವಾಕ್ಯ–ರಚನಾ–ಸಂಬಂಧೀ ಅಸ್ಮಿತೆಗಳ ಕುರಿತು ಒಂದು ಆಶ್ಚರ್ಯಪೂರ್ಣವಾದ ಮತ್ತು ಒಂದು ಮಹತ್ವಹೀನವಲ್ಲದ ಉಪಬಂಧ (ನಿಯಮ)ವೊಂದನ್ನು ರೂಪಿಸಬಹುದಾಗಿದೆ.

ಅವರು ಹೇಳುತ್ತಿರುವದೇನೆಂದರೆ, **"ಗ್ರೀಕ್ ಭಾಷೆಯಲ್ಲಿ ದಂತ್ಯಗಳ ಮತ್ತು ತಾಲವ್ಯಗಳ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ ಮತ್ತು ಅವೆರಡೂ ಒಟ್ಟಿಗೇ ಬೆಸುಗೆ ಹೊಂದಿವೆ"**. ಒಂದು ವೇಳೆ ಇದು ಈ ರೀತಿಯಲ್ಲಿ ಇರುವದೇ ಆದಲ್ಲಿ, ಆಗ ಗ್ರೀಕ್ ಭಾಷೆಯು ದಂತ್ಯ ಮತ್ತು ತಾಲವ್ಯಗಳ ಧ್ವನಿಗಳನ್ನು ಹೊಂದಿದ್ದು ಹಾಗು ಅವುಗಳನ್ನು ಅದೇ ಸ್ವಭಾವದಲ್ಲಿಯೇ ಅಭಿವ್ಯಕ್ತಗೊಳಿಸಲಾಗುತ್ತಿದೆ ಎಂದು ತೋರುತ್ತದೆ. ಇದು ಸೂಕ್ತವಾದ ಅಭಿಪ್ರಾಯವೆಂದು ನಾನು ಯೋಚಿಸುವದಿಲ್ಲ. ಈ ರೀತಿಯಲ್ಲಿ ದಂತ್ಯ ಮತ್ತು ತಾಲವ್ಯಗಳ ಹಂತದಲ್ಲಿ ಉಚ್ಚರಿಸಲ್ಪಡುವ ಧ್ವನಿಗಳ ಈ ಸ್ವಭಾವವು ಎಲ್ಲ ಭಾಷೆಗಳಲ್ಲಿಯೂ, ಭಾಷಾ ಶಾಸ್ತ್ರದ ಧ್ವನಿಮಾ ಇತಿಹಾಸದ ಒಂದು ಅಪರೂಪದ ಮತ್ತು ಸರ್ವಾಧಿಕ ಜಿಜ್ಞಾಸೆಯ ವಿಷಯವಾಗಿದೆ, ಜೊತೆಗೆ ಈ ವಿಷಯವಾಗಿ ಗಂಭೀರವಾದ ಚಿಂತನದ ಹಂತದಲ್ಲಿ ತಲಸ್ಪರ್ಶದ ಅಧ್ಯಯನವಾಗಬೇಕಿದೆ.

**ಲ್ಯಾಟಿನ್ ಭಾಷೆ ಮತ್ತು ಸೆಲ್ಟಿಕ್** ಭಾಷೆಗಳು ಕೇವಲ ದಂತ್ಯದ ಉಚ್ಚರಣೆಯನ್ನು ಮಾತ್ರ ಬಳಸಿಕೊಂಡು ತಾಲವ್ಯವನ್ನು ನಿರಾಕರಿಸುತ್ತವೆ. ಆದರೆ ಆಂಗ್ಲ ಮತ್ತು ಇತರ ಭಾಷೆಗಳಲ್ಲಿ ಮಾತ್ರ ತಾಲವ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿವೆ. ಅಪರೂಪಕ್ಕೆ ಒಮ್ಮೊಮ್ಮೆ ಸಂದರ್ಭೋಚಿತವಾಗಿ ದಂತ್ಯಗಳನ್ನು ಬಳಸುತ್ತಿವೆ. ಸಂದರ್ಭಕ್ಕೆ ತಕ್ಕಂತೆ ಈಗಲೂ ಈ ಭಾಷೆಗಳು ದಂತ್ಯ ಸ್ವರೂಪವನ್ನು ಬಳಸುತ್ತಿದ್ದರೂ – ತ್(t), ಥ್(th), ದ್(d)ಗಳನ್ನು ಅನುಕ್ರಮವಾಗಿ ಥ್(with, thin, though)ದಲ್ಲಿ ಉಚ್ಚರಿಸುತ್ತಿರುವಂತೆ ವಿಥ್, ಥಿನ್, ದೋ ಎಂದು ಉಚ್ಚರಿಸಲಾಗುತ್ತಿದೆ – ಈ ಮೂಲಕ ಆಂಗ್ಲ ಭಾಷೆಯ ಶುದ್ಧ–ಲೇಖನ ವಿನ್ಯಾಸದ ಸಲುವಾಗಿ ಅದರ ಒರಟುತನದ ಹಂತದಲ್ಲಿಯೇ ಈ ರೀತಿಯ ಗೊಂದಲಮಯ ಸ್ವರೂಪಗಳನ್ನು/ ಹಂತಗಳನ್ನು ಉದ್ದೇಶಪೂರ್ವಕವಾಗಿಯೇ ಮುಂದುವರೆಸಿಕೊಂಡು ಬಂದಿದೆ. ಆಂಗ್ಲ ವ್ಯಕ್ತಿಯೋರ್ವನು ಭಾರತೀಯ ದಂತವ್ಯಗಳನ್ನು ಉಚ್ಚರಿಸುವಲ್ಲಿ ಎಷ್ಟೊಂದು ತೊಂದರೆ ಪಡುತ್ತಿದ್ದಾನೆ ಎನ್ನುವದನ್ನು ಪ್ರತಿಯೋರ್ವ ಭಾರತೀಯನಿಗೂ ಗೊತ್ತಿದೆ. ಆ ಎಲ್ಲ ದಂತವ್ಯಗಳನ್ನೂ ಒತ್ತಾಯಪೂರ್ವಕವಾಗಿಯೇ ತಾಲವ್ಯಗಳನ್ನಾಗಿಸಿಕೊಂಡು ಉಚ್ಚರಿಸುತ್ತಾನೆ. ಇದಕ್ಕೆ ವಿರುದ್ಧವಾಗಿ, ಫ್ರೆಂಚ್ ವ್ಯಕ್ತಿಯು, ಶುದ್ಧ ಆಂಗ್ಲ ಭಾಷೆಯ ಉಚ್ಚರಣೆಯಲ್ಲಿ ಶಿಕ್ಷಣ ಹೊಂದದಿದ್ದರೂ, ಆಗ ಅವನು ಈ ಇಂಗ್ಲೀಷ್

ತಾಲವ್ಯಗಳನ್ನು ದಂತವ್ಯಗಳನ್ನಾಗಿಸಿಕೊಂಡೇ ಉಚ್ಚರಿಸುತ್ತಾನೆ. ಫೀಸ್ಟ(feast) ಎನ್ನುವ ಇಂಗ್ಲೀಷಿನ ಶಬ್ದವನ್ನು ಫ್ರೆಂಚ್ ವ್ಯಕ್ತಿ ಫೀಸ್ಥ್(feasth), ನಾಟ್(not) ಎನ್ನುವದನ್ನು ನಾಥ್ – ನಾ ಮತ್ತು ನೊ ಮಧ್ಯದ ಧ್ವನಿಯಲ್ಲಿ – (noth) ಎಂದು ಉಚ್ಚರಿಸುತ್ತಾನೆ. ಇದೇ ರೀತಿಯ ವಿಲಕ್ಷಣತೆಯೇ ಶಬ್ದದ ಪ್ರಾದೇಶಿಕ ಉಚ್ಚಾರಣೆಯ ಸ್ವಭಾವವಾಗಿದ್ದು, ಇದನ್ನು ಐರಿಷ್ ವ್ಯಕ್ತಿಯ ಇಂಗ್ಲೀಷಿನ ತಪ್ಪು ಉಚ್ಚಾರಣೆಯಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಐರಿಷ್ ಭಾಷೆಯು ಈ ರೀತಿಯ ಕಠಿಣವಾಗಿರುವ ತಾಲವ್ಯಗಳ ಧ್ವನಿಯನ್ನು ನಿಭಾಯಿಸಲು ಸಮರ್ಥವಾಗಿಲ್ಲ, ಹೀಗಾಗಿ ಪೀಟರ್ ಮತ್ತು ಶೋಲ್ಜರ್ ಎನ್ನುವ ಶಬ್ದಗಳನ್ನು ಸಂಪೂರ್ಣವಾಗಿ ದಂತವ್ಯಗಳನ್ನಾಗಿಸಿ ಪರಿವರ್ತಿಸಿಕೊಳ್ಳುತ್ತದೆ. ಲಂಡನ್ ನಗರದ ರಂಗ ಮಂದಿರದಲ್ಲಿ, ಸ್ಪ್ಯಾನಿಷ ಭಾಷೆಯ ನಟಿಯೋರ್ವಳು ಆಂಗ್ಲ ಭಾಷಾ ನಾಟಕವೊಂದರಲ್ಲಿ ಇದೇ ರೀತಿಯ ವಿಲಕ್ಷಣಮಯ ಉಚ್ಚಾರಣೆ ಮಾಡಿರುವದನ್ನು ನಾನು ನೋಡಿದ್ದೇನೆ. ಈ ರೀತಿಯಲ್ಲಿ ಆಂಗ್ಲ ಭಾಷೆಯ ಕಠಿಣತೆಯಿಂದ ಲ್ಯಾಟಿನ್ನಿನ ಮೃದುಭಾವದ ಧ್ವನಿಗಳಿಗೆ, ಅದರದೇ ಅವಿಚಲನ ರೂಪಾಂತರಣದಿಂದಾಗಿ ಇಲ್ಲೊಂದು ಅಚ್ಚರಿದಾಯಕವಾಗಿರುವ ಪ್ರಭಾವವು ಉತ್ಪತ್ತಿಗೊಳ್ಳುತ್ತಿದೆ, ಅನ್ಯಥಾ ಇದು ಪರಿಪೂರ್ಣವೇ ಆಗಿದೆ.

ಈಗ ಗ್ರೀಕ್ ವಿಷಯವನ್ನು ಗಮನಿಸಿದರೆ ಅದರಲ್ಲೂ ಧ್ವನ್ಯಾತ್ಮಕ ವಿಲಕ್ಷಣದ ಗುಣದಿಂದಾಗಿ, ಇದು **ಲ್ಯಾಟಿನ್–ಸೆಲ್ಟಿಕ್** ಭಾಷಾ ಸಮೂಹಕ್ಕೆ ಸೇರುತ್ತದೆ. ಅದಿಲ್ಲದಿದ್ದಲ್ಲಿ, ಪ್ರಾಚೀನ ಕಾಲದ ಕವಿಗಳು ಮತ್ತು ವಿದ್ವಾಂಸರ ಸೂಕ್ಷ್ಮ ಶ್ರವಣ ಶಕ್ತಿಯಿಂದ ಈ ವ್ಯತ್ಯಾಸವು ನುಣುಚಿಕೊಳ್ಳಲು ತೀವ್ರವಾಗಿ ಅಪ್ಪಳಿಸುವ ರೀತಿಯಲ್ಲಿಯೇ ಇರಬೇಕಾಗಿತ್ತು. ಈ ಕಾರಣದಿಂದಾಗಿ ನನಗಿಲ್ಲಿ ತೋರುತ್ತಿರುವದೇನೆಂದರೆ, ಎರಡು ಭಾಷೆಗಳ (ಸಂಸ್ಕೃತ ಮತ್ತು ಗ್ರೀಕ್) ಮೂಲಾಕ್ಷರಗಳ ಕುರಿತು ತುಲನಾತ್ಮಕವಾದ ಯೋಜನೆಯಲ್ಲಿ, ಸಂಸ್ಕೃತದಲ್ಲಿರುವ ತಾಲವ್ಯಗಳು ಗ್ರೀಕ್ ಭಾಷೆಯಲ್ಲಿ ಇಲ್ಲ ಎನ್ನುವದನ್ನು ಗುರುತಿಸಬೇಕಾಗುತ್ತದೆಯೇ ವಿನಾ ಶ್ರೀ ರಾನಡೆಯವರು ಪ್ರಸ್ತುತಪಡಿಸಿರುವ ರೀತಿಯಲ್ಲಿ ಅಲ್ಲ. ಅದರಲ್ಲೂ ಗ್ರೀಕ್ ಭಾಷೆಯ ತಾಉ(ತೌ), ಥೆಟಾ ಮತ್ತು ಡೆಲ್ಟಾ ವಿಷಯದಲ್ಲಿಯೂ ಇದೇ ರೀತಿಯ ಸಮಾನತೆಯಲ್ಲಿಯೇ ಗಮನಿಸಬೇಕಾಗಿದೆ.

ಪ್ರೊ. ರಾನಡೆಯವರು ತಮ್ಮ ವಿಭಕ್ತಿ ಪ್ರತ್ಯಯಗಳ ತುಲನಾತ್ಮಕವಾದ ವಿಶ್ಲೇಷಣೆಯಲ್ಲಿ ಈ ವಿಷಯದ ಬಗೆಗೆ ಒತ್ತುಕೊಡುತ್ತಾ, ಗ್ರೀಕ್ ಭಾಷೆಯ ಸ್ತ್ರೀಲಿಂಗ ನಾಮಪದಗಳು ಕುರಿತು ಅವೂ ದೀರ್ಘವಾಗಿ – ಅಂದರೆ ಚೌ¯ರಾ¯(cho¯ ra¯)

ಎನ್ನುವದು ಸಂಸ್ಕೃತದ ನಾಮಪದಗಳ ಹಾಗೇ – ಅಂದರೆ 'ಭಾರ್ಯಾ'ದ ಹಾಗೆ, ಮತ್ತು ಗ್ರೀಕ್ ನಾಮಪದಗಳಲ್ಲಿ 'ಇ' ಎನ್ನುವದನ್ನು ದೀರ್ಘ ಸ್ವರದಲ್ಲಿ – ತೀಮೇ ಎನ್ನುವದು ಸಂಸ್ಕೃತದ 'ದಾಸೀ' ಎನ್ನುವಂತೆಯೇ ಸಮಸ್ಪಂದಿಯಾಗಿವೆ. ಇದು ಶುದ್ಧಾಂಗವಾಗಿ ತಪ್ಪು ಅಭಿಪ್ರಾಯವಾಗಿದೆ. ಇಲ್ಲಿ ಲೇಖಕರು ಕುಸಿದಿದ್ದಾರೆ ಎನ್ನಬಹುದು, ಏಕೆಂದರೆ, ಅವರು ಕೇವಲ ಆ್ಯಟಿಕ್ ಭಾಷೆ, ಇದು ಗ್ರೀಕ್ ಭಾಷೆಯ ಪ್ರಾಚೀನ ರೂಪವಾಗಿದ್ದು, ಅಲ್ಲಿ ಪ್ರಾಂತೀಯ ಭಾಷೆಯಾಗಿತ್ತು. ಈ ಆ್ಯಟಿಕ್ ಭಾಷೆಯು ಗ್ರೀಕ್ ಭಾಷೆಯ ಒಂದೇ ಒಂದು ವಿಚಲನೆಯಾಗಿದ್ದ, ಅದನ್ನೇ ಅಧ್ಯಯನ ಮಾಡುವವರಿಗೂ ಸಹಿತ ತಪ್ಪು ಮಾರ್ಗದರ್ಶನವನ್ನು ತೋರುವಂತಿದೆ.

ವಾಸ್ತವದಲ್ಲಿ ಗಮನಿಸಬೇಕಾಗಿರುವದೇನೆಂದರೆ, ಇಲ್ಲಿ 'ಆ' ಮತ್ತೂ 'ಈ' ಇವು ತಮ್ಮ ಮೂಲ ಧ್ವನಿಸ್ವರೂಪದ ಹಾಗೆಯೇ ಕಡ್ಡಾಯವಾಗಿ ಸ್ತ್ರೀಲಿಂಗ ಸೂಚಕವಾಗಿಯೇ "ಆ"ದಲ್ಲಿ ಇದ್ದಂತೆ ಇವೆ. ಡೋರಿಕ್ ಭಾಷೆಯು ಮಾತ್ರ ಈ ಮೂಲ ಸ್ವರೂಪದ "ಆ"ವನ್ನೇ ಪ್ರಾಶಸ್ತ್ಯಪೂರ್ಣವಾಗಿ ಬಳಸುತ್ತಿದೆ. ಆದರೆ 'ಈ' ಉಚ್ಚರಣೆಯನ್ನು 'ಆಯೋನಿಕ್' ಮಾರ್ಪಾಡಿನಲ್ಲಿ ರೂಪಿಸಿಕೊಂಡಿದೆ. ಜೊತೆಗೆ ಇಲ್ಲಿ ಡೋರಿಕ್ ಮತ್ತು ಆಯೋನಿಕ್ ವಲಯಗಳ ಮಧ್ಯದಲ್ಲಿ ಈ ಆ್ಯಟಿಕ್ ಆಗಮಿಸಿ ಒಂದು ಹೊಂದಾಣಿಕೆಯನ್ನು ರೂಪಿಸುತ್ತದೆ. ಆ್ಯಟಿಕ್ ಭಾಷೆಯಲ್ಲಿ ಯಾವಾಗ ಯಾವಾಗ ಸ್ತ್ರೀಲಿಂಗ ವಾಚಕವಾಗಿರುವ 'ಆ' ಇದು ಸ್ವರವೊಂದು ಮೊದಲು ಬಂದಿದ್ದಲ್ಲಿ, ಅದೇ ರೀತಿಯಲ್ಲಿ ಅದು 'ರ್'ದ ಮೊದಲು ಬಂದಿದ್ದಲ್ಲಿಯೂ ಆಗ ಅದು ಬದಲಾಗದೇ ಮೂಲ ಸ್ವರೂಪದಲ್ಲಿಯೇ ಇರುತ್ತದೆ. ಒಂದು ವೇಳೆ ಅದು ವ್ಯಂಜನವೊಂದು ಮೊದಲು ಬಂದಿದ್ದಲ್ಲಿ ಆಗ ಇದು "ಈ" ಎಂದಾಗುತ್ತದೆ. ಉದಾಹರಣೆಗೆ, ಫಿಲಿಯಾ, ಕೋರಾ ದಂತೆ. ಆದರೆ ತೀಮಿ, ಕೋಮೀ ಎನ್ನುವಲ್ಲಿ ಮೊದಲು ವ್ಯಂಜನವು ಬಂದಿರುವ ಕಾರಣ ಆಗ ಅದು ಫಿಲೀ ಎಂದಾಗುತ್ತದೆಯೇ ವಿನಾ ಫಿಲಿಯಾ, ಆಗುವದಿಲ್ಲ. ಡೋರಿಕ್‌ದಲ್ಲಿ ತೀಮಾ ಆಗುತ್ತದೆಯೆ ತೀಮೀ ಆಗುವದಿಲ್ಲ. ಈ ಕೆಲವು ಉದಾಹರಣೆಗಳಲ್ಲಿ ಪ್ರೊ. ರಾನಡೆಯವರು ಈ ಆ್ಯಟಿಕ್ ಭಾಷೆಯ 'ಈ' ಅನ್ನು (ಸಂಸ್ಕೃತದ ಈಕಾರಾಂತ ಸ್ತ್ರೀಲಿಂಗ) 'ಈ' ಜೊತೆಗೆ ತಪ್ಪಾಗಿ ಗುರುತಿಸಿದ್ದಾರೆ.

ಸಂಸ್ಕೃತದಲ್ಲಿ "ಈ" ಸ್ವರಾಂತ್ಯದಲ್ಲಿ ಪೂರ್ಣಗೊಳ್ಳುವ ಅನೇಕ ಉದಾಹರಣೆಗಳು ಖಚಿತವಾಗಿಯೂ ಇವೆ, ಆದರೆ ಇದನ್ನು ಆ್ಯಟಿಕ್ ಭಾಷೆಯಲ್ಲಿ 'ಏ' ರೂಪದಲ್ಲಿ ಬಳಕೆಯಲ್ಲಿದೆ. 'ಚತುರ್ಥೀ' ಎಂದು ಸಂಸ್ಕೃತದಲ್ಲಿ ಉಚ್ಚರಿಸಲ್ಪಟ್ಟರೆ,

ತೆತಾರ್ತೇ (ಟೆಟಾರ್ತೇ) ಎಂದಿದೆ. ಆದರೆ ಇದರ ಸರಳವಾಗಿರುವ ಅರ್ಥವೆಂದರೆ, ಈ ಗ್ರೀಕ್ ಭಾಷೆಯು ಸಂಸ್ಕೃತದ ವ್ಯತಿಕ್ರಮವನ್ನು ನಿರಾಕರಿಸುತ್ತ "ಈ" ಉಚ್ಚರಣೆಯ ರೂಪವನ್ನು ಸರ್ವೇಸಾಮಾನ್ಯವಾಗಿ ಅನ್ವಯಗೊಳ್ಳುತ್ತಿರುವ "ಆ" ಸ್ವರೂಪದಲ್ಲಿ ಬಳಸುತ್ತಿದೆ. ಇದೇ ಭಾವವು ಡೋರಿಕ್ ಭಾಷೆಯಲ್ಲಿಯೂ ಶುದ್ಧ ರೂಪದಲ್ಲಿಯೇ ಬಳಕೆಯಲ್ಲಿದೆ.

ಇನ್ನು ಕಾಲಗಳ ಕುರಿತಾದ ವಿಷಯದ ಬಗೆಗೆ ಶ್ರೀ ರಾನಡೆಯವರು ಜಿಜ್ಞಾಸೆಯ ಹಂತದ ಕುತೂಹಲಪೂರ್ಣವಾದ ಸಮರ್ಥನೆಯೊಂದನ್ನು ರೂಪಿಸುತ್ತ, ಈ ಸಂಸ್ಕೃತದ ನಿಯಮಬದ್ಧತೆಯು, ಬಹುತೇಕವಾಗಿ ಜರ್ಮನ್ ಭಾಷೆಯೊಂದನ್ನು ಉಳಿದು, ಬೇರೆ ಯಾವುದೇ ಭಾಷೆಗಳಿಗೆ ಅನ್ವಯವಾಗುವದಿಲ್ಲ. ಆದರೆ ಜರ್ಮನ್ ಭಾಷೆಯಲ್ಲಿ 'ಕೊಲ್ಲಬೇಕಿತ್ತು' (wurden getodet worden sein) ಎನ್ನುವದು ಸಂಸ್ಕೃತ ಭಾಷೆಯ 'ಅಭವಿಷ್ಯತ್' ಎಂದಾದರೆ ಅದೇ ಫ್ರೆಂಚ್ ನಿಯಮಬದ್ದತೆಯಲ್ಲಿ ಅದು 'auraient 'et'e tu'es ಎಂದೆ 'ಕೊಲ್ಲಲ್ಪಡುತ್ತಿತ್ತು' ಎನ್ನುವ ರೂಪವಿದೆ. ಇದೇ ಆಂಗ್ಲ ಭಾಷೆಯಲ್ಲಿ 'ಕೊಲ್ಲಲಾಗುತ್ತಿತ್ತು' ಎಂದಾಗುತ್ತದೆ. ಹೀಗಾಗಿ ಆಂಗ್ಲ ಭಾಷೆಯಲ್ಲಿ, ಸಮಾಂತರ ಇದು ಸಮಾನವಾಗಿಯೇ ಸಮಾನಾಂತರದ ವಾಕ್ಯ–ರಚನಾ ಹಂತದಲ್ಲಿ ಪರಿಗಣಿಸಲ್ಪಡುತ್ತಿದೆ. ಇಲ್ಲಿ ಜರ್ಮನ್ ಭಾಷೆಯಲ್ಲಿರುವದಕ್ಕೆ ಅಲ್ಪ ಪ್ರಮಾಣದ ವ್ಯತ್ಯಾಸದೊಂದಿಗೆ ಉಳಿದಂತೆ ಒಂದೇ ಅರ್ಥವನ್ನು ಹೊಂದಿರುವ ಭಾವವನ್ನೇ ಹೊಂದಿವೆ. ಅಂತಿಮವಾಗಿ, ಶ್ರೀ ರಾನಡೆಯವರು ನಮಗೆ ತಿಳಿಸುತ್ತಿರುವದೇನೆಂದರೆ. ಸಂಸ್ಕೃತ ಭಾಷೆಯಲ್ಲಿ ಇದ್ದಂತೆ ಗ್ರೀಕ್ ಭಾಷೆಯಲ್ಲಿ ಇಂತಹ ಸಮಾಸಗಳು ಇಲ್ಲ, ಮತ್ತು ಗ್ರೀಕ್ ಭಾಷೆಯಲ್ಲಿ ದ್ವಂದ್ವ, ಕರ್ಮಧಾರಯ ಮತ್ತು ಬಹುವ್ರೀಹಿ ಸಮಾಸಗಳು ಇಲ್ಲ. ಆದರೂ ಅಲ್ಲಿ ವಿಭಕ್ತಿ ಅಥವಾ ಸಂಬಂಧ ಸೂಚಕ ಅವ್ಯಯಗಳೊಡನೆ ಸಮಾಸಗೊಂಡಿರುವ ಕ್ರಿಯಾ ಪದಗಳಿವೆ. ಈ ವಿಷಯದಲ್ಲಿ ಇಷ್ಟೊಂದು ವಿದ್ವತ್ಪೂರ್ಣವಾದ ಇವರು ಅದು ಹೇಗೆ ಈ ರೀತಿಯಲ್ಲಿ ಈ ಎಲ್ಲ ಸಂಗತಿಗಳಿಗೆ ವಿರೋಧವಾಗಿ ಹೇಳಿಕೆಯನ್ನು ರೂಪಿಸಿದ್ದಾರೆ ಎನ್ನುವದು ನನಗಿನ್ನೂ ಅರ್ಥೈಸಿಕೊಳ್ಳಲಾಗುತ್ತಿಲ್ಲ. ಸಮಾಸ ಪದಗಳನ್ನು ರೂಪಿಸುವಲ್ಲಿ ಗ್ರೀಕ್ ಭಾಷೆಯು ಹೊಂದಿರುವ ಶಕ್ತಿಯು, ಆ ಭಾಷೆಯ ಲಕ್ಷಣಗಳಲ್ಲಿ ಅತ್ಯಂತ ಗಮನಾರ್ಹವಾಗಿದೆ. ಜೊತೆಗೆ ಎಂದಿಗೂ ಅಸಂಯಮಿಯಾಗದ ಹಾಗೆ ಸಮೃದ್ಧತೆಯನ್ನು ಹೊಂದಿರುವ ಅದರದೇ ವಿಶಿಷ್ಟತೆಯಿಂದಾಗಿ, ಗ್ರೀಕ್ ಕಾವ್ಯಾತ್ಮಕ

ಶೈಲಿಯಲ್ಲಿ ಪ್ರಚಲಿತದಲ್ಲಿ ಇರುವ ಮಹತ್ತರ ಸೌಂದರ್ಯದ ಹಂತವೂ ಆಗಿದೆ. ಯಾವಾಗ ಈ ಗ್ರೀಕ್ ಸಾಹಿತ್ಯದೊಡನೆ ರೋಮನ್ ವಲಯವು ಸಂಪರ್ಕಕ್ಕೆ ಬಂದಿತೋ, ಅವರು ಹಿರಿಯ ಕವಿಗಳು ಈ ವಿಶೇಷ ಗುಣವನ್ನು ಲ್ಯಾಟಿನ್ ಭಾಷೆಯಲ್ಲಿಯೂ ಪರಿಚಯಿಸಲು ಪ್ರಯತ್ನಿಸಿದರು. ಇದನ್ನೇ ಕವಿ "ವರ್ಜಿಲ್" ಸಾಗರವನ್ನು ವೆಲಿವೋಲಮ್ (ಚಂಚಲ ಸ್ವಭಾವದ/ಸದಾ ಅಲೆಗಳಿಂದ ಚಲಿಸುತ್ತಿರುವ) ಸೇಲ್–ಫ್ಲಾಯಿಂಗ್ (ವಾಯು ಯಾನ) – ಅಂದರೆ ಪಕ್ಷಿಗಳು ರೆಕ್ಕೆಗಳನ್ನು ಬೀಸುತ್ತಾ ಆಕಾಶದಲ್ಲಿ ವಿಹರಿಸುತ್ತಾ ಸಾಗುವ ರೀತಿಯಲ್ಲಿ ಸಾಗುವ ಹಾಯಿ–ಹಡಗುಗಳು ಎಂದು ಪರಿಚಯಿಸುತ್ತಾನೆ. ಆದರೆ ಈ ಬಳಕೆಯೂ ಸಹಿತ ಲ್ಯಾಟಿನ್ ಭಾಷೆಯಲ್ಲಿ ಸಾಧಿತಗೊಳ್ಳಲು ಲ್ಯಾಟಿನ್ ಪ್ರತಿಭೆಗೆ ಅತೀ ವಿರೋಧಾಭಾಸವಾಗಿಯೇ ಇತ್ತು. ಆದರೆ ಗ್ರೀಕ್ ಭಾಷೆಯು ಮಾತ್ರ ತನ್ನ ಕ್ರಿಯಾ ಪದಗಳನ್ನು ವಿಭಕ್ತಿ ಪ್ರತ್ಯಯಗಳ ಅವ್ಯಯಗಳ ಜೊತೆಗೆ ಸಮಾಸಗೊಳಿಸುವದಷ್ಟೇ ಅಲ್ಲದೇ ನಾಮ ಪದಗಳು ಮತ್ತು ಕ್ರಿಯಾ ಪದಗಳನ್ನೂ ಸಹಿತ ಸಂಯೋಜಿಸಿ ಸಮಾಸಗಳನ್ನು ರೂಪಿಸಿಕೊಂಡಿದೆ. ಈ ರೀತಿಯಲ್ಲಿ ನೌ–ಅರ್ಕೋಸ್ – ಟು ಬಿ ಆ್ಯನ್ ಅಡ್ಮಿರಲ್ (ನೌಕಾ ದಳಕ್ಕೆ ಸಂಬಂಧಿಸಿದ ಅಧಿಕಾರಿ) ಎಂದಿದೆ. ಈ ರೀತಿಯ ರೂಪುಗಳಿಗೆ ಮೊದಲು ಇಂತಹ ಜೋಡಣೆಯನ್ನು ಮಾಡಲು ಹಿಂಜರಿಯುವದಿಲ್ಲ – ಉದಾಹರಣೆಗೆ ಪೈಡೋ ಪೊಈಇನ್ ಎಂದರೆ ಮಕ್ಕಳ ಭಾಗ್ಯ, *paido-tribein* ಎಂದರೆ ಮಕ್ಕಳನ್ನು ತರಬೇತುಗೊಳಿಸು ಎಂದು, ಅದೇ ಮೆನ್ನೆಎಸ್ಕಿಐನ *ಎಂದರೆ ತಪ್ಪುಗಳನ್ನು (ಪ್ರಮಾದಗಳನ್ನು ನೆನಪಿಟ್ಟುಕೊ),* ನಿಯೋಟೊ ಟ್ರಫಿಸಾಥೈ ಎಂದರೆ ಒಂದು ಪಕ್ಷಿಯನ್ನು ಯೌವನ ಪೂರ್ಣಗೊಳಿಸು ಎನ್ನುವ ರೂಪಗಳಿವೆ. ಸಾಮಾನ್ಯವಾಗಿರುವ ದ್ವಂದ್ವ–ಸಮಾಸಗಳನ್ನು ಹೊರತುಪಡಿಸಿ ಗ್ರೀಕ್ ಭಾಷೆಯು ಸಂಸ್ಕೃತದಲ್ಲಿರುವ ಎಲ್ಲ ಪ್ರಮುಖ ಸಮಾಸಗಳನ್ನೂ ಪ್ರಸ್ತುತಿಗೊಳಿಸುತ್ತಿದೆ. ಹೀಗಾಗಿಯೇ ಗ್ರೀಕ್ ಭಾಷೆಯಲ್ಲಿ pseudo-martur – ಸುಳ್ಳು ಸಾಕ್ಷಿ, pseudo-christos *ಛದ್ಮ ಕ್ರೈಸ್ತ, chauno-polit¯es*, a silly citizen – ಮೂರ್ಖ ನಾಗರಿಕ ಎನ್ನುವ ರಚನೆಗಳಿವೆ. ಇದರ ಜೊತೆಗೆ andro-phonos ನರಹತ್ಯೆ, paid-oletor ಮತ್ತೊಬ್ಬರ ಶಿಶುಹಂತಕ, ***phusi-zoos*, ಜೀವೋತ್ಪಾದನೆ, *koruth-aiolos*** ಹೆಲ್ಮೆಟ್ ನೋಟ(ದೃಷ್ಟಿ), lao-kataratos ಜನಸಮುದಾಯ ದಿಂದ ಶಾಪಗ್ರಸ್ತ (ತಿರಸ್ಕೃತ), ***thumoleo¯n*** ಸಿಂಹ–ಹೃದಯಿ, ಅದೇ ರೀತಿಯಲ್ಲಿ ಸಂಸ್ಕೃತದ

ಅವ್ಯಯೀ ಭಾವಗಳಿಗೆ ಸಮನಾಗಿರುವ 'ಅನಾಬದೇನಾ ಮತ್ತು ಕತಾಬದೇನ' ಎನ್ನುವ ರೂಪಗಳು ಗ್ರೀಕ್ ಭಾಷೆಯಲ್ಲಿವೆ. ಇದು ತೀಕ್ಷ್ಣ ಭಾವೋದ್ರಿಕ್ತ (*oxu-thumos),* ಹಾಗೂ *oxu-schoinos* ಮೊನಚಾದ ಬಿದಿರುಗಳು(ಜೊಂಡು), polu-teknos ಬಹು–ಸಂತಾನ ಹೊಂದಿದ, ಮತ್ತು *io-stephanos* ನೇರಳೆ(ಪುಷ್ಪ) ಕಿರೀಟದ ಎನ್ನುವ ಸಮಾಸಗಳಿವೆ. ಈ ಭಾಷೆಯು ಸಮಾಸಗಳನ್ನು ಅಂಕರಿಸುತ್ತಲೇ ಇದೆ. ಅವುಗಳಿಂದಲೇ ತುಂಬಿ ತುಳುಕಾಡುತ್ತಿದೆ. ಸಾಮಾನ್ಯವಾಗಿರುವಂತೆ ಎರಡು ಶಬ್ದಗಳ ಮಧ್ಯದಲ್ಲಿ ಸಮಾಸವಾಗುತ್ತದೆ, ಆದರೆ ಇಲ್ಲಿ ಮೂರು ಮೂರು ಶಬ್ದಗಳನ್ನು ಸಂಯೋಜಿಸಿ ಸಮಾಸ ಮಾಡಿರುವ ಉದಾಹರಣೆಗಳಿವೆ. thrice-evil-fated ತ್ರಿದೋಷ ಬಾಧಿತ, ಮತ್ತು ಎರಿಸ್ಟೋಫೇನ್ (ಎನ್ನುವ ಹಾಸ್ಯ ನಾಟಕ ರಚನಾಕಾರ ಕ್ರಿ.ಪೂ 450–385) ಸಹಿತ glischr-antilogexepitriptos and *sphragid-onuch-argo-kom¯et¯es* ಎನ್ನುವ ಸಮಾಸವನ್ನು ರೂಪಿಸುವ ದೋಷವೆಸಗಿದ್ದಾನೆ.

ನಾನು ಈ ವಿಷಯಗಳ ಕುರಿತು ಚಿಂತನ ನಡೆಸಿದ್ದೇನೆ, ಏಕೆಂದರೆ ಪರಿಪಕ್ವತೆಯ ಹಂತದಲ್ಲಿ ಇವು ದೃಷ್ಟಿಯಿಂದ ನುಣುಚಿಕೊಂಡು ಜಿಗಿದು ಬಿಡುತ್ತವೆ. ಇದೊಂದನ್ನು ಹೊರತುಪಡಿಸಿ ಈ ಪ್ರಶಂಸನೀಯ ಪ್ರಬಂಧವು, ನನ್ನ ಆಶಯದಂತೆ, ಅತ್ಯಂತ ಪ್ರಮುಖವಾಗಿರುವ ವಿಷಯದ ಗ್ರಂಥ(ಪ್ರಬಂಧವು)ವಾಗಿ, ಈ ವಿಷಯದಲ್ಲಿ ಕೇವಲ ಪ್ರಾರಂಭಿಕ ರೂಪುರೇಷೆಯನ್ನು ಒದಗಿಸಿದ ಪ್ರಬಂಧದಂತಾಗಿದೆ. ಇವೆಲ್ಲವೂ ಅತ್ಯಂತ ಚಿಕ್ಕ ಚಿಕ್ಕ ಸಂಗತಿಗಳಾಗಿರುವದರಿಂದ, ಹೀಗಾಗಿ ಇಲ್ಲಿ ರೂಪಿಸಲ್ಪಟ್ಟಿರುವ ಪ್ರಬಂಧಧ ಪರಿಪೂರ್ಣತೆಗೆ ಮತ್ತು ಇಲ್ಲಿ ತೋರಿಸಿರುವ ಸೂಕ್ತ ಪ್ರತಿಪಾದನೆಯಿಂದಾಗಿ, ಇವುಗಳನ್ನು ಗಂಭೀರವಾಗಿ ಪರಿಗಣಿಸಿ ತೆಗೆದು ಹಾಕುವಂತಿಲ್ಲ. ಇಲ್ಲಿ ನಿಜವಾಗಿಯೂ ನವೀನವಾಗಿರುವ ಮತ್ತು ಅಷ್ಟೇ ಅಚ್ಚರಿದಾಯಕವಾಗಿರುವ ಸಂಗತಿ ಎಂದರೆ – ಗ್ರೀಕ್ ಮತ್ತು ವೇದಗಳ ಉಚ್ಚಾರಣೆಯಲ್ಲಿರುವ ಸಮಾನಾಂತರದ ವಿಷಯ ಮತ್ತು ಸಂಸ್ಕೃತದ ವರ್ಗೀಕರಣದ ಆಯಾಮದೊಳಗೆ ಗ್ರೀಕ್ ಧಾತು ರೂಪಗಳನ್ನು ಸಂಯೋಜಿಸಿರುವ ಸಂಗತಿ. ಮೇಲ್ನೋಟಕ್ಕೇ ಸಾಮಾನ್ಯವಾಗಿರುವಂತೆ ತೋರುವ ಈ ಸಂಸ್ಕೃತ ಮತ್ತು ಗ್ರೀಕ್ ಮೂಲವು ಸ್ಪಷ್ಟವಾಗಿಯೇ ಕಾಣುತ್ತಿದೆ. ಆದರೆ ಇನ್ನುಳಿದ ಭಾಷಾ ಶಾಸ್ತ್ರಜ್ಞರಂತೆಯೇ ಪ್ರೊ. ರಾನಡೆಯವರೂ ಸಹಿತ, ಅವರೇ ರೂಪಿಸಿದ ವಿಷಯದ ನಿಷ್ಕರ್ಷೆಯಲ್ಲಿ ಮಾತ್ರ ತೀರ ತೀರ ದೂರದಲ್ಲಿದ್ದಾರೆ.

ಭಾರತದ ಆರ್ಯರು ಮತ್ತು ಗ್ರೀಕ್ ಸಮುದಾಯವೆರಡೂ ಒಂದೇ ಮೂಲ(ಕುಲ)ದಿಂದ ಬಂದಿವೆ ಎನ್ನುವ ಅವರ ಅಭಿಪ್ರಾಯವನ್ನು ಮತ್ತು ಅವರು ಸೂಕ್ತವಾಗಿಯೇ ಚಿಂತನ ನಡೆಸಿದ್ದಾರೆ ಎನ್ನುವ ಅವರನ್ನು ನಾನು ಒಪ್ಪುತ್ತೇನೆ. ಆದರೆ ವಿವಾದಗ್ರಸ್ತವಾಗಿರುವ ಭಾಷಾ ಶಾಸ್ತ್ರಜ್ಞರ ಸಂಶೋಧನೆಗಳನ್ನು ಹೊರತು ಪಡಿಸಿಯೂ ಈ ವಿಷಯವನ್ನು ಪುರಾವಿಸಬಹುದು ಎನ್ನುವ ನಿರ್ಣಯಕ್ಕೆ ಅತ್ಯಂತ ತೀವ್ರವಾಗಿ ಸಾಗಿದ್ದಾರೆ. ಸರ್ವೇ ಸಾಮಾನ್ಯವಾಗಿರುವ ಭಾಷಾ ಮೂಲವಾಗಲಿ ಅಥವಾ ಸಮಾನ ಭಾಷೆಯಾಗಲಿ ಇಂತಹ ಜನಾಂಗೀಯ ಮೂಲದ ಕುರಿತು ಪುರಾವೆಗಳನ್ನು ಒದಗಿಸುವದಿಲ್ಲ. ಫ್ರೆಂಚ್ ಸಮುದಾಯ ಮತ್ತು ಸ್ಪ್ಯಾನಿಯಾರ್ಡ್‌ಗಳು ಲ್ಯಾಟಿನ್ ಮೂಲದವರಲ್ಲ ಅಲ್ಲದೇ ಡಬ್ಲಿನ್ನಿನ ಐರಿಷ್ ಹಾಗೂ ಮುನ್ಸ್ಟರ್ ಅಂಗ್ಲೋ–ಸಾಕ್ಸನ್ ಕೂಡ ಅಲ್ಲ. ಭಾಷಾ ಸ್ವರೂಪದಲ್ಲಿ ಇರುವ ಸಮರೂಪತೆಯ ಸಾಧ್ಯತೆಯ ಕಾರಣಗಳಿಂದಾಗಿ, ಈ ಪ್ರಬಂಧಕಾರರು ಇಲ್ಲಿ ಒಂದು ವಿಷಯವನ್ನು– ವಿಜಯವನ್ನು ಹಾಗೂ ಸಾಂಸ್ಕೃತಿಕ ಒತ್ತಾಯದ ಹೇರುವಿಕೆಯ ವಿಷಯವನ್ನು ಲುಪ್ತವಾಗಿಸಿದ್ದಾರೆ. ಇಟಲಿ ದೇಶದ 'ನೃವಂಶ ವಿಜ್ಞಾನಿ' ಸೆರ್ಜಿ(ಎಥ್ನೋಲಾಜಿಸ್ಟ್) ಸಿದ್ಧಾಂತದ ಪ್ರಕಾರ, ಉತ್ತರ ಆಫ್ರಿಕಾ ಹಾಗು ದಕ್ಷಿಣ ಯುರೋಪಕ್ಕೆ ಸಂಬಂಧಿಸಿದ ಮೆಡಿಟೇರಿಯನ್ ಜನಾಂಗದವರೆಲ್ಲರೂ ಒಂದೇ 'ಮೆಡಿಟೇರಿಯನ್' ಪ್ರಾಚೀನ ಕುಲದ ಮೂಲವನ್ನು ಹೊಂದಿದ್ದು, ಅತ್ಯಂತ ಸುಸಂಸಕೃತ ನಾಗರಿಕತೆಯನ್ನು ಹೊಂದಿದ್ದು, ಇದನ್ನು ಆರ್ಯರ ತಮ್ಮ ಅನಾಗರಿಕತೆಯ ರೀತಿಯಲ್ಲಿಯೇ ವಶಪಡಿಸಿಕೊಂಡರು, ಇದೇ 'ಆರ್ಯ ಪ್ರಭಾವದ ಭಾಷೆಗೆ' ಕಾರಣವಾದವು. ಇದೇ ರೀತಿಯ ಸಿದ್ಧಾಂತವನ್ನು, ಇದೀಗ ಭಾರತದಲ್ಲಿಯೂ ಸಹಿತ ಬೇರೆ ಬೇರೆ ಸ್ವರೂಪದಲ್ಲಿ ಮಂಡಿಸಲ್ಪಡುತ್ತಿರುವ ಪ್ರಕಾರ, ನಾಗರಿಕತೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ ದ್ರಾವಿಡ–ಭಾರತವನ್ನು, ಆರ್ಯರು ಇದೇ ರೀತಿಯಲ್ಲಿ ಜಯಿಸಿಕೊಂಡರು ಎನ್ನುವ ವಿಷಯವಿದೆ. ಇದನ್ನು ಖಂಡಿಸುವಲ್ಲಿ ಭಾಷಾ ಶಾಸ್ತ್ರವೂ ಸಹಿತ ಸಮರ್ಥಶೀಲವಾದ ಪರ್ಯಾಪ್ತ ವಾದವನ್ನೂ ಮಂಡಿಸುತ್ತಿಲ್ಲ.

ಭಾಷಾ ಶಾಸ್ತ್ರದ ವಿಷಯದಲ್ಲಿ ಭಾಷಿಕ ಸ್ವರೂಪದ ಅನಭಿಜ್ಞತೆಯಿಂದಾಗಿ ಇರುವ ಉಪೇಕ್ಷೆಯನ್ನು ಕುರಿತು, ಶ್ರೀ ರಾನಡೆಯವರು ಪ್ರತಿಕೂಲ ಇಚ್ಛೆಯಲ್ಲಿ ರೂಪಿಸಿದ್ದಾರೆ. ಆದರೆ ಯುರೋಪ ಮಾತ್ರವೇ ಏಕಾಕಿಯಾಗಿ ಈ ರೀತಿಯ ಅನಭಿಜ್ಞತೆಯಲ್ಲಿ ಈ ತಿರಸ್ಕಾರದ ಸ್ಥಿತಿಯಲ್ಲಿ ಇಲ್ಲ, ಜೊತೆಗೆ ಆ ವಿಜ್ಞಾನಿಗಳು ಹಾಗು ಅಲ್ಲಿ ರೂಪಿತಗೊಂಡ ಈ ರೀತಿಯ ತಿರಸ್ಕಾರದ ಕುರಿತು ಕೆಲವು

ಸಮರ್ಥನೆಗಳು ಇವೆ ಎನ್ನುವದನ್ನು ನಾವು ಮರೆಯುವಂತಿಲ್ಲ. ಈ ವಿಷಯವು ಪ್ರಸಿದ್ಧ ಭಾಷಾ ಶಾಸ್ತ್ರಜ್ಞರಾಗಿರುವ ರೇನನ್ ಅವರು ತಮ್ಮ ಇಳಿ ವಯಸ್ಸಿನಲ್ಲಿ ಬರೆದ "ನಮ್ಮ ಕ್ಷುದ್ರ ಅನುಮಾನಾಧಾರಿತ ವಿಜ್ಞಾನಗಳು" (ಅವರ್ ಪೆಟ್ಟಿ ಕಂಜೆಕ್ಚುರಲ್ ಸಾಯನ್ಸಿಸ್) ಎನ್ನುವ ಅವರಿಗೇ ಪ್ರಿಯವಾದ ಪ್ರಸಿದ್ಧ ಗ್ರಂಥದಲ್ಲಿ 'ಕ್ಷಮೆಯನ್ನು ಕೇಳಿಕೊಂಡಿದ್ದಾರೆ'. ಭಾಷಾ ಶಾಸ್ತ್ರವು ವಿಜ್ಞಾನ ಅಲ್ಲದೇ ಇರಬಹುದು ಆದರೆ, ಇದು ಪ್ರತಿಭೆಗಳ ಮತ್ತು ಪ್ರಶಂಸನೀಯ ಊಹೆಗಳನ್ನು ಹೊಂದಿದೆ. ಇದು ಭಾಷೆಯ ಉಗಮವನ್ನು ಮತ್ತು ಅದರ ವಿಕಾಸವನ್ನು ಅದರದೇ ಆಗಿರುವ ವೈಜ್ಞಾನಿಕ ನಿಯಮಗಳನ್ನು ರೂಪಿಸುವ ಸಲುವಾಗಿ ಯೋಜಿಸಲ್ಪಟ್ಟಿದೆ. ಆದರೆ ಈ ಉದ್ದೇಶದಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ಈ ವಿಫಲತೆಗೆ ಕಾರಣವೆಂದರೆ, ಈ ವಿಷಯಗಳು ಸಂಶೋಧನೆಗೆ ಸಿಗಲಾರದವುಗಳು ಎಂದಲ್ಲ, – ಇಲ್ಲಿ ನಾನು ವಿಶ್ವಾಸದಿಂದ ಕಾಣುತ್ತಿರುವದೇನೆಂದರೆ, **ಇದರ ಪರಿಹಾರದ ಸೂತ್ರವು ಸಂಸ್ಕೃತ ಭಾಷೆಯಲ್ಲಿ ಸದಾ ಸಿದ್ಧವಾಗಿಯೇ ನಮಗೆ ಲಭ್ಯಗೊಳ್ಳುವಂತಿದೆ – ಆದರೆ** ಇದಕ್ಕೆ ಮುಖ್ಯ ಕಾರಣವೆಂದರೆ, ಸುಸ್ಪಷ್ಟವಾಗಿಯೇ ಇರುವ ಸಮಾನಾಂಶಗಳು ಸುಲಭ ಸಾಧ್ಯವಾಗಿರುವ ಅನುಸರಣಗಳನ್ನು ಬಿಟ್ಟು, ಅದರ ಅಸ್ಮಿತೆಗಳನ್ನು ಕೂಲಂಕಷವಾಗಿ, ಸಮಾಧಾನ ಚಿತ್ತದಲ್ಲಿ ಮತ್ತು ಜಾಗರೂಕತೆಯಿಂದ ಪರಿಶೀಲಿಸುವದನ್ನು ಬಿಟ್ಟು, ಪಥವನ್ನು ತೊರೆದು ನಡೆದಂತಿರುವದೇ ಕಾರಣವಾಗಿದೆ. ಇವೆಲ್ಲವೂ ಸಾಮಾನ್ಯವಾಗಿ ಶುದ್ಧ–ವಿಜ್ಞಾನದಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳ್ಳುವ ವಿಧಾನಗಳೇ ಆಗಿವೆ. ವಸ್ತುಗಳ ಬಾಹ್ಯದಲ್ಲಿ ಕಾಣುತ್ತಿರುವ ಸ್ವರೂಪಗಳ ಹಿಂದೆ ಸಾಗಿ ಅದರ ಭ್ರೂಣಾವಸ್ಥೆಯ ಸ್ವರೂಪದ ಸೂಚ್ಯಂಕಗಳನ್ನು ಈ ವಿಜ್ಞಾನದಲ್ಲಿ ರೂಪಿಸಲ್ಪಡುತ್ತವೆ. ಅಲ್ಲಿ ಲಭ್ಯವಾಗುವ ಅತ್ಯಲ್ಪ ಪ್ರಮಾಣದ ಅನಿಶ್ಚಿತತೆಯ ದತ್ತಾಂಶಗಳನ್ನು ಆಧರಿಸಿಯೇ ಅಸಾಧಾರಣವಾಗಿರುವ ಸಂರಚನೆಗಳ ಸಿದ್ಧಾಂತಗಳು ಮಂಡಿಸಲ್ಪಟ್ಟಿವೆ, ಉದಾಹರಣೆಗೆ ಆರ್ಯ ಭಾಷೆಯನ್ನು ಮಾತನಾಡುವವರೆಲ್ಲರೂ ಒಂದೇ ಮೂಲದವರು, ಅವರ ಮೂಲ ನಿವಾಸ, ವಲಸೆಯ ಮೂಲಕ ವೈವಿಧ್ಯತೆಯನ್ನು ರೂಪಿಸಿಕೊಳ್ಳುವ ಮೊದಲು ಇದ್ದ ಸಾಂಸ್ಕೃತಿಕ ಏಕತೆ ಇತ್ಯಾದಿ ಇತ್ಯಾದಿ ವಿಷಯಗಳಲ್ಲಿ ಈ ಸಿದ್ಧಾಂತಗಳು ರೂಪಿತಗೊಂಡಿವೆ. ಈ ರೀತಿಯ ಪ್ರತಿಭಾ ಸಂಪನ್ನತೆಯ ಸುಲಭ ಸಾಧ್ಯತೆಯ ಪ್ರಯತ್ನಗಳು (ಕ್ರೀಡೆಗಳು) ಈಗಲೂ ಸಹಿತ ವಿದ್ವಾಂಸರನ್ನು ವಿಫಲಗೊಳಿಸುತ್ತಿವೆ. ಜೊತೆಗೆ ಈ ಭಾಷಾ ಶಾಸ್ತ್ರಜ್ಞನ ಇಂತಹ ವಿಲಕ್ಷಣತೆಗಳು ಮತ್ತು ಮೇಲ್ತೋರಿಕೆಯ (ಆಡಂಬರದ) ಅಭಿವ್ಯಕ್ತಿಗಳಿಗೆ, ಇಲ್ಲಿ

ಶಾರೀರಿಕ ವಿಜ್ಞಾನಿ ಹೊಂದಿರಬೇಕಾದ ಹಾಗೂ ಅವಶ್ಯವಾಗಿರುವ ಸಹನಶೀಲತೆ, ನಿಖರತೆ ಮತ್ತು ಸಮಾಧಾನಶೀಲತೆಯ ಗುಣಗಳನ್ನು ಹೊಂದಿರಬೇಕು ಎನ್ನುವದನ್ನು ಸಮರ್ಥಿಸುತ್ತಿವೆ. ಹಾಗೆಂದುಕೊಂಡು ಇಲ್ಲಿ ಎಲ್ಲವನ್ನೂ ಸಮರ್ಥಿಸಲೇಬೇಕೆಂದಿಲ್ಲ, ಏಕೆಂದರೆ ಭಾಷಾ ಶಾಸ್ತ್ರವು ಹಲವಾರು ಆಸಕ್ತಿಪೂರ್ಣವಾಗಿರುವ ಮತ್ತು ಉಪಯುಕ್ತವಾಗಿರುವ ಸಂಶೋಧನೆಗಳನ್ನು ರೂಪಿಸಿದೆ, ಹಲವು ಸಾಮಾನ್ಯೀ–ಕರಣಗಳನ್ನೂ ರೂಪಿಸಿ ಸ್ಥಾಪಿಸಿದೆ. ಜೊತೆಗೆ ಇವೆಲ್ಲವುಗಳಿಗಿಂತ ಮಿಗಿಲಾಗಿ, ಅವೈಜ್ಞಾನಿಕ ಸ್ವರೂಪದಲ್ಲಿದೆ ಎನ್ನಲಾದ ಪುರಾತನ ಭಾಷಾ ಶಾಸ್ತ್ರದ ಕುರಿತು ಸಂಪೂರ್ಣವಾಗಿ ವಿಮರ್ಶಾತ್ಮಕವಾದ ಸಮರ್ಥನೀಯವಾಗಿ ಒಟ್ಟಂದದಲ್ಲಿ ರೂಪಿತಗೊಂಡ ವಿಮರ್ಶಾ ವಿಧಾನವನ್ನು ರೂಪಿಸಿರದಿದ್ದರೂ, ಒಂದು ಧ್ವನಿಪೂರ್ಣವಾಗಿರುವ ಪರ್ಯಾಯವೊಂದನ್ನು ಅದ್ಭುತವಾಗಿರುವ ಸಮ್ಮತಿಯೊಂದನ್ನು ನೀಡಿದೆ. ಈ ಮೂಲಕ ಈ ಹಿಂದೆ ಅದು ವ್ಯಾಕರಣದ ನಿಖರತೆಯ ಆಧಾರವನ್ನು ತ್ಯಜಿಸಿರುವ ಕುರಿತು, ಯಾವುದು ಅಸಂಗತವಾಗಿದ್ದರೂ ಅಥವಾ ಅಸಾಧ್ಯವೋ ಅದನ್ನೂ ಮತ್ತು ಏನನ್ನಾದರೂ ಸಾಧಿಸಬಹುದಾಗಿದ್ದ ಹಂತದಲ್ಲಿತ್ತು. ಆದರೆ, ಇಲ್ಲಿ ಈ ರೀತಿಯಲ್ಲಿ ಶಾರೀರಿಕ ವಿಜ್ಞಾನಿಯ ರೀತಿಯಲ್ಲಿಯೇ – ಅವನಿಗೂ ಸಮ್ಮತಿಸುವಂತೆ – ಸಾಗುವಲ್ಲಿ, ಅಥವಾ ಅವನ ಅನುಮೋದನೆಯನ್ನು ಬಯಸುತ್ತಿದ್ದಲ್ಲಿ, ಆಗ ನಮ್ಮಷ್ಟಕ್ಕೆ ನಮ್ಮಲ್ಲಿಯೇ ನಾವು ತುಲನೆಗೊಳ್ಳುವದರ ಸಲುವಾಗಿ, ಹೆಚ್ಚಿನ ಪ್ರಮಾಣದಲ್ಲಿ ಅಧ್ಯಯನಶೀಲರಾಗಬೇಕಿದೆ ಮತ್ತು ಈ ಮೊದಲು ಅಧ್ಯಯನಗೊಳ್ಳದ ವಿಷಯದ ಕುರಿತು ಅರಿತುಕೊಳ್ಳಬೇಕಿದೆ.

ಇಲ್ಲಿ ಮುಖ್ಯವಾಗಿ ಇರುವ ಸಂಗತಿ ಎಂದರೆ, ಮತ್ತು ಆ ಆಶಾಭಾವನೆ ಹೊಂದುವದಾದಲ್ಲಿ, ಯುರೋಪಿನ ವಿಚಾರ ಧಾರೆಗಳಿಗಿಂತ, ಈ ವಿಷದಯ ಕುರಿತು ಹೆಚ್ಚಿನ ಪ್ರಮಾಣದಲ್ಲಿ ಪರಿಚಿತವಿರುವ ಭಾರತೀಯ ಬೌದ್ಧಿಕ ವಲಯದಿಂದ, ಈ ರೀತಿಯಲ್ಲಿ ಮನಸ್ಸಿನ ಅಂತರಂಗದಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾಗಿ ವಸ್ತು–ವಿಷಯಗಳ ನಿಖರತೆಯನ್ನು ವಿಶ್ಲೇಷಿಸುವ ಹಂತದಲ್ಲಿ ನಿರೀಕ್ಷಿಸಬೇಕಾಗಿದೆ. ಆದರೆ ಈ ರೀತಿಯ ಸಮರ್ಥನೆಯನ್ನು ಪಡೆದುಕೊಳ್ಳುವಲ್ಲಿ, ಪಂಡಿತರಿಂದ ನಿರೂಪಿತಗೊಂಡಿರುವ ಏಕಮುಖೀ ಅಭಿಪ್ರಾಯಗಳಿಗೇ ಅಂಟಿಕೊಂಡಿರುವನದನ್ನು ಮೊದಲು ತ್ಯಜಿಸಬೇಕಾಗಿದೆ. ಜೊತೆಗೆ ಸಂಪೂರ್ಣವಾಗಿ ಯುರೋಪಿಯನ್ ವಿದ್ವಾಂಸರ ಅಭಿಪ್ರಾಯಗಳಿಗೆ ನಮ್ಮನ್ನು ಬಂಧಿಸಿಕೊಳ್ಳುವದನ್ನೂ, ಅಥವಾ ಅವರನ್ನು ಮಕ್ಕಿಕಾಮಕ್ಕಿ ಅನುಕರಣೆ ಮಾಡುವದನ್ನು ಸಂಪೂರ್ಣವಾಗಿ ಬಿಡಬೇಕಾಗಿದೆ.

ಏಕೆಂದರೆ ಇದು ಪ್ರತಿಭಾಶೀಲ ಚಿಂತನದ ಹಂತದ ಮನಸ್ಸನ್ನು ತೀವ್ರವಾಗಿಯೇ ಜಗಿತಕ್ಕೆ ಒಳಪಡಿಸುತ್ತದೆ. ಇದರ ಉದಾಹರಣೆಯನ್ನು **ಸಿಥಿಯನ್ (ಕಪ್ಪು ಸಮುದ್ರದ ಉತ್ತರ ಭಾಗದಲ್ಲಿನ ನಿವಾಸಿ)** ಕ್ಷಣಗಳಲ್ಲಿ ಅಥವಾ **ಪರ್ಶಿಯನ್ನ ಬುದ್ಧ**ನ ವಿಷಯದಲ್ಲಿ ಹಾಗೂ ನಿರ್ಣಯಾತ್ಮಕವಾಗಿ ಗುರುತಿಸಬಹುದಾಗಿರುವ ಮುರ್ಗಾಭ್ ಮತ್ತು ಮೌರ್ಯ ವಿಷಯದಲ್ಲಿ, ಮಾಯಾಸುರ ಮತ್ತು ಅಹುರ್–ಮಾಝ್ದಾ ವಿಷಯದಲ್ಲಿ ಕಾಣಬಹುದು. ಇದು ಮಾಯಾ ವಿದ್ಯೆಯಲ್ಲಿ ಬೇರೊಂದು ಪ್ರಾಣಿಯ ಎಲುಬನ್ನು ತೆಗೆದುಕೊಂಡು ಮತ್ತೊಂದು ಪ್ರಾಣಿಯನ್ನು ಮಾಡುವ ಅವಸರವನ್ನು ಹೊಂದಿದಂತಿರುತ್ತದೆ.

ನಾವು ಇದೀಗ ಈ ಪಂಡಿತರು ಪರಿಶ್ರಮದಲ್ಲಿ ರೂಪಿಸಿರುವದನ್ನು, ಶಾರೀರಿಕ ವಿಜ್ಞಾನಿಯು ಸಹನಶೀಲತೆಯ ಪ್ರಜ್ಞಾಪೂರ್ವಕ ಹಂತದಲ್ಲಿ ಕೇವಲ ಮೌಖಿಕ ಸ್ವರೂಪದ ಅತಿರೇಕದಲ್ಲಿ ರೂಪಿಸಿದ ನಿರ್ಣಯಗಳನ್ನು ಮತ್ತು ಮನೋವಿಜ್ಞಾನಿಯ ಸೂಕ್ಷ್ಮತೆಯನ್ನೂ, ಇನ್ನುಳಿದ ವಿಜ್ಞಾನಗಳಲ್ಲಿಯೂ ಇದೇ ತೆರನಾದ ಸಫಲತೆಯನ್ನು ಪಡೆಯು ಉದ್ದೇಶದಿಂದ ಮತ್ತು ಇನ್ನಿತರ ಊಹೆಗಳ ವಲಯದಿಂದ ಮೇಲೆತ್ತುವ ಸಲುವಾಗಿ, ಇವೆಲ್ಲವುಗಳನ್ನೂ ಸಂಯೋಜನೆಗೊಳಿಸಬೇಕಾಗಿದೆ. ಸಂಸ್ಕೃತ ಸಂಶೋಧನೆಯು ನಮಗೆ ಸಂಸ್ಕೃತದ ಪಠ್ಯಗಳನ್ನು ಒದಗಿಸುತ್ತದೆ, ಅದೇ ರೀತಿಯಲ್ಲಿ ಆಂಗ್ಲ ಭಾಷೆಯೂ ಸಹಿತ ಪ್ರಶಂಸನೀಯವಾಗಿರುವ ಉದ್ದೇಶವನ್ನು ಹೊಂದಿ, ಪರಸ್ಪರ ಸಹಾಯಕಾರಿಯಾಗಿರುವಂತೆಯೇ ಇರುವ ಪ್ರಾಚೀನ ಮತ್ತು ಇತ್ತೀಚಿನ ವಿದ್ವತ್–ವಲಯವನ್ನು ಹೊಂದಿದೆ. ಈ ಮೂಲಕ ಭಾಷೆಯ ಭವಿಷ್ಯವನ್ನು ಅದರಲ್ಲೂ ಅದು ವಿದ್ವತ್–ವಲಯದ ಭಾಷೆಯಾಗುವದನ್ನು ಮತ್ತು ಭಾರತೀಯ ಪ್ರಾಚೀನ ಭಾಷೆಗಳನ್ನು ಮಾತನಾಡಲಿಕ್ಕಾಗಲಿ ಅಥವಾ ಬರೆಯಲಿಕ್ಕಾಗಲಿ ಲಭ್ಯವಾಗದಂತಿರುವ ಸ್ಥಿತಿಯನ್ನು ಭಾರತವು ಎದುರಿಸುವಂತಾಗುವದು ಒಳ್ಳೆಯ ಲಕ್ಷಣವಂತೂ ಅಲ್ಲ. ಒಂದು ವೇಳೆ ಇದನ್ನು ಉಳಿಸಿಕೊಂಡು ಹೋಗುವದಾದಲ್ಲಿ, ಈಗ ಪಾಂಡಿತ್ಯಾಭಿಮಾನೀ ಅತಿರೇಕವಾಗಿರುವ ರೂಢಿವಾದದಿಂದಾಗಿ ಅಸಾಧ್ಯವೆನಿಸಿರುವ ಸಮಾಸಗಳ ಮೂಲಕ ಗೊತ್ತು–ಗುರಿ ಇರದ ಕಡೆಗೆ ಚಲಿಸಿ, ಗ್ರಹಣಕ್ಕೆ ಒಳಗಾಗಿ, ಕುಸಿತಗೊಂಡಿರುವ ಸ್ಥಿತಿಯಿಂದ ಹಾಗೂ ಕೇಶಚ್ಛೇದನ ಕೌಶಲ್ಯದ ವಿಸ್ತಾರದ ಅತಿಭಾರದಿಂದ ಮುಕ್ತಗೊಳ್ಳಲು, ಮೊದಲು ಈ ಹಂತದಿಂದ ಹೊರಗೆ ಬರಬೇಕಾಗಿದೆ. ಈ ಸಂಸ್ಕೃತ ಲೇಖನಗಳು ಅದೂ ಈ ಸಂಖ್ಯೆಯಲ್ಲಿ

ಅತ್ಯಂತ ಸಾಧನಾಪೂರ್ವಕವಾಗಿ ಅಭಿವ್ಯಕ್ತಗೊಂಡು ಪ್ರಗಲ್ಭವಾಗಿದೆ. ಆದರೆ ತಪ್ಪು–ವಿನ್ಯಾಸದಲ್ಲಿ ಪ್ರತಿಪಾದಿತವಾಗಿರುವದರಿಂದ ಇವು ತೀರಾ ತೊಂದರೆಗೆ ಒಳಗಾಗಿವೆ.

ಒಂದು ವೇಳೆ ಈ ಸಂಸ್ಕೃತ ಸಂಶೋಧನೆಗಾಗಿ ಸ್ಥಾಪಿಸಲ್ಪಟ್ಟಿರುವ ಈ ಸಂಪರ್ಕವು ಪ್ರಾಚೀನ ಮತ್ತೂ ಪ್ರಾಚೀನವಾಗಿರುವ ವಿಷಯಗಳಿಗೆ, ಅವುಗಳಲ್ಲಿರುವ ಸ್ಥಿತಿಸ್ಥಾಪಕ ಗುಣಗಳಿಗೆ, ಅತ್ಯಂತ ಸಂಯಮಶೀಲ ನಿಖರತೆಯನ್ನು ಗುರುತಿಸುವ ನವೀನ ವಿದ್ವತ್ತನ್ನು ರೂಪಿಸುವಲ್ಲಿ ಮತ್ತು ನೂತನ ಸೂಕ್ಷ್ಮಗ್ರಾಹೀ ವಿಮರ್ಶೆ (ಜಿಜ್ಞಾಸೆ)ಯ ಕುರಿತು ರೂಪಿಸಬೇಕಾಗಿದೆ. ಇವೆರಡಕ್ಕೂ ಲಕ್ಷ್ಯಕೊಡುವದಾದಲ್ಲಿ, ಮತ್ತು ಅದು ಈಗ ಅತ್ಯಾವಶ್ಯವೂ ಆಗಿರುವದನ್ನು ಗಮನಿಸಿ, ಅನುಷ್ಠಾನಗೊಳಿಸುವ ಕ್ರಿಯೆಯು ಇಂದು ಅತ್ಯಂತ ಅವಶ್ಯಕವಾಗಿರುವ ಸೇವೆಯಾಗಿದೆ.

---

(1909 ರ ಅವಧಿಯಲ್ಲಿ ಬಂಗಾಲದಿಂದ ಪ್ರಕಾಶನಗೊಳ್ಳುತ್ತಿದ್ದ 'ಕರ್ಮಯೋಗಿನ್' ಪತ್ರಿಕೆಯಲ್ಲಿ, ಶ್ರೀ ಅರವಿಂದರು ಕೆಲವು ಗ್ರಂಥಗಳ ಹಾಗು ಪ್ರಕಾಶನಗೊಂಡ ನಿಯತಕಾಲಿಕಗಳ ಕುರಿತು ವಿಮರ್ಶಾತ್ಮಕವಾಗಿ/ಪರಿಚಯಿಸುವದರ ಸಲುವಾಗಿ ಸಮೀಕ್ಷಾ ಲೇಖನಗಳನ್ನು ಬರೆದಿದ್ದಾರೆ. "ಆಂಗ್ಲೋ–ಇಂಡಿಯನ್ ತ್ರೈಮಾಸಿಕ" (ದಿ ಆಂಗ್ಲೋ–ಇಂಡಿಯನ್ ಕ್ವಾರ್ಟರ್ಲಿ)ವು ಬೆಂಗಳೂರಿನ 'ಸಂಸ್ಕೃತ ಅಕಾಡೆಮಿ ಆಫ್ ಇಂಡಿಯಾ'ದಿಂದ ಪ್ರಕಾಶನಗೊಳ್ಳುತ್ತಿತ್ತು. ಪಂಡಿತ ಲಿಂಗೇಶ ಮಹಾಭಾಗವತರು ಅದರ ಸಂಪಾದಕರಾಗಿದ್ದರು. ಸದರೀ 'ಸಂಸ್ಕೃತ ಸಂಶೋಧನೆ' ಲೇಖನವು ಶ್ರೀ ಅರವಿಂದರಿಂದ ಕಳಿಸಲ್ಪಟ್ಟಿದ್ದರೂ, ಅನೇಕ ತಿಂಗಳುಗಳ ಕಾಲ ಅದು ಪ್ರಕಟಗೊಂಡಿರಲಿಲ್ಲ. ಲೇಖನಕ್ಕೆ ಪುಟಗಳ ಅವಕಾಶ ಲಭ್ಯವಾಗಿರಲಿಲ್ಲ ಎನ್ನಲಾಗಿದೆ. ತದನಂತರದದಲ್ಲಿ 'ಶ್ರೀ ಅರವಿಂದ ಸಮಗ್ರ ಸಂಪುಟ 1'ರಲ್ಲಿ ಈ ಲೇಖನವನ್ನು ಸಂಪಾದಿಸಲಾಗಿದೆ.)

## ಅವತಾರ

**– ಅನು: ಪುಟ್ಟು ಕುಲಕರ್ಣಿ**

ಅವನೊಂದು ಬೆಳಗು ಅವತರಣಗೊಂಡು ತುಂಬಲೆನೆ ಭೂಮಿ–ಜೀವ,
ಆ ಪರಾತ್ಪರದ ಆ ಗೂಢ–ದ್ವಾರಗಳನೀಗ ತೊರೆದು ಬರುವ,
ಅವನ ಕೃಪೆಗಾಗಿ ಆರ್ತ–ಹೃದಯದಲಿ ಆಕ್ರಂದ ಲೋಕದೆದೆಗೆ,
ಆ ಪರಮ ಸತ್ಯವನು ತರುವ, ಆತ್ಮವದು ಮುಕ್ತಗೊಳುವವರೆಗೆ,

ಆನಂದವದುವು ಆತ್ಮವನು ಶುದ್ಧಗೊಳಿಸಲೆನೆ ತೀರ್ಥ–ಸ್ನಾನ,
ಸಾಮರ್ಥ್ಯವೀಗ ವಿಸ್ತಾರ ಬಾಹು ಸಪ್ರೇಮದಲ್ಲಿ ಲೀನ
ವಿಶ್ವಾಸಕೀಗ ಮರುಜನ್ಮ–ಜ್ಯೋತಿ–ಕಾಂತಿಯಲಿ ಬೆಳಗುಗೊಳಿಸಿ
ನಮ್ಮೊಳಗೆ ನಾವು ನಿರ್ಭರತೆಯಲ್ಲಿ ಸ್ಪಂದಿಸಲು ಈಗ ಚಲಿಸಿ,

ನಮ್ಮೆದೆಯ ಕ್ರಂದಕವನೀಗ ಸ್ಪಂದಗೊಂಡಿರಲು ಖಚಿತದಲ್ಲಿ
ಓ, ಒಂದು ದಿನದಿ ನಿಶ್ಚಿತದಿ ಬಂದು ಅನುಬಂಧವಿಡುವನಿಲ್ಲಿ
ಆ ಒಂದು ದಿನದಿ ಬಂಧುರವ ತಂದು ಸ್ವಚ್ಛಂದ ಛಂದದಲ್ಲಿ
ನಮ್ಮ ಜೀವನಕೆ ನಿತ್ಯ–ನೂತನದ ಸೃಷ್ಟಿಯನು ಕೊಡುವನಿಲ್ಲಿ

ಜೊತೆಜೊತೆಗೆ ಇದೋ ಮಾಯಕದ–ಮಂತ್ರ–ಸೂತ್ರವನು ಪಾತ್ರಗೊಳಿಸಿ
ಸ್ವರಪೂರ್ಣದೊಳಗೆ ಪರಮಾತಿಪರಮ ಶಾಂತಿಯನು ವ್ಯಾಪ್ತಗೊಳಿಸಿ
ಜೊತೆಗಿದೋ ಸಿದ್ಧಿ–ಪರಿಪೂರ್ಣಕಾಗಿ ಕಾರಣವ ಕಾರ್ಯಕಿಳಿಸಿ
ಈ ಜಗದ ಸೃಷ್ಟಿ–ಯೋಜನೆಯ ದೃಷ್ಟಿ ಸಾಫಲ್ಯ ಪೂರ್ಣವಿರಿಸಿ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 200)**

## ಓಂಕಾರದಲ್ಲಿ ತಾ ಪ್ರತಿಮೆಗೊಂಡು ಸಮ್ಮತಿಯು ಬೃಹದ್–ಭಾಗಿ

**– ಅನು: ಪುಟ್ಟು ಕುಲಕರ್ಣಿ**

ಅಕ್ಷರದ–ಜ್ಯೋತಿ–ನಕ್ಷತ್ರ–ಗಡಣಕವನ ಸಂಕಲ್ಪಕಾಗಿ
ನೀ ಏನಗೈದೆ ತ್ವರಿತದಲಿ ಇಂತು ಅವನ ಆ ಉದ್ದೇಶಕಾಗಿ?
ನುಣುನುಣುಚಿಕೊಳುವ ಕರ್ಮವದು ತರದು ಎಂದಿಗೂ ವಿಜಯ–ನಿಕಟ
ಜೊತೆಗಿದೋ ದೂರ ಸಂಮಾನವಿಡುವ ಭಾವಾಧಿಪತ್ಯ ಮುಕುಟ!

ಆ ಮೂಲ ನೆಲೆಯ ಅಜ್ಞಾತದೆದೆಯ ಸೆಲೆಯಿಂದ  ಉದಿತಗೊಂಡು
ಕಾರ್ಯಗೈಯಲೆನೆ ಇನಿತಿದೋ ಈಗ ನಿನ್ನೆಡೆಗೆ ಗಮಿಸಿ ಬಂದು,
ಆದರೂ ಸಹಿತ  ಏನೆನಿತು ಕೂಡ ಪರಿಪೂರ್ಣಗೊಳದೆ ಉಳಿದು
ಅದಕೀಗ ಲೋಕ ತಾ ಮಾತ್ರ ಸತತ ತಂತಾನೆ ಮುಂದುವರೆದು

ಆದರೆಲ್ಲಹುದು ಆ ವಿಶ್ವಪ್ರೇಮಿಯಾ ತಜ್ಜನಿತದಾತ್ಮದಿಚ್ಛೆ
ಅನಂತಾನಂತ ಸಮ್ಮತಿಯ ಶಾಂತ ಸುವ್ಯಾಪ್ತ ಸ್ಪಂದದಿಚ್ಛೆ,
ಮತ್ತಿದೋ ಅಲ್ಲಿ ಅಮೃತತ್ವ ನಿತ್ಯ ಆ ಗುಹ್ಯ–ಹೃದಯದಲ್ಲಿ
ಸೃಷ್ಟಾರ–ಪೂರ್ಣ–ಅಗ್ನಿಗೀಗಿದೋ ಮಂತ್ರದಾ ಪಠನದಲ್ಲಿ

ಓಂಕಾರದಲ್ಲಿ ತಾ ಪ್ರತಿಮೆಗೊಂಡು ಸಮ್ಮತಿಯು ಬೃಹದ್–ಭಾಗಿ
ಘನಶಾಂತ ಮತ್ತೆ ಭಾವಮಗ್ನತೆಯು ಮಧ್ಯದಲಿ ಸೇತುವಾಗಿ,

ವೈಭವೋಪೇತ ಪ್ರತಿಶಕ್ತಿತೇಜ ತಾನುಕ್ಕಿ ಉಕ್ಕಿ ಬಂದು
ಆ ಕಕ್ಷೆಯಲ್ಲು ತಾನಿಳಿದು ಇಂದು ಮುತ್ತಿಡುತ ಮುದದಿ ನಿಂದು
ಸರ್ವ ರಕ್ಷಣೆಗೆ ಸದಾ ಮುದಹಸಿತ ಇದು ಸ್ವರ್ಣಶಿಖರ ಮಾಲೆ,
ಇದು ತಾನೆ ಈಗ ವಸ್ತು–ವಿಷಯಗಳ ಗರಿಮೆಯಾ ಸ್ವರ್ಣ–ಲೀಲೆ?

ಜೀವ–ಜೀವನದ ಆ ಗುಹ್ಯ–ಗೂಢದುದ್ಗಮದ ತಾಣದೊಳಗೆ
ಇದು ನಿಯತಿ ಸಹಜ  ಇದು ಋತದ ಓಜ ಚೈತನ್ಯದಾತ್ಮದೊಳಗೆ

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 3 ರೇಣು 2 ಪುಟ 310–11)**

## ಕಾಲದಾರ್ಣವದ ತೆರೆತೆರೆಯ ಮೇಲೆ ಇವನೀಗ ತೇಲಿ ತೇಲಿ

**– ಅನು: ಪುಟ್ಟು ಕುಲಕರ್ಣಿ**

ಕಾಲದಾರ್ಣವದ ತೆರೆತೆರೆಯ ಮೇಲೆ ಇವನೀಗ ತೇಲಿ ತೇಲಿ
ನಾವಿಕನ ತೆರದಿ ನವದ್ವೀಪವರಸಿ ಬೆಳಕಿನೆಡೆ ಸಾಗುತಲ್ಲಿ
ಜಗದ ಭೌತಿಕದ ತತ್ತ್ವಗಳ ಶೋಧ ಬಲು ಮಂದ್ರ–ಮಂದ್ರದಲ್ಲಿ
ಅತಿಸೂಕ್ಷ್ಮ ರೂಪ ಸಶರೀರ ದೃಷ್ಟಿ–ಜೀವನಕೆ ಇಳಿದು ಇಲ್ಲಿ

ಅವನದೇ ಆತ್ಮದಾಖಾತ ಶ್ರೇಣಿಗಳ ಸೃಷ್ಟಿ ಹಂತದೊಳಗೆ
ಅವನ ಕಲೆಗಳನು ಅವನೀಗ ಅರಿತ ಅತಿಸೂಕ್ಷ್ಮ ರೂಪದೊಳಗೆ
ಆ ಅನಂತ್ಯಗಳ ಲಂಬಸೂತ್ರವನು ಸಾಹಸದಿ ತೆಗೆವ ಕೊನೆಗೆ
ನಿತ್ಯತ್ವದುದಧಿಗಳ ದಾಟಿ–ದಾಟಿ ಜಲಯಾತ್ರೆಯೊಳಗೆ ಹೀಗೆ

ಅವನ ಈ ಲೋಕ–ಲೋಕಗಳ ಶೋಧ ಸಾಹಸದ ಪ್ರಥಮ ಹುಟ್ಟು
ಪರಿಪಕ್ವಗೊಳಲು ಹೊರಟಿರುವ ಮಿಡಿತ, ತೆರೆಗಿಳಿವ ಇದನು ಇಟ್ಟು
ಅವನ ಆ ಪರಮದೇವನಾ ಬಲದ ಬಗೆಗೇನು ಅರಿಯದಂತೆ
ಅಜ್ಞಾನದಲ್ಲಿ ಅವನನ್ನು ಹಿಡಿದು ಬಿಗಿಭಾವ–ಭ್ರಾಂತಿಯಂತೆ,

ಬೃಹತ್–ಸಾಗರದ ಆದ್ಯಂತ ಅರಸಿ ವಿಸ್ತಾರ ಅಲೆಯು ಸಾಗಿ
ಬೃಹನ್ಮಂಡಲದ ತಮದ ಮಧ್ಯದಲು ಮಿನುಗುತಿಹ ಜ್ಯೋತಿಯಾಗಿ
ದಟ್ಟಡಿಯಲಿರುವ ಪುಕ್ಕುಲತೆಯಲ್ಲಿ ತಡವರಿಸಿ ಹೆಜ್ಜೆಯಾಗಿ
ಅವನದೇ ಭೂಮ–ವಿನ್ಯಾಸ ತಾನು ದೀಕ್ಷಿತದಿ ಭೀರುವಾಗಿ.

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ರೇಣು 4 ಪುಟ 69)**



ಫೋಟೊ: ಇಮೇಜಿಂಗ್ ಸಾವಿತ್ರಿ

ಕಾಲದಾರ್ಣವದ ತೆರೆತೆರೆಯ ಮೇಲೆ ಇವನೀಗ ತೇಲಿ ತೇಲಿ

**– ಪುಟ್ಟು ಕುಲಕರ್ಣಿ**

**(ಪುಟ 76)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.
ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; 11 ಶಾಶ್ವತದ ಬೆಳಗು ಪುಟ 708/9)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.